

ಕರ್ನಾಟಕ ಸರ್ಕಾರ

# ತುಳ್ಳಿ ನಾಂಬಿ

ಪಿ.ಜಿ. ಅಂಬೇಕಲ್

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ

# ತಬ್ಬಿ ಮುಂಜ

ಪಿ.ಜಿ. ಅಂಬೆಕಲ್

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ.
ಮಡಿಕೇರಿ, ಕೊಡಗು ಜಿಲ್ಲೆ - 571 201

**'THABLI MANGHA'** a collection of short stories in Arebhase language written by P.G. Ambekal, Vishwas Dafodils, No. S-203, Ramachandrapura, Jalahalli, Bengalore, Published by 'Karnataka Arebhase Samskrithi Mathu Sahitya Academy.

ಪ್ರಕಟಣೆ **: 2019**

ಪ್ರತಿಗಳು **: 500**

**ಬೆಲೆ : ರೂ.** /- 80/-

Price : Rs. 80/-

**ಪುಟಗಳು :** 104

® ಎಲ್ಲಾ ಹಕ್ಕನ್ನು ಕಾಯ್ದಿರಿಸಲಾಗಿದೆ. All Rights Reserved.

ಸಲಹಾ ಸಮಿತಿ :

**ಶ್ರೀ ಎ.ಕೆ. ಹಿಮಕರ**

**ಶ್ರೀ ಪರಷುರಾಮ ಚಿಲ್ತಡ್ಕ**

**ಶ್ರೀಮತಿ ತಿರುಮಲೇಶ್ವರಿ**

**ಶ್ರೀಮತಿ ಶ್ವೇತಾ ಮಡಪ್ಪಾಡಿ**

ಪ್ರಕಾಶಕರು : **ರಿಜಿಸ್ಟ್ರಾರ್**

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ.

**ಪುಸ್ತಕ ದೊರೆಯುವ ಸ್ಥಳ :**

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ,
ಕಾಫಿ ಕೃಪ ಬಿಲ್ಡಿಂಗ್, ಮಹಾತ್ಮ ಗಾಂಧಿ ರಸ್ತೆ, ಮಡಿಕೇರಿ.
ದೂ. : 08272–223055

ಮುಖಪುಟ ವಿನ್ಯಾಸ : **ಎ.ಕೆ. ಹಿಮಕರ**

ಮುದ್ರಣ :

ಶ್ರೀ ಕೃಷ್ಣ ಕಂಪ್ಯೂಟರ್ಸ್ & ಪ್ರಿಂಟರ್ಸ್,
ಮಡಿಕೇರಿ, ಕೊಡಗು
Ph : 08272-224919, 9448135592

# ಅಧ್ಯಕ್ಷರ ಮಾತ್

2019ರ ಮಾರ್ಚ್ 2ನೇ ತಾರೀಕ್‌ನಂದ್ ಅರೆಬಾಸೆಲಿನ ಸೂರೂನ ಸಾಹಿತ್ಯ ಸಮ್ಮೇಳನ ನಡ್ದದೆ. ಸಾಹಿತ್ಯ ಸಮ್ಮೇಳನಂತೇಳಿರೆ ಸಾಹಿತ್ಯ ಪುಸ್ತಕಗಳ ಹಬ್ಬ. ನಮ್ಮ ಕರ್ನಾಟಕ ಅರೆಬಾಸೆ ಸಂಸ್ಕೃತಿ ಮತ್ತೆ ಸಾಹಿತ್ಯ ಅಕಾಡೆಮಿ ಸದಸ್ಯರಾದ ಎ.ಕೆ. ಹಿಮಕರ ಅವರ ಸಂಚಾಲಕತ್ವಲಿ ಈಗಾಗ್ಲೆ ಮೂರು ಪುಸ್ತಕ ಪ್ರಕಟಣೆ ಮಾಡಿಟು. ಇದೀಗ ಸಮ್ಮೇಳನದ ದಿನದಂದ್ ಒಮ್ಮೆಲೇ ಏಳ್ ಪುಸ್ತಕನ ಪ್ರಕಟಣೆ ಮಾಡಿಕೆ ಎಲ್ಲಾ ಪೂರ್ವ ತಯಾರಿ ನಡೆಸ್ತಾ ಒಳೊ. ಪುಸ್ತಕ ಅರೆಬಾಸೆನ ಜ್ಞಾನ ಭಂಡಾರ. ಪುಸ್ತಕನ ಎಲ್ಲೊವೂ ತಕಂಡ್‌ಹೋಗಿ ಮನೆಗಳ್ಲಿ ಇಸಿಕಂಡ್ ಓದೊಕು. ನಮ್ಮ ಬಾಸೆ ಒಳ್ಯೊಕಾದರೆ ಸಾಹಿತ್ಯ ರಚನೆ ಮಾಡ್ದು, ಅದರ ಅಧ್ಯಯನ, ಸಂಶೋಧನೆ ಮಾಡ್ದೇ ಮುಖ್ಯ. ಬಾಸೆ ನಾಶ ಆದರೆ, ಸಂಸ್ಕೃತಿ ನಾಶ ಆದೆ. ಸಂಸ್ಕೃತಿ ನಾಶ ಆದರೆ ನಮ್ಮ ಜೀವ ಶಕ್ತಿನೇ ಇಲ್ಲದಾದೆ. ಮನುಷ್ಯರ್ ಸಂಸ್ಕೃತಿ ಹೀನರಾದವೆ. ಹಾಂಗಾಗಿ ನಮ್ಮ ಅಕಾಡೆಮಿ ಅರೆಬಾಸೆ ಸಂಸ್ಕೃತಿನ ಮತ್ತೆ ಜೀವಮಾಡ್ವ ಕೆಲ್ಸಲಿ ದೊಡ್ಡ ಹೋರಾಟನ ಮಾಡ್ತಾ ಉಟ್ಟು.

ನಾವು ಈ ವರ್ಸ ಸುಳ್ಯ, ಮಡಿಕೇರಿ, ದೇವಸ್ತೂರು, ಪುತ್ತೂರು, ಜಾಲ್ಸೂರು, ಸುಬ್ರಹ್ಮಣ್ಯ, ದುಗಲಡ್ಕ, ಹಾಲೆಮಜಲ್, ಕೊಲ್ಲಮೊಗ್ರಲಿ ಬೇರೆ ಬೇರೆ ರೀತಿನ ಕಾರ್‍ಯಕ್ರಮ ಮಾಡ್ತಾ ಬಂದೊಳೊ. ಅರೆಬಾಸೆ, ಲಿಪಿ, ಕೋಡಿ ಸಾಹಿತ್ಯಾ ವಿಚಾರ ಸಂಕಿರಣ, ಆಟಿಕೂಟ, ಸಿದ್ದವೇಶ, ಅರೆಬಾಸೆ ಹಾಡ್, ಸಂಗೀತ, ರಸಪ್ರಶ್ನೆ, ಹೀಂಗೆ ಹತ್ತಾರ್ ವಿಚಾರಗಳ ಕಾರ್ಯಕ್ರಮ ನಡ್ದುಟು. ನಾವು ಅರೆಬಾಸೆ ಅಧ್ಯಯನಕ್ಕೆ ಒತ್ತು ಕೊಡುವ ಉದ್ದೇಶಲಿ ಈಗಾಗ್ಲೆ ಹತ್ ಫೆಲೋಶಿಪ್ ಕೊಟ್ಟೊಳೊ. 2019ರ್‌ಲಿ ಇನ್ನೂ ಹತ್ ಜನಕ್ಕೆ ಅಧ್ಯಯನಕ್ಕೆ ಅವಕಾಶ ಮಾಡಿಕೊಟ್ಟಿತ್.

ಇಂದ್ ನಾವು ದೊಡ್ಡ ಮಟ್ಟದ ಸಾಹಿತ್ಯ ಸಮ್ಮೇಳನ ಮಾಡ್ತಾ ಒಳೊ. ಈ ಸಮ್ಮೇಳನ ಇತಿಹಾಸಲಿ ಒಂದು ಮೈಲ್‌ಕಲ್ಲ್. ಸಮ್ಮೇಳನಲಿ ನಮ್ಮ ಅರೆಬಾಸೆನ ಸಂವಿಧಾನದ 8ನೇ ಪರಿಚ್ಛೇದಕ್ಕೆ ಸೇರ್‍ಸೊಕೂಂತ ಮತ್ತೆ ನಮ್ಮ ಸಮಾಜನ ಭಾಷಾ ಅಲ್ಪಸಂಖ್ಯಾತರ್‌ಂತ ಸರಕಾರ ಘೋಷಣೆ ಮಾಡೊಕೂಂತ ನಮ್ಮ ಬೇಡಿಕೆನ ಮುಂದೆ ಇಸ್ಯೊಳೊ. ಇದಕ್ಕೆ ಈ ಸಮ್ಮೇಳನ ಸಾಕ್ಷಿ. ಪ್ರೀತಿಸುವ ಎಲ್ಲಾ ಜಾತಿ ಜನಾಂಗದವು ಮತ್ತೆ ಅವರ ಮನೆಮಾತಾಗಿ ಇಸಿಕಂಡ್ ಕಾಪಾಡ್ತಾ

ಬಂದ ಜನ ಸಮುದಾಯ ಕುಶಿಪಡೊಕಾದ ಸಂಗತಿ. ಅದ್ ಇಂದ್ ಆವುಟು, ಆಗದೇ ಹೋಗಿದ್ರೆ ಬಹುಷ ಮುಂದೆನೂ ಆವ ಸಾಧ್ಯ ಇಲ್ಲೆ. ಯಾಕೆಂತೇಳಿರೆ ನಮ್ಮ ಮಕ್ಕ ಡಾಕ್ಟ್ರ ಇಂಜಿನಿಯರ್ ಆಕೆ ಒದ್ದಾಟ, ಗುದ್ದಾಟ ನಡ್ತಿದೆ ಹೊರತು ಒಬ್ಬ ಭಾಷಾ ವಿಜ್ಞಾನಿ ಆಕೊಂತ ಕನ್ಸ್ ಕಾಣ್ತಾನೂ ಇಲ್ಲೇಂತೇಳ್ದರ ಒಪ್ಪಿಕಣಕು. ಸಾರಾಂಶಲಿ ಹೇಳ್ಡಾದರೆ ಅರೆಬಾಸೆಲಿ ವ್ಯಾಕರಣ ಪಾಂಡಿತ್ಯ ಮತ್ತು ಭಾಷಾ ವಿಜ್ಞಾನ ಮುಂದೆ ಬೆಳ್ಸುವ ಜನರ ತಯಾರ್ ಮಾಡೊಕು. ಆಗ ಮಾತ್ರ ಬಾಸೆ ಬೆಳ್ದದೆ, ಅಭಿವೃದ್ಧಿ ಆದೆ. ಕೋಡಿಯವು ಗಟ್ಟಿನ ಒಂದು ತಳಕಟ್ಟ್ ಹಾಕಿ ಕೊಟ್ಟೊಳೊ. ಅದೇ ಈ ಪುಸ್ತಕ.

ಈ ಪುಸ್ತಕನ ಅವರ ಅನಾರೋಗ್ಯದ ನೊಡುಲಿನೂ ತುಂಬಾ ಉತ್ಸಾಹಲಿ ಬರ್ದದರ ನಾ ಕಂಡೊಳೆ. ಈ ಬಾಸೆನ ಮಾತಾಡುವವನಾಗಿ ನಾ ಅಭಿನಂದನೆ ಹೇಳಿನೆ. ಇದೊಂದು ಸಾರ್ವಕಾಲಿಕ ಸಾಧನೆಂತೇಳುದು ನನ್ನ ಭಾವನೆ.

ಸುಳ್ಯ
2019ರ ಮಾರ್ಚ್ 2

ಪಿ.ಸಿ. ಜಯರಾಮ
ಅಧ್ಯಕ್ಷರ್

# ಸಂಚಾಲಕರ ಮಾತ್

ಪುಟ್ಟಣ್ಣ ಗೌಡ ಅಂಬೆಕಲ್ ಅಥವಾ ಪಿ.ಜಿ. ಅಂಬೆಕಲ್ ನನ್ನ ಎಳೆಪ್ರಾಯದ ನೆನ್ಪು. ನಾ ಇನ್ನೂ ಒಂದ್ನೆ ಕ್ಲಾಸ್‌ಲಿ ಇರುವ ಕಾಲ. ಸುಳ್ಯ ತಾಲೂಕಿನ ಪೈಲಾರ್ ಸಾಲೆಲಿ 'ಬರವುದಾಯೆ'ಂತೇಳುವ ತುಳು ನಾಟಕ ಹೇಳಿಕೊಡಿಕೆ ಬಂದ ಇದೇ ಪಿ.ಜಿ. ಅಂಬೆಕಲ್ ಪೊರ್ಲುನ ಹೈದ. ಆ ಕಾಲದ ಅವರ ಚುರುಕುತನ, ನೆಗೆ, ಪೊರ್ಲುನ ಮಾತ್‌ಗೆ ನಾ ಆಕರ್ಷಣೆಗೆ ಒಳಗಾದ ಕಾರಣ ಅದ್ ಸುಮಾರ್ 55 ವರ್ಷ ಮಾಸದೆ ಇಲ್ಲೆ. ಆದರೆ ಅಕಾಡೆಮಿನ ಮೂರು ತಿಂಗಳ ಪತ್ರಿಕೆ ಹಿಂಗಾರಲಿ ನಾ ಓದಿದ ಅವರ ಕತೆನ ಒಟ್ಟಿಗೆ ಅವರ ಫೋನ್ ನಂಬರ್ ಇದ್ದ ಕಾರಣ ಓದಿ ಮುಗ್ಸಿದಷ್ಟೆ ಸ್ಪೀಡ್‌ಲಿ ಅವುಕ್ಕೆ ಫೋನ್ ಮಾಡ್ದೆ. ಇದ್ ಮೊನ್ನೆ ಮೊನ್ನೆ ನಡ್ದ ಸಂಗತಿ. ಇವು ಈಗ ದೀರ್ಘ ಕಾಲದ ಶಿಕ್ಷಕ ವೃತ್ತಿ ಮುಗ್ಸಿ ಪುಳ್ಳಿಕಳೊಟ್ಟಿಗೆ ವಿಶ್ರಾಂತ ಜೀವನಲಿ ಒಳೊ. ಅವುಕೆ ಒಳ್ಳೆದಾಗಲಿ.

'ತಬ್ಲಿ ಮಂಜ' ಅರೆಬಾಸೆಲಿರುವ ಒಳ್ಳೆ ಕತೆ ಪುಸ್ತಕ. ಹೆಚ್ಚಿನೆಲ್ಲಾ ಕತೆಗಳ್ಲಿ ಬರ್ದವನೇ ಕತಾನಾಯಕನಾಂಗೆ ಕಂಡದೆ. ಕೆಲವು ಕತೆಗ ಒಂದು ರೀತಿನ ಬಯಾಗ್ರಾಫಿಕಲ್ ಚಿತ್ರಣನೋಂತ ಅನುಮಾನನೂ ಆದೆ. ಸುಳ್ಯ ಮತ್ತೆ ಕೊಡಗು ಪ್ರದೇಶದ ಜನಜೀವನ, ಸಾಮಾಜಿಕ ವ್ಯವಸ್ತೆ ಅನುಭವಿಸಿದವರ ಕಣ್ಣಿಗೆ ಕಟ್ಟಿದಾಂಗೆ ಆದೆ. ಸುಳ್ಯ, ಪೈಲಾರ್, ಅಂಬೆಕಲ್ಲ್, ಪುತ್ತೂರು, ಉಡುಪಿ, ಮನ್ಸ್‌ಗೆ ಕಂಡದೆ. ಅದರ್ಲಿನೂ ಪೈಲಾರ್‌ನ ಅಂದ್‌ನ ಜೀವನ ಕಂಡ ನಂಗೆ ಅಷ್ಟ್ ಹಸುರಾಗಿ ಅನ್ಸಿದೆ.

ಪಿ. ಜಿ. ಅಂಬೆಕಲ್ ಬೇರೇನೆಲ್ಲಾ ತಮ್ಮಾ ಜೀವನಲಿ ಬರ್‍ದೊಳೊನೊ ಗೊತ್ತಿಲ್ಲೆ. ಅರೆಬಾಸೆಲಿರುವ ಎಲ್ಲಾ ಕತೆಗಳ ಓದ್ಯಳೆಂತೇಳುವ ಗರ್ವನೂ ಇಲ್ಲೆ. ಆದ್ರೆ ಏನೆಲ್ಲಾ ಓದ್ಯಳೆ, ಅದರ್ಲಿ ಒಂದು ಸಾಮಾಜಿಕವಾದ ಪ್ರಗತಿಪರ ಮೌಲ್ಯ ಇರುವ ಸಂದೇಶ ಉಟ್ಟು. ಅಪ್ಪ ಮಾಡ್ದಾ ಭೂಮಿ ಬೊದ್ಕುನ ಎಳ್ಕಂಬ ಗಂಡ್ ಮಕ್ಕಳಿಗೆ ಅಪ್ಪನೇ ಬೇಡ, ಅಂತ ದರ್ಲಿ ಮುದಿ ಅಪ್ಪನ ನಾ ನೋಡಿಕಣೆ, ನಂಗೇ ನನ್ನ ಅಪ್ಪನೇ ಆಸ್ತಿಂತೇಳಿ ಅಪ್ಪನ ಸಹಾಯಕ್ಕೆ ಮಗಳೇ ಮುಂದೆ ನಿಲ್ಲುದು ನಾವುಗೆ ಒಂದು ಮಾದರಿ ಗೂಡೆನಾಂಗೆ ಕಂಡದೆ.

ಪಿ. ಜಿ. ಅಂಬೆಕಲ್ ತಡವಾಗಿ ಆದ್ರೂ ಅರೆಬಾಸೆ ಓದುಗರಿಗೆ ಒಳ್ಳೆ ಒಂದು ಕೊಡುಗೆನಳೇ ಕೊಟ್ಟೊಳೊ. ಅವರ್‌ಂದ ಇನ್ನೂ ಹೆಚ್ಚಿನ ಕೊಡುಗೆ ಆಗಲೀಂತ ನಾ ಹಾರೈಸಿನೆ.

ಎ. ಕೆ. ಹಿಮಕರ

ಸಂಚಾಲಕರು, ಪುಸ್ತಕ ಪ್ರಕಟಣಾ ಸಮಿತಿ

# ಮುನ್ನುಡಿ

ಶ್ರೀ ಪಿ.ಜಿ. ಅಂಬೆಕಲ್‌ನವು ಮಡಿಕೇರಿ ಹತ್ರದ ಚೆಟ್ಟಳ್ಳಿ ಹೈಸ್ಕೂಲ್‌ಲಿ ಮುಖ್ಯ ಶಿಕ್ಷಕರಾಗಿ ಸೇವೆ ಮಾಡಿ 2002ರ್‌ಲಿ ನಿವೃತ್ತರಾದವು. ಶಿಕ್ಷಕರಾಗಿರಕನೇ ಸಾಹಿತ್ಯಪರ ಚಟುವಟಿಕೆಗಳ್ಲಿ ತೊಡಗ್ನಿಕಂಡ್ ಕೊಡಗು ಜಿಲ್ಲಾ ಲೇಖಕ ಮತ್ತು ಕಲಾವಿದರ ಬಳಗದ ಪ್ರಧಾನ ಕಾರ್ಯದರ್ಶಿಯಾಗಿ, ಕಾರ್ಯಾಧ್ಯಕ್ಷರಾಗಿ, ಕೊಡಗು ಜಿಲ್ಲಾ ಪ್ರೌಢಶಾಲಾ ಮುಖ್ಯಶಿಕ್ಷಕರ ಸಂಘದ ಕಾರ್ಯದರ್ಶಿಯಾಗಿ ಕಾರ್ಯ ನೀಸಿದವು. ಸಾಹಿತ್ಯಾಸಕ್ತರ್ನ ಕರ್ದ್ ಅವ್ಕೆ ವೇದಿಕೆ ಕೊಟ್ಟ್ ಬೆನ್ನ್ ತಟ್ಟಿದವು.

ಅಂಬೆಕಲ್ ಅವು ಓರ್ವ ಪ್ರತಿಭಾವಂತ ಶಿಕ್ಷಕ, ಕಲಾರಾಧಕ. ನಟನಾ ಕೌಶಲ್ಯ ಅವರ್ಲಿ ಇತ್ತ್. ಅವು ಶಾಲಾಭಿವೃದ್ಧಿಗಾಗಿ ನಾಟಕವೊಂದರ ಮುಖ್ಯ ಪಾತ್ರ ವಹಿಸಿದ್ದೊ.

ಶಿವರಾಮಕಾರಂತರ ಒಡನಾಡಿಯಾಗಿದ್ದ ಅಂಬೆಕಲ್‌ನವು ಕವಿ ಮನದ ಸರಳ ಜೀವಿ. ಶಿಕ್ಷಕ ಕೆಲ್ಸನ ತುಂಬ ಗೌರವಂದ ಕಂಡವು. ಹಳ್ಳಿ ಬೊದ್ಕ್‌ನ ಕುಸಿಪಟ್ಟವು. ಈಗ ಬೆಂಗ್ಳೂರ್ ಮಹಾನಗರಲಿ ವಿಶ್ರಾಂತ ಜೀವನ ಮಾಡ್ತೊಳೊ. ಅವರ ಹಳ್ಳಿ ಜೀವನಾನುಭವ, ಶಿಕ್ಷಕ ಕೆಲ್ಸದ ಅನುಭವ, ಸಂಸಾರದ ಜಂಜಾಟದ ಸಿಂಹಿ–ಕಂಹಿಗಳ್ನ ಇದೀಗ ತಮ್ಮ ಅನುಭವದ ಜೋಳಿಗೆಂದ ಹೊರತೆಗ್ದವು. ತಮ್ಮ ಅನುಭವಕ್ಕೆ ಕತೆನ ರೂಪ ಕೊಟ್ಟ್ ಸಾಹಿತ್ಯಾಸಕ್ತ ಓದುಗರ ಕೈ ಮೇಲೆ ಇಸಿದವು. ಹೆಂಗಾರ್ ಓದಿಕಣಿ, ನಿಮ್ಮ ಅನುಭವನೂ ಹೋಲ್ಸಿಕಣಿತ **'ತಬ್ಲಿ ಮಂಜ'** ನ ನಾಡ್‌ಗೆ ಅರ್ಪಿಸಿದವು. ಎಂದೋ ಅವಕಾಶ ಸಿಕ್ಕಕಾಗಿತ್ತ್. ಇರ್ಲಿ, ಈಗಾರೂ ಸಿಕ್ಕಿತಲ್ಲಾ ಅದ್ ನಮ್ಮ ಪುಣ್ಯ! ಇಂತ ಒಂದ್ ಅಮೂಲ್ಯ ಕಾಣಿಕೆನ ಅರೆಬಾಸೆ ಸಾಹಿತ್ಯ ಲೋಕಕೆ ಕೊಟ್ಟ ಶ್ರೀ ಪಿ. ಜಿ. ಅಂಬೆಕಲ್‌ನವುಕೆ ಅಭಿನಂದನೆಗ.

**'ತಬ್ಲಿ ಮಂಜ'** ಕತೆಲಿ ಅಪ್ಪ ಇದ್ದರೂ ಮಂಜ ತಬ್ಲಿತರ ಯಾಕಾತ್, ಸ್ವಾಭಿಮಾನಿ ಅವ್ವ ಹೂವಮ್ಮ ಮಂಜನ ಓದ್ಸಿದ ರೀತಿ, ಮಂಜ ಚಾಕ್ರಿಗೆ ಸೇರ್ದ್ ಇದೆಲ್ಲಾ ಕಣ್ಣಿಗೆ ಕಟ್ಟಿದಂಗೆ ಪಿ.ಜಿ. ಯವು ಬರ್ದೊಳೊ. 'ಕೂಡ್ಸು–ಕಳಿವ ಆಟ!' ಈ ಕತೆಲಿ ಕುರುಬರ ಮಂಜ ಮಾಡ್ದ ಹಳ್ಳಿ ಮೊದ್ದ್, ಲಚ್ಚಿತ್ತೇಳುವ ಅಜ್ಜಿ ಮಾಡ್ದ ಸೂಲಗಿತ್ತಿ ಸೇವೆ.... ಆ ಕತೆನ ಓದಿರೇ ಗೊತ್ತಾದು ಮುಂದೇನಾತ್‌ತ. 'ಆಹುತಿ' ಕತೆಲಿ "ಪ್ರತ್ಯಕ್ಷ ಕಂಡರೂ ಪರಾಂಬರಿಸಿ ನೋಡು"ತ್ತೇಳುವ ಮಾದರಿ ಕತೆ ಇದಾಗುಟು.

"ಆಸ್ಪತ್ರೆ ಹಾಸಿಗೆಲಿ.....!?" ".....ಮಾತಾಡದೆ ಏನೋ ಗೇನಲಿ ಎತ್ತಳೋ ನೋಡಿಕಂಡಿದ್ದ ಗಂಡನ ಮುಂಗೈ ಮೇಲೆ ತಟ ಪಟಾಂತ ಬಿದ್ದ ಬಿಸಿ ಕಣ್ಣೀರ್‌ನ ನೋಡಿ ಗಾಬ್ರಿ ಆದ ಪೂವಯ್ಯ...." ಓದುಗನ ಕಣ್ಣ್‌ಲೂ ಹನಿ ಹನ್ನುವ ಪ್ರಸಂಗ! ಎದೆಗಟ್ಟಿ ಇರೊವುಕೆ ಮಾತ್ರ ಹಿಂಗೆ ಬರೆಕೆ ಸಾಧ್ಯತೇ ಹೇಳಕ್. "ಸಾವುನ ಕುಸೀಂದ ಬರ ಮಾಡಿಕಂಬವನೇ ಜ್ಞಾನಿ! ಈ ಬದ್ಕ್‌ತೇಳ್ದು ಪೊಯ್ಯೆ ಮೇಲೆನ ಹೆಜ್ಜೆ ಗುರುತು"ತ್ತೇಳುವ ಲೇಖಕ ಅಂಬೆಕಲ್ ಅವು ಬೇನೆ ನುಂಗಿ ಆಡುವ ಮಾತೇ ಹೌದು.

"ಬೆತ್ತ ಕೋಣೀತಿತ್!!" ಈ ಕತೆಲಿ ಬೆತ್ತ ಇಲ್ಲರೆ ಪಾಠನೇ ಇತ್ಲೆತ ಬೆತ್ತದ ಇತಿಹಾಸನ ಹೇಳ್ದ್. ಬೆತ್ತ ಇರಕನೇ ಅಷ್ಟೊಂದ್ ಉರಿ ಬಾತಿದ್ದೊ. ಇನ್ನ್ ಅದ್ ಇಲ್ಲರೆ? ಸ್ವಾರಸ್ಯ ಆದ ಕತೆ.

ಹೆತ್ತವು ಹೊತ್ತವು ಮಕ್ಕಳಿಗಾಗಿ ಏನೇನ್ ಕಷ್ಟಪಟ್ಟವೆ, ಕಡೆಗೆ ಏನಾದೆತ ಹೇಳುವ ಕತೆ 'ಜೋಮಾಲೆ'. 'ಕರಿಕೂಟ ಕತ್ತಲೆಲಿ ಮಿಂಚಿದ ಮಿಂಚ್'– ಗುರು ಕುದ್ದ ಆಸನಲಿ ಶಿಷ್ಯೆ ಕೂರುವ ಭಾಗ್ಯ, ಒಳ್ಳದಕ್ಕೆ ಹಠ ಮಾಡಿರೆ ಒಳ್ಳದೇ ಆದೆತ ವರ್ಣಿಸುವ ಕತೆ ಇದಾಗುಟು.

'ಗುರುದಕ್ಷಿಣೆ' ಕತೆಲಿ – ಕೆಳಹಂತದ ಅಧಿಕಾರಿಲಿರುವ ಕೀಳ್ತನ, ಮೇಲಾಧಿಕಾರಿಲಿರುವ ಮೇಲ್ತನನ ಪಿ.ಜಿ. ಯವು ಸರಿಯಾಗಿ ವರ್ಣನೆ ಮಾಡಿಯೊಳೊ. ಗುರುಗೆ ಸಹಾಯ ಮಾಡುವ ಶಿಷ್ಯರ ಕುರ್ತ್ ಈ ಕತೆಲಿ ಪೊರ್ಲಾಗಿ ವರ್ಣಿಸಿಯೊಳೊ.

'ಅಪ್ಪನ ಆಸ್ತಿ.... ಅಪ್ಪನೇ....!?' – ಗ್ಯಾನ ಮಾಡ್ದೇ ಒಂದ್, ಆದರೆ ಆದೇ ಬೇರೆ... ವಿಶೇಷ ತಿರುವು ಪಡ್ಕಂಡ ಅದ್ಭುತ ಕತೆ ಇದಾಗುಟ್ಟು. 'ಸೂರ್ಯ ಪಡುಲಿ ಮೂಡ್ತಾ!!!' – ಪೇಟೆ ಬಾಮಿಗೆ ಹುಲಿ ಬಿದ್ದರೆ ಆಳಿಗೊಂದ್ ಕಲ್ಲ್–ತ ಹೇಳ್ವಂಗೆ ಇನ್ನ್ ಹಳ್ಳಿ ಬಾಮಿಗೆ ಮನಿ....! ಈ ಕತೆ ನಿಗೂಢ ಆಗಿ ಮುಂದುವರ್ದದೆ.

"ಸೊಸೆ ಒಮ್ಮೆನೂ ಹರಳೆಣ್ಣೆ ಕುಡ್ದವರಾಂಗೆ ಮೋರೆನ ಸಿಂಡ್‌ಸಿಕಂಡ್ ಇದ್ದದರ ನಾ ಕಂಡತ್ಲೆ"..... "ಚಾಂಪನ ಪೇಚಾಟ"ತ್ತೇಳುವ ಈ ಕತೆ ವಾವ್! ಹಿಂಗೂ ಉಟ್ಟಲ್ಲಾತ್ತೇಳುವ ಆದರ್ಶ ಕುಟುಂಬದ ಪೊರ್ಲಾದ ಕತೆ. ಈ ಕತೆನ ಓದಿಕಂಡಿರಕನ ಓದುಗರ್ ತಮ್ಮ ತಮ್ಮ ಕುಟುಂಬನ ಹೋಲ್ಸಿಕಣದೆ ಇರಿಕಿಲೆ. ಈ ರೀತಿಯ ಆದರ್ಶ ಕುಟುಂಬ ಇರೊಕುತ್ತೇಳ್ದು ಕವಿ ಕೊಡುವ ಸಂದೇಶ ಆಗುಟು.

"ಎಂತಾ ಪ್ರೀತಿ ನಿಂದ್" ಈ ಪುಸ್ತಕದ ಕಡೇ ಕತೆ. ಈ ಕತೆನ ಓದಿ ಅರ್‌ಗಿಸಿಕಂಬ ಶಕ್ತಿ ಓದುಗನಲ್ಲಿರೊಕು.

ಕತೆಗಾರ ಅಂಬೆಕಲ್‌ನವು ಎಲ್ಲೂ ಉದ್ವೇಗಕ್ಕೆ ಒಳಗಾಗದಂಗೆ ಎಚ್ಚರಂದ, ತಾಳ್ಮೆಂದ ಬರ್ದೊಳೊ. ಕತೆ ಪೋಣ್ಸಿದ ರೀತಿ ಅದ್ಭುತ. ಇವರ್‌ಂದ ಇನ್ನಷ್ಟ್ ಬರವಣಿಗೆ ಹೊರಗೆ ಬರ್ಲಿತ ನಾ ಆಸೆಪಟ್ಟನೆ.

ಹಿರಿಯರಾದ ಶ್ರೀಯುತರ ಪುಸ್ತಕಕ್ಕೆ ಮುನ್ನುಡಿ ಬರಿವ ಅವಕಾಶ ಸಿಕ್ಕಿದಕ್ಕೆ ನಾ ಋಣಿ ಆಗೊಳೆ. ಶ್ರೀಯುತ ಅಂಬೆಕಲ್‌ನವುಕೆ ಶುಭಾಶಯಗ.

**–ಬಾರಿಯಂಡ ಜೋಯಪ್ಪ.**

೧೨–೦೨–೨೦೧೯

# ನನ್ನ ಮಾತ್

ನನ್ನ ಅವ್ವನ ರೂಪ, ಗುಣ ಅದೆಸ್ಟೋ ಹೆಂಗ್‌ಸ್‌ಗಳ್ಲಿ ಇದ್ದರೂ ನಂಗೆ ನನ್ನ ಅವ್ವ, ನನ್ನ ಅವ್ವನೇ! ಹಾಂಗೆ ನಮ್ಮ ಮನೆಮಾತ್ ಅರೆಬಾಸೆನ ಮೇಲೆ ಪ್ರೀತಿಂದ ಸುಮಾರ್ ಐವೊತ್ತ್ ವರ್ಸಗಳ ಹಿಂದೆ ನನ್ನ ಬರವಣಿಗೆ ಸುರು ಆದ್ದೇ ಅರೆಬಾಸೆ ಲೇಖನಂದ. ಆ ಮೇಲೆ ಹಂಙಾ ಕನ್ನಡಲಿ ಕತೆ, ಲೇಖನಗ ಪತ್ರಿಕೆಗಳ್ಲಿ ಪ್ರಕಟ ಆಗಿದ್ದರೂ ಇಂದ್ ಪುಸ್ತಕ ರೂಪಲಿ ದಾಖಲೆ ಆದೂ ಅರೆಬಾಸೆಂದಾಂತ ಹೇಳ್ದು ನಂಗೆ ತುಂಬಾ ಕುಸಿನ ಸಂಗ್ತಿ.

ಬೊದುಕುಲಿ ಆದ ಒಂದೆರ್ಡ್ ಆಘಾತಗಳ್‌ಂದ ನಂಗೆ ಒಂದೂ ಬೇಡ, ಹೋವಕಾಲಲಿ ಈ ಬರಿಯಟೆಲ್ಲಾ ಯಾಕೆಂತ 'ಲೇಖನಿ ಸನ್ಯಾಸ' ತಕಂಡವರಾಂಗೆ ಇದ್ದೆ. ಸಾಹಿತಿಕ ಬರಿಯಟ ಮನ್ಸ್‌ನ ಬೇನೆಗೆ ಒಳ್ಳ ಲೇಪಂತ ಗೊತ್ತಿದ್ದರೂ ನಂಗೆ ಇದರ ಯಾವ ಲೇಪವೇ ಬೇಡಾಂತ ಇದ್ದವಂಗೆ ನಮ್ಮ 'ಹಿಂಗಾರ' ಪತ್ರಿಕೆನ ಸಂಪಾದಕ, ನನ್ನ ಆತ್ಮೀಯ ಜೋಸ್ತಿ ಶ್ರೀ ಬಾರಿಯಂಡ ಜೋಯಪ್ಪನವು ಹಿಂಗಾರಕ್ಕೆ ಕತೆ ಕಳ್ಸೀಂತ ಒತ್ತಾಯ ಮಾಡ್ದೊ. ಅಂತೂ ಕತೆ ಒಂದು ಕಳ್ಸಿದೆ! ಅದರ ಅವು ಮೆಚ್ಚಿಕಂಡ್ ಹಿಂಗಾರಲಿ ಪ್ರಕಟಿಸಿದೊ. ನಾ ಪಿಂಚಣಿ ಆಕನ ನನ್ನ ಪರಿಚಯನ 'ಆಂದೋಲನ' ಪತ್ರಿಕೆಲಿ ಬರ್ದ ಶ್ರೀ ಜೋಯಪ್ಪನವು 'ಹಿಂಗಾರ"ಲಿಯೂ ನನ್ನ ವ್ಯಕ್ತಿ ಪರಿಚಯನ ಮಾಡಿ 'ದೊಡ್ಡ ಜನ' ಮಾಡ್ದೊ!? ಹೂನೊಟ್ಟಿಗೆ ನಾರ್! ಇನ್ನೂ ಬರೆಯದಿದ್ದರೆ ಮರ್ಯಾದೆ ಹೋದಲೇಂತ ಪೆನ್ನ್ ಹಿಡ್ದೆ! ನಿಮ್ಮ ಕತೆಗಳ ಅಕಾಡಮಿ ವತೀಂದ ಪುಸ್ತಕ ಮಾಡಕಾ ನೋಡ್ದೊ ಕಳ್ಸೀಂತ ಒತ್ತಾಯ ಮಾಡ್ದೊ.

ಅದೆಸ್ಟೋ ವರ್ಸಗಳ್‌ಂದ ಕಂಡ್‌ಕಣದೆ, ಯಾವ ಸಂಪರ್ಕವೂ ಇಲ್ಲದೆ ಗುರ್ತನೆ ಮರ್ತ್ ಹೋವಾಂಗೆ ಇದ್ದ ಶ್ರೀ ಎ.ಕೆ. ಹಿಮಕರನವು ಹಿಂಗಾರಲಿ ಬಂದ ಕತೆನ ಓದಿ ಕುಸಿಯಾಗಿ ಪೋನ್ ಮಾಡಿ ಕತೆನ ಮೆಚ್ಚಿ ಮಾತಾಡ್ದೊ. ಅಸ್ಟಲ್ಲದೆ ನಿಮ್ಮ ಕತೆಗಳ ಒಂದು ಪುಸ್ತಕ ಮಾಡೊನೊ ಕತೆಗಳ ಕಳ್ಸೀಂತ ಇವೂ ಒತ್ತಾಯ ಮಾಡ್ದೊ. ನನ್ನ ಪೂಜ್ಯ ಗುರುಗಳಾದ ವಿದ್ವಾನ್ ಟಿ.ಜಿ. ಮುಡೂರುನವು ಪೋನ್ ಮಾಡಿ ಕತೆನ ಮೆಚ್ಚಿ ಬೆನ್ನ ತಟ್ಟಿದೊ. ನನ್ನ ಕೆಲವು ಆತ್ಮೀಯರ್, ಬಂಧುಗ, ಕೆಲವು ಅಪರಿಚಿತರ್‌ಸಾನೂ ಕತೆನ ಬಗ್ಗೆ ಮೆಚ್ಚಿಗೆ ಸೂಚಿಸಿದ್ದರ್‌ಂದ ಈ ಪ್ರಾಯಲಿ ಹೆಚ್ಚಿಹೊತ್ತು ಕುದ್ದು ಬರಿಯಕೆ, ಓದಿಕೆ ಆಗದಿದ್ದರೂ ಬರಿವ ಹುರುಪು ಬಾತ್, ಮನ್‌ಸ್‌ಲಿ ಹಂಙಾ ಹುಡ್ಗ ಆದೆ. ಹಂಗೆ ನನ್ನ ಕೆಲವು ಕನ್ನಡ ಕತೆಗಳ ನಮ್ಮ ಬಾಸೆಗೆ ತರ್ಜುಮೆ ಮಾಡ್ದೆ; ಕೆಲವು ಹೊಸ ಕತೆಗಳೂ ಹುಟ್ಟಿದೊ. ಅದರ ಫಲ ಈ 'ತಬ್ಲಿ ಮಂಜ'!? ಇವನ 'ನೀ ತಬ್ಲಿ ಅಲ್ಲಾ ನಾವೂ ಒಳೊ ಬುಟ್ಟ್‌ಹಾಕಿಕಿಲ್ಲೇ'ಂತ ಕೈ ಹಿಡ್ದ್ ಕರ್ಕಂಬ ಜವಾಬ್ದಾರಿ ನಿಮ್ಮದ್.

ನನ್ನ ಕತೆಗಳ ಪುಸ್ತಕ ರೂಪಲಿ ಬಾಕೆ ಕಾರಣರಾರ ಕರ್ನಾಟಕ ಅರೆಭಾಷೆ ಸಂಸ್ಕೃತಿ

ಮತ್ತು ಸಾಹಿತ್ಯ ಅಕಾಡಮಿನ ಅಧ್ಯಕ್ಷರ್ ಮತ್ತೆ ಸರ್ವಸದಸ್ಯರಿಗೆ ನಾ ಋಣಿ. ಆಯ್ಕೆ ಮಾಡ್ದ ಪ್ರಕಟಣಾ ಸಮಿತಿನ ಸಂಚಾಲಕರ್ ಮತ್ತೆ ಸದಸ್ಯರಿಗೆ ಅನಂತ ವಂದನೆಗ.

ಅರೆಬಾಸೆ ಕತೆಗಳ 'ಚಾಂಪ' ಶ್ರೀ ಬಾರಿಯಂಡ ಜೋಯಪ್ಪನವು ಎಸ್ಟೆಸ್ಟೋ ಕೆಲ್ಸಗಳ ಒತ್ತಡಗಳ ನೊಡುವೆ ನನ್ನ ಒತ್ತಾಯಕ್ಕೆ ಪ್ರೀತಿಂದ ಎಲ್ಲಾ ಕತೆಗಳ ತಾಳ್ಮೆಂದ ಓದಿ ವಿಮರ್ಶಾತ್ಮಕ ಮುನ್ನುಡಿಯ ಹೊನ್ನುಡಿ ಬರ್ದೊಳೊ. ಅವುಕೆ ನಾ ಆಭಾರಿ.

ಮುಖಪುಟದ ಜವಾಬ್ದಾರಿನ ನಾ ಹೊತ್ತ್‌ಕಣೆ ನೀವು ಮಂಡೆಬೆಚ್ಚ ಮಾಡ್ಬಡೀಂತ ಹೇಳಿ ತನ್ನೆಲ್ಲಾ ಮಂಡೆಬೆಚ್ಚಗಳ ಹೇಳಿಕಣದೆ ಪುಸ್ತಕಕ್ಕೆ ಆಕರ್ಷಕ ಮುಖಪುಟ ಮಾಡಿ ಕೊಟ್ಟದಲ್ಲದೆ ನನ್ನ ಕತೆಗಳ ಬಗ್ಗೆ ಒಳ್ಳ ಮಾತ್‌ಗಳ ಹೇಳ್ದ ಶ್ರೀ ಎ.ಕೆ.ಹಿಮಕರ ನವುಕೆ ನಾ ಕೃತಜ್ಞ.

ನನ್ನ ಅರೆಬಾಸೆ ಕತೆಗಳ ಪ್ರಕಟಿಸಿದ 'ಹಿಂಗಾರ' ಮತ್ತೆ 'ಮುಡ್ಪು' ಪತ್ರಿಕೆಗಳಿಗೆ ನನ್ನ ಧನ್ಯವಾದಗ.

ನನ್ನ ಎಲ್ಲಾ ಬರವಣಿಗೆಗೆ, ಸಾಹಿತ್ಯ ಚಟುವಟಿಕೆಗೆ ಸ್ಫೂರ್ತಿನ ಚಿಲುಮೆ ಯಾಗಿದ್ದದ್ ನನ್ನ ಹೆಣ್ಣ್ ಕನಕ. ಮೆಚ್ಚೊವು, ಅಭಿಮಾನ ಪಡೊವು ನನ್ನ ಭಾವ ಶ್ರೀ ಕಟ್ಟೆಮನೆ ಲಕ್ಷ್ಮಣ ಮತ್ತೆ ಸೋದರರ್; ನಾದಿನಿ ಶ್ರೀಮತಿ ಲೀಲಾ ದಾಮೋದರ, ತಮ್ಮ ಶ್ರೀ ಅಂಬೆಕಲ್ಲು ಬಾಲಕೃಷ್ಣ ಮತ್ತೂ ಕೆಲವು ಆತ್ಮೀಯರ, ಬಂಧುಗಳ ದೊಡ್ಡಗುಣನ ಮರಿಯಕೆ ಆಕಿಲೆ.

ತುಂಬು ಬೊಸ್ರಿಯಾಗಿದ್ದರೂ ಅಪ್ಪನ ಮೇಲೆನ ಪ್ರೀತಿಂದ ನನ್ನ ಎಲ್ಲಾ ಕತೆಗಳ ಡಿ.ಟಿ.ಪಿ. ಮಾಡ್ದ ನನ್ನ ಮಗಳು ಶ್ರೀಮತಿ ಅಲಕಾ;  ಕತೆಗಳ ಕುಸೀಂದ ಓದಿ ಹೆಮ್ಮೆ ಪಡುವ ನನ್ನ ಮಕ್ಕ ಡಾ: ನಿವೇದಿತಾ ಮತ್ತೆ ಜಾಹ್ನವಿ; ಅಳಿಯಂದ್ರ್ ಶ್ರೀ ಹರಿಕಿಶೋರ್ ಅಗರಿ, ಶ್ರೀ ಮುರಳೀಧರ ಕಟ್ಟೆಮನೆ ಇವರೆಲ್ಲರ ನೆನ್ಸಿಕಣೆ.

ಬರೇ ಹದ್ನೈದ್ ದಿನಲಿ ಲಾಯಿಕಾಗಿ ಮುದ್ರಿಸಿಕೊಟ್ಟ ಮಡಿಕೇರಿನ ಶ್ರೀಕೃಷ್ಣ ಕಂಪ್ಯೂಟರ್ಸ್ ಮತ್ತು ಪ್ರಿಂಟರ್ಸ್ ಮಾಲಿಕರ್ ಮತ್ತೆ ಸಿಬ್ಬಂದಿಗಳಿಗೆ ನನ್ನ ವಂದನೆಗ.

ಅಂತೂ 'ತಬ್ಲಿ ಮಂಜ' ನಿಮ್ಮ ಎದ್ರ್ ಬಂದ್ ನಿತ್ತುಟು. ಪೊರ್ಲುಲಿ ಕರ್ಕಂಬರೀಂತೇಳುವ ನಂಬಿಕೆ ನಂದ್.

**ಪಿ.ಜಿ.ಅಂಬೆಕಲ್**

ವಿಶ್ವಾಸ್ ಡ್ಯಾಫೊಡಿಲ್ಸ್,

# ಎಸ್–203; ರಾಮಚಂದ್ರಪುರ;

ಜಾಲಹಳ್ಳಿ ಅಂಚೆ ಬೆಂಗಳೂರು–560013

ಚ.ದೂ. ಸಂ – 9481390089

# ಒಳಪುಟಲಿ


1. ತಬ್ಲಿ ಮಂಜ 1–7
2. ಕೂಡ್ಸುವ–ಕಳಿವ ಆಟ 8–12
3. ಆಹುತಿ 13–19
4. ಆಸ್ಪತ್ರೆ ಹಾಸಿಗೆಲಿ 20–27
5. ಬೆತ್ತ ಕೋಣೀತ್ತಿತ್ 28–34
6. ಜೋಮಾಲೆ 35–41
7. ಕರಿಕೂಟ ಕತ್ತಲೆಲಿ ಮಿಂಚಿನ ಮಿಂಚ್ 42–47
8. ಗುರುದಕ್ಷಿಣೆ 48–56
9. ಅಪ್ಪನ ಆಸ್ತಿ ಅಪ್ಪನೇ 57–63
10. ಸೂರ್ಯ ಪಡುಲಿ ಮೂಡ್ತಾ 64–70
11. ಚಾಂಪನ ಪೇಚಾಟ 71–82
12. ಎಂತಾ ಪ್ರೀತಿ ನಿಂದ್ 83–93

# ತಬ್ಲಿ ಮಂಜ

**ಹೂವಮ್ಮ:**

ಹೂವಮ್ಮ ತೀರಿ ಹೋತ್ ಗಡ!

ಹೂವಮ್ಮ ತೀರಿ ಹೋದ ಸುದ್ದಿ ಮುಳಿ ಹುಲ್ಲ್‌ನ ಪಡ್ಪುಗೆ ಕಿಚ್ಚಿ ಬಿದ್ದ ಹಾಂಗೆ ಊರಿಗೆಲ್ಲಾ ಹಬ್ಬಿತ್. ಸುದ್ದಿ ಗೊತ್ತಾದ್ದೇ ತಡ ಊರ್‍ನ ಜನ ಎಲ್ಲಾ ಗುಡ್ಡೆ ಕಟ್ಟಿಕಂಡ್ ಬಂದೇಬುಟ್ಟೊ. ಹೂವಮ್ಮನ ಅರ್‌ಸಿನ ಕೊಂಬ್‌ನಾಂಗೆ ಇದ್ದ ಒಬ್ಬನೇ ಒಬ್ಬ ಮಂಜ ಒಂದೇ ಬರ ಮರ್ಡ್‌ತಾ ಇತ್ತ್. ಹೆಂಗ್‌ಸ್‌ಗಳ ಕಂಡರೆ ಅಂತೂ ತಲೆಗೆ ಕೈ ಹೊಡ್ಕಂಡ್ ಮರ್ಡ್‌ತಾ ಇತ್ತ್. ದುಃಖದ ಕಟ್ಟೆ ಒಡ್ಡ್ ಗೊಳೋಂತ ಮರ್ಡ್‌ತ್ತಿತ್ತ್ ಮೂವತ್ತರ ಮಂಜ ಕಿಟ್ಟು! ತುಂಬಾ ಓದಿದಂವ ಆಕಂಡೂ ಹೀಂಗೆ ಗಂಡ್ ಮಂಜ ಮರ್ಡ್‌ದರ ಕಂಡ್ ಎಲ್ಲವುಕೂ ಎತೆ.

'ಕೂಲಿನಾಲಿ ಮಾಡಿ ಬಿ.ಎ. ಓದ್‌ಸ್ದ ಅವ್ವನ ಸಾವ್‌ನ ಅಂವ ಹೇಂಗೆ ಸಯಿಸಿಕಂಬೊದು'ಂತ ನೆರೆಮನೆ ಎಂಕಮ್ಮಕ್ಕ ಹೇಳ್ತ್. 'ಇದ್ದೊಬ್ಬ ಮಂಜನೂ ತಬ್ಲಿ ಮಾಡಿ ಹೊರ್‌ಟೇ ಹೋತು ಪುಣ್ಯಾತ್‌ಗಿತ್ತಿ'ಂತ ಗಂಗವ್ವಜ್ಜಿ ಹೇಳಿಕಂಡ್ ಕೆಪ್ಪಟೆಗೆ ಕೈ ಕೊಟ್ಟ್ ಕುದ್ದತ್. 'ದೇವ್ರ ತಲೆಲಿ ಹೂ ತೊಪ್ಪಿರೂ ಇವಳ ತಲೆಲಿ ಹುಲ್ಲುನ ಹೊರೆ

ತೊಪ್ಪ್ತ್ತಿತ್ಲೆ'ಂತ ಲಿಂಗಮ್ಮಕ್ಕ ಹೇಳಿಕಂಡತ್. 'ಅದೆಂತ ದೊಡ್ಡ ಸಂಗ್ತಿ, ಅದ್ ಪ್ರಾಯಲಿ ಹೊರ್ತಿದ್ದ ಹೊರೆ ಈಗನ ಯಾವ ಗಂಡ್‌ಸ್‌ಂದಲೂ ಹೊರಿಕೆ ಆಕಿಲ್ಲೆ. ಅದ್ ಒಂದು ದಿನ ಮಾಡ್ತಿದ್ದ ಕೆಲ್ಸನ ಈಗನ ಗೂಡೆಗ ಮೂರ್ ದಿನ ಮಾಡೊಕು'. ಹೀಂಗೆ ಒಬ್ಬೊಬ್ಬ ಒಂದೊಂದು ಹೂವಮ್ಮನ ಗುಣನ ಹೊಗ್‌ಳವೇ. ಎಲ್ಲರ ಮಾತ್‌ಕತೆ ಒಂಚೂರು ಕಮ್ಮಿ ಆತ್‌ಂತ ಕಾಂಬಕನ ಊರ್‌ನ ಪಟೇಲ ಸೋಂಪಜ್ಜ 'ಹೂವಮ್ಮ ಯಾರಿಗೆ ಬೇಡಾಗಿತ್ತ್‌ಂತ ಹೇಳಿ, ನಮ್ಮೂರ್‌ನ 'ಮೇಡ್ ಬಾಯಿಯೇ ಅದ್! ಹೊಲ್ಯರ ದೆಟಿಗೆಲಿ ಚೋಮು ಪಾಯಾದ್ರೂ ಹೋತಿತ್ತ್. ಭಟ್ರ ಮನೆ ಜೇವುಗಳ ಹೆರಿಗೆಗೂ ಹೋತಿತ್ತ್. ನನ್ನ ಮಗ ರತ್ನನ ಹೆರಿಗೆ ಮಾಡ್ಸಿದುನೂ ಅದುವೇ. ನಮ್ಮ ಗೋಪಾಲ ಡಾಕ್ಟ್ರ ಕರೇಕೆ ಹೋದರೆ 'ನಾನು ಬರ್ತೇನೆ ಹಾಗೆ ನೀವು ಹೂವಮ್ಮನನ್ನೂ ಕರ್‍ಕೊಂಡು ಬನ್ನಿ ಆಯ್ತ'ಂತ ಹೇಳ್‌ತಿದ್ದೊ. ಹಾಂಗೆ ಹೀಂಗೇಂತ ಹೂವಮ್ಮನ ಹೂನಂತ ಮನ್ಸ್‌ನ ನೆನ್‌ಸಿಕಂಡ್ ತನ್ನ ಸಾಲ್‌ಲಿ ಕಣ್ಣೀರ್ ಪೂಜಿಕಂಡೊ ಸೋಂಪಜ್ಜ.

ಅರುವತ್ತರ ಆಸುಪಾಸ್‌ನ ಹೂವಮ್ಮ ಒಂದು ಮೂವತ್ತ್-ನಲ್ವತ್ತ್ ವರ್ಸಗಳ ಹಿಂದೆ ಮೂಡ್ನೂರ್ನ ಒಂದು ಕೂಲಿ ಹೆಂಗ್ಸ್! ಮದ್ದಿನ ಕೊಂಬುನ ಹಾಂಗೆ ಸಾಂಕಿ ಬೆಳ್ಸಿದ ಮಂಜ ಕಿಟ್ಟು ಉಡುಪಿಲಿ ಕ್ಲರ್ಕ್ ಆಗಿ ಕೆಲ್ಸಕ್ಕೆ ಸೇರ್ದ ಮೇಲೆ ಇದಕ್ಕೆ ಕೂಲಿ ಕೆಲ್ಸಕ್ಕೆ ಪಿಂಚಿಣಿ. ಮಂಜಂಗೆ ಗೊತ್ತಾಗದಾಂಗೆ ನೆರೆಕರೆ ಮನೆಗಳಿಗೆ ನೇಜಿಗೊ, ಕ್ಯೊಲಿಗೊ ಹೋತಿದ್ದ ಹೂವಮ್ಮ ತನ್ನ ಒತ್ತಾಯಕ್ಕೆ ತಕಂಡ ದರ್ಕಾಸ್‌ಲಿ ಅಡ್ಕೆದೈಗಳಿಗೆ, ಬಾಳೆದೈಗಳಿಗೆ ಕೆರೆಂದ ನೀರ್ ಹೊತ್ತ್ ಹ್ಯೊಕಂಡ್, ಮಳೆಗಾಲಲಿ ಕುಮೇರಿ ಬಿತ್ತಿ, ಮಂಜ ಕಳ್ಸ್‌ತಿದ್ದ ದುಡ್ಡೊಂದ ಹಾಂಗೂ ಹೀಂಗೂ ದಿನ ದೂಡ್‌ತಿತ್ತ್.

ಮಂಜ ಪುತ್ತೂರ್‌ಂದ ತಂದ ಎರ್ಡ್ ಕಡ್ಸ್‌ಗಳ ಒಂದು ಚೂರು ಮೈ ಬೊಜ್ಜದಾಂಗೆ ಯಾರ್ ಯಾರ್ದೊ ತೋಟಕ್ಕೆ ಹೋಗಿ ಕಾಡಿಬೇಡಿ ಹುಲ್ಲು ತಂದ್ ಹಾಕದ ದಿನನೇ ಇರಿಕಿಲ್ಲೆ. ಕರ್‌ಬುಟ್ಟ್ ಸಿಕ್ಕಿದ ಒಂದೆರಡ್ ಕೊಂಡೆ ಹಾಲ್‌ನ ಚಾಕ್ಕೆ ತೋರ್ಸಿದಾಂಗೆ ಮಾಡಿ ಮೊಜ್ಜಿಗೆ ಮಾಡಿ, ಬೆಣ್ಣೆ ತೆಗ್ದ್ ತುಪ್ಪ ಕಾಸಿ ಮಂಜಂಗೇಂತ ಇಸ್‌ತ್ತಿತ್ತ್.

ಮಂಜ ತಿಂಗಳಿಗೊ, ಎರ್ಡ್ ತಿಂಗಳಿಗೋ ಒಮ್ಮೆ ಮನೆಗೆ ಬಾಕನ ಮಾತ್ರ ಆಗ ಬಂದ ನೆಂಟ್ರಿಗೆ ಕೋಳಿ ಗೈಪು ನೀರ್ ದೋಸೆನ ಗಮ್ಮತ್ತ್. ಬಾಕಿ ದಿನಗಳ್ಲಿ ಬಂದ ನೆಂಟ್ರಿಗೆ ಗಂಜಿ, ಕಾಯಿ ಮೊಜ್ಜಿಯೇ ಗತಿ! ವರ್ಸಲಿ ಆರ್

ತಿಂಗ ಮನೇಲಿ ಕತ್ತಲೆಗೆ ಒಂದೇ ಮಲ್‌ಗ್‌ತ್ತಿದ್ದ ಹೂವಮ್ಮ ಧೈರ್ಯಲಿ ಯಾವ ಗಂಡ್‌ಸಿಗೂ ಕಮ್ಮಿ ಇತ್ಲೆ. ಹತ್ತ್ ಹೆತ್ತರೂ ಒಳ್ದ ಒಬ್ಬನೇ ಒಬ್ಬ ಮಂಜನ ಮೇಲೆನ ಪ್ರೀತಿ ಚಂದ್ರಮತಿನ ವಾತ್ಸಲ್ಯನೂ ಮೀರ್‍ಸಿದ್! ಹಾಗೇಂತ ಕೊಂಡಾಟ, ತಿಂಬಕೆ ಉಂಬಕೆ ಹೊರ್ತು ಬುದ್ಧಿಗಲ್ಲ. ಗುಣ ನಡ್ತೆಲಿ ಯಾರ ಮಕ್ಕಳಿಗೂ ಕಮ್ಮಿ ಆಕೆ ಬೊತ್ತೂಂತನೇ ಅವಳ ಮನ್ಸ್. ಮಂಜ ಎಲಿಮೆಂಟ್ರಿ ಸಾಲೆ ಮುಗ್ಸಿ, ಹೈಸ್ಕೂಲಿಗೆ ಹೋನೆಂತ ಮೂರ್ ದಿನ ಮರ್ಡ್‌ಕನ, ಅಯ್ಯೆನ ಮನ್ಸ್ ಕರ್‍ಗಿ ನಾ ಕೂಲಿನಾಲಿ ಮಾಡಿ ಆದರೂ ಮಂಜನ ಓದ್ಸುದು ಓದ್ಸುದೇಂತ ಆಣೆ ಮಾಡ್ದ ಅವ್ವ ಹೂವಮ್ಮ!

ಕ್ಲರ್ಕ್ ಆಗಿದ್ದ ಮಂಜ ಓದೊಕೂಂತ ಭೋಪಾಲಕ್ಕೆ ಹೊರ್ಡ್‌ಕನ ಬೇಡಾತ ಹೇಳ್ದ ಅವ್ವ ಅದಲ್ಲ. ರೈಲ್ ಹೋಕನ ಹೇಂಗೆ ಜಾಗರ್ತೆ ಇರೊಕೂಂತ ರೈಲ್ ನೋಡದ ಅವ್ವ ಜಾಗರ್ತೆ ಹೇಳ್ದೇ ಹೇಳ್ದ್. ಅಂತೂ ಇಂತೂ ಮಂಜ ಬಿ.ಎ. ಮಾಡಿ ಹೈಸ್ಕೂಲ್ ಮಾಸ್ಟ್ರ ಆಕನ ಹೂವಮ್ಮಂಗೆ ಕುಸಿಯೋ ಕುಸಿ, ಸ್ವರ್ಗಕ್ಕೆ ಮೂರೇ ಗೇಣ್. ಮಂಜಂಗೆ ಇಪ್ಪತ್ತೈದ್ ವರ್ಸ ಆಕನೇ ಮನೆಗೆ ಸೊಸೆ ಬರೊಕು, ಪಿಳ್ಳಿಕಳ ಎತ್ತಿ ಆಡ್ಸೊಕೂಂತ ಕುತ್ತಿಗೆವರೆಗೆ ಆಸೆ ಇದ್ದರೂ ಮಂಜ ನಂಗೊಂದು ಟ್ರೈನಿಂಗ್ ಆಗಲಿ, ಹಾಂಗಾಗಲಿ, ಹೀಂಗಾಗಲೀಂತ ಮೊದುವೆನ ಮುಂದೆ ಹಾಕಿಕಂಡಿದ್ದರೂ ತನ್ನ ಆಸೆ ಆಕಾಂಕ್ಸೆಗಳ್ನೆಲ್ಲಾ ಮನ್ಸಸ್‌ಲೇ ಇಸಿಕಂಡ್ ಮಂಜನ ಇಚ್ಚೆಗೆ ಯಾಗೊಳು ಅಡ್ಡಬಾತ್ಲೆ. 'ಮೊದ್ವೆ ಮಾಡ್ಸುದಾರೂ ಹೇಂಗೆ ಅವನ ರೂಪ ಗುಣ ನಡ್ತೆ ನೋಡಿಯೋ, ಕೆಲ್ಸ ಉಟ್ಟೂಂತನೊ ಗೂಡೆನ ಕಡೆವು ಮನಸ್ಸ್ ಮಾಡೊಕೇ ಹೊರ್ತು, ನಾವೇನು ದೊಡ್ಡ ಸ್ತಿತಿವಂತರೊ, ಈ ಬೋಳ್ ಗುಡ್ಡೆಲಿ ಎರ್ಡ್ ಕೋಂಬರೆನ ಒಂದು ಸಣ್ಣ ಕೊಟಗೆನಾಂಗೆನ ಮನೆ, ಲಾಯಿಕ್‌ಲಿ ಎಲೆ ಅಡ್ಕೆ ತಿಂಬವುಕೆ ಸಾಕಾಗುವಸ್ಟ್ ಅಡಿಕೆ ಸಿಕ್ಕುವ ಕಮ್ಮ ಇಸ್ಟೇಂತ ಬೇಜಾರ್ ಮಾಡಿಕಂಡದೆ. ನಾವು ಅಯ್ಯೆ ಅಪ್ಪ ಮಂಜಂಗೆ ಮೊದುವೆಗೇಂತ ನಯಾ ಪೈಸೆ ಕೂಡಿ ಇಸಿತ್ಲೇಂತೇಳುವ ಬೇಜಾರ್ ಬೇರೆ. ಗಂಡ ಹೂವಯ್ಯಂಗೆ ಮಂಜಂಗೆ ಮೊದುವೆ ಮಾಡೊಕೂಂತ ಗೇನನೇ ಇಲ್ಲೆಂತ ಎತೆ. ಅವುಕೆ ಸೋಂಪಜ್ಜನ ಮನೆನ ಬೆಡಿ ಆತ್, ಅವು ಆತ್. ದೊಡ್ಡಕಾನಕ್ಕೆ ಕುಳುಗುಮ್ಮೆ, ಮುಚ್ಚ ಹೊಡಿಯಕೆ ಹೋನೇಂತ ಹೋದರೆ ಮೂರು ದಿನ ಮನೆಗೆ ಬಾರದಿದ್ದರೂ ಆತ್. ಹಗ್‌ಲ್ ಇರ್‌ಳೆಲ್ಲಾ ಕಾಡೆಲ್ಲಾ ಓಡ್ಯಾಡಿ, ಉಂಬುಳು, ನುಸಿ ಕಚ್ಚಿಸಿಕಂಡ್ ಊಟ ನಿದ್ದೆ ಬುಟ್ಟ್, ಕುಳುಗುಮ್ಮೆ, ಮುಚ್ಚ್ ಹೊಡ್ದ್ ತಂದ್

ಸೋಂಪಜ್ಜನ ಮನೇಲಿ ಹಾಕಿ ಮನೆಗೆ ಬರೀ ಕೈ ಬೀಸಿಕಂಡ್ ಬಾವ ಬರಿಕೈಬಂಟ ಹೂವಯ್ಯ! ಹೆಣ್ಣ್‌ನ ವರ್ಸಕ್ಕೊಮ್ಮೆನೂ ತೌರಿಗೆ ಕಳ್ಸದ, ಪ್ರತ್ಯೊಂದು ಕೆಲ್ಸಲೂ 'ನಾ ನಿನ್ನ ಗಂಡಾ'ಂತ ಗಂಡ್‌ಸ್ತನ ತೋರ್ಸುವ ಗಂಡನ ಕಂಡರೆ ಹೂವಮ್ಮಂಗೆ ಪ್ರೀತಿ ಅಸ್ಟಕಸ್ಟೆ. ಆದರೂ ಗಂಡನ ನೇರ ನಡ್ತೆ, ಕಂಡದ್ ಕಂಡಾಂಗೆ ಹೇಳ್ವ ಸ್ವಬಾವ, ಪ್ರಾಮಾಣಿಕತೆಗಳ ಮನ್‌ಸ್‌ಲೇ ಮೆಚ್ಚಿಕಂಡಂದೆ ಹೂವಮ್ಮ.

## ಗಂಡ – ಹೂವಯ್ಯ:

ಅರುವತ್ತೈದರ ಬೊಚ್ಚುಬಾಯಿಯ ಅಜ್ಜ ಹೂವಯ್ಯ ಹೂವಮ್ಮನ ಗಂಡಾಂತೇಳುದರ ಹೆಸ್ರೇ ಹೇಳ್ದೆ. ಐದ್ ಐದೂವರೆ ಪೀಟ್ ಎತ್ತರದ ಎಣ್ಣೆಕೆಂಪು ಬಣ್ಣದ ಅಜ್ಜ ಕಡ್ಡಿ ಪೈಲ್‌ವಾನ್. ಪ್ರಾಯ ಅರುವತ್ತೈದು ದಾಟಿರೂ ಅಜ್ಜಂಗಿನ್ನೂ ಮೂರು ಕಾಲ್ ಬಾತ್ಲೆ. ತಲೆ ಎದ್‌ರ್‌ಗೆ ಕ್ರಾಪ್ ಹಿಂದೆ ಜುಟ್ಟು ಬುಟ್ಟ 'ಜುಟ್ಟು ಕ್ರಾಪ್'ನಂವ ಹೂವಯ್ಯ. ಅವನ ಮೈಲಿರುವ ಬೆಲೆ ಬಾಳುವ ನಗಾಂತೇಳ್ರೆ ಕೆಬಿಲಿರುವ ಕೆಂಪುಕಲ್ಲ್‌ನ ಎರ್ಡ್‌ವಂಟಿಗ. ವಂಟಿ ಸೆರಿಯಾಗಿ ಕಾಣದ್ರೂ ಅದರ ಹಿಂದೆ ಇರ್ವ ಕೀಲ್ ಮಾತ್ರ ಹಂದಿ ರೋಮುಗಳ ನೊಡೂಂದ ನಾ ಇಲ್ಲಿ ವಳೇಂತ ಕರ್ದ್ ಹೇಳುವಾಂಗೆ ಇತ್ತ್. ಕಂಡದರ ಕಂಡಾಂಗೆ ಕಣ್ಣ್‌ಗೆ ಕೈ ಹೆಟ್ಟಿದಾಂಗೆ ಹೇಳ್ದರಂದ ಊರುನವುಕೆ ಹಂಜ ಹಾಂಕರ್ದವನಾಂಗೆ ಕಂಡರೂ ಮೊನ್ನನ ಮನ್ಸ್ ಮಾತ್ರ ಅಸ್ಟ್ ಹಾಳೇನೂ ಅಲ್ಲ!

ಊರಿಗೇ ಬರಬಂದ್ ನಾಲ್ಕೈದ್ ಕಂಡಿ ಅಡ್ಕೆ ಆಗೋವ್‌ಸಾನ್ ಸೊಸೈಟಿಂದ ಕುಂಬು ಗೋದಿ, ಹುಳು ಹಿಡ್ದ ಅಕ್ಕಿ ತಂದ್ ದಿನ ದೂಡ್ರೂ, ಇವಂಗೆ ಬೊಳ್ಪುಗೆ ಸಕ್ಕರೆ ಚಾ, ಬೊಡ್‌ರೊಟ್ಟಿ ಒಣ್‌ಗಿಲ್ ಮೀನ್ ಗೈಪೇ ಆಕು. ಊರಿಗೆ ಉಪಕಾರಿ ಮನೆಗೆ ಮಾರಿನಾಂಗೆ ಕಾಂಬ ಹೂವಯ್ಯ ಕೈ ಹಿಡ್ದ ಹೆಣ್ಣ್‌ನ ಸಾಂಕಿದ್ ಅಸ್ಟಕಸ್ಟೆ, ಹೂವಮ್ಮನೇ ಗಂಡನ ಸಾಂಕಿತ್‌ಂತೇಳ್ರೂ ತೊಪ್ಪಾಕಿಲ್ಲೆ. ಹೇಂಗೇ ಇದ್ದರೂ ಇಂದ್ ಹೂವಮ್ಮನ ಜೀವ ಹೋತ್‌ತಾಕನ ಅಜ್ಜನ ಕಲ್ಲ್ ಹರ್ದಯ ಕೂಡಾ ಕರ್ಗಿತ್. ಹೆಣ್ಣ್‌ನ ಹೆಣದ ಮೇಲೆ ಮರ್ಟ್‌ಕಂಡ್ ಬಿದ್ದ್ ಹೊರಳಾಡ್ದ ಅಜ್ಜ, 'ಕಣ್ಣ್‌ಲಿ ನೆತ್ರ್ ಇಲ್ಲದ ನಾ ಮೊನ್ನೆ ನೀ ಮೊಣ್ಣ್ ತಿಂದೇ ಹೋಗೂಂ'ತ ಸಾಪ ಹಾಕಿದ ಹಾಂಗೆ ಈಗ ನೀ ನನ್ನ ಬಾಯಿಗೆ ಮೊಣ್ಣ್ ಹಾಕಿ ಕಣ್ಣ್‌ಮುಚ್ಚಿಕಂಡಲ್ಲಾ'ಂತ ಗೋಳಾಡ್ಕನ ಸೋಂಪಜ್ಜ 'ಅದೆಲ್ಲಾ ಎಂತ

ಮಾತ್'ಂತ ಆಡಿಯಾ, ಹುಟ್ಟಿದ ಮೊನ್ಸ ಒಂದಲ್ಲ ಒಂದು ದಿನ ಸಾಯೊಕೇ. ಅದ್ ಪುಣ್ಯಾತ್'ಗಿತ್ತಿ, ಅದರ ದೇವ್ರು ಬೇಗ ಕರ್‍ಸಿಕಂಡೊ. ಮುತ್ತೈದೆ ಸಾವು ಕಂಡತ್'ಂತ ಹೇಳ್ದೊ.

'ಅದರೇನೋ ದೇವ್ರು ಬೇಗ ಕರ್‍ಸಿಕಂಡೊ. ಅದ್ಕೆ ಸುಕ ಮಾಡ್ದೊ. ಆದರೆ ನಾ ಇದ್ದ್ ಏನ್ ಸುಕ? ಮಂಜನ ತಲೆಗೆ ನಾಲ್ಕ್ ಅಕ್ಕಿಕಾಳ್ ಹಾಕ್ವ ಯೋಗ ದೇವ್ರು ಅವಳ ಹಣೇಲಿ ಬರ್‌ತ್ಲೆಂ'ತ ದುಕ್‌ಡ್ಸಿತ್. ತನ್ನ ಬಾಳ ಸಂಗಾತಿನ ಕಳ್‌ಕಂಡ ಅಜ್ಜ ಮಾತ್ರ ಅರೆ ಹುಚ್ಚನಾಂಗೆ ಆಗಿತ್ತ್. ಮಂಜ ಕಿಟ್ಟು ಗಟ್ಟದ ಮೇಲೆ ಸಾಲೆಗೆ ಹೋದರೆ ನಾ ಒಂಟಿ ಪಿಸಾಚಿ. ನಂಗೆ ಬೇಸಿ ಹಾಕೊವು ಯಾರ್? ನೆರೆಕರೆವು ಎಸ್ಟ್‌ದಿನಾಂತ ಬಂದ್ ಸಾಯ ಮಾಡುವ್ರೋಂತೇಳುವ ಎತೆ ಅಜ್ಜನ ಕಾಡ್‌ತಾ ಇತ್ತ್. 'ಕೆಟ್ಟ ಮೇಲೆ ಬುದ್ದಿ, ಸತ್ತ ಮೇಲೆ ದುಃಖ'ಂತ ಹೇಳುವಾಂಗೆ ಆದರೂ ಹೂವಯ್ಯ ಮುರುಕ್ಲು ಅಟ್ಟ ಹತ್ತಿ ಯಾಗೊಳೊ ತಂದಿದ್ದ ಹಾಳಾದ ಕೊಪ್ರಿನ ಒಡ್ಡ್ ಸವದ ಮುಂದೆ ದೀಪ ಹೊತ್ಸಿತ್. ಸವದ ಕಾಲ್ ಬುಡಲಿ ಕುದ್ದ್‌ಕಂಡ್ ಮರ್‍ಗ್‌ಕಂಡಿದ್ದ ಮಂಜಂಗೆ.

"ಅಂತೂ ನೀ ಅವ್ವಂದ ಸುಕ ಕಾಂಬ ಪುಣ್ಯ ಪಡ್ಕಂಡ್ ಬಾತ್ಲೆನೆ..... ಎಲ್ಲಾ ಅವನ ಆಟ"ಂತ ಹೇಳಿಕಂಡ್ ಹೊಗೆಂದ ಕಪ್ಪಾದ ಮಾಡ್‌ನ ಕಡೆ ಏನೋ ಗೇನ ಮಾಡಿಕಂಡ್ ನೋಡ್‌ತಿತ್ತ್.

## ಮಂಜ – ಕಿಟ್ಟು :

ಉಡುಪಿಲಿ ಕ್ಲರ್ಕ್ ಆಗಿದ್ದ ಕಿಟ್ಟು ಚಿಕ್ಕಮಗಳೂರ್‌ನ ಮೂಡಿಗೆರೆಲಿ ಹೈಸ್ಕೂಲ್ ಒಂದರ್‍ಲಿ ಮಾಸ್ಟ್ರ್ ಆಗಿ ನಾಲ್ಕೈದ್ ವರ್ಸ ಕಳ್ದಿತ್ತ್. ಸರ್ಕಾರ ದಾಖಲೆಗಳ್ಲಿ ಮಾತ್ರ ಕೃಷ್ಣಕುಮಾರ ಅಂತ ಇದ್ದ ಕಿಟ್ಟು ಸಾಲೆ ಮಕ್ಕಳ ಮೆಚ್ಚಿನ ಕುಮಾರ ಮಾಸ್ಟ್ರ್. ಗಟ್ಟದ ನಡುಗುಟ್ಟುವ ಚೆಳಿಗೆ ಕೂಡಾ ಮೈನ ಬಿಸಿ ಮಾಡ್‌ತ್ತಿತ್ತೇ ಹೊರ್‍ತು, ಒಳ ಮೈ ಮನಸ್‌ಗಳ ಬಿಸಿ ಮಾಡುದರ ಕಲ್ತಿತ್ಲೆ. ದೋಸ್ತಿಗಳಿಗೆ 'ಎವರ್ ಸ್ಮೈಲಿಂಗ್ ಬಾವ'! ಮಕ್ಕಳಿಗೆ ಪಾಠದೊಟ್ಟಿಗೆ ನಾಟಕ, ಡೇನ್ಸ್, ಭಾಷಣಾಂತ ಎಲ್ಲಾ ವಿಷಯಲೂ ಹುರುಪುಂದ ಹೇಳಿ ಕೊಡ್ತಿತ್ತ್. ತನ್ನ ಹಿತ ಮಿತ ನಡ್ತೆ, ಮಕ್ಕಳಿಗೆ ತನ್ನಿಂದ ಏನಾರ್ ಪ್ರಯೋಜನ ಆಕೂಂತೇಳೂವ ಸ್ವಬಾವಂದ ಮಕ್ಕಳ ಮೆಚ್ಚಿಗೆ ಗಳ್ಸಿತ್ತ್. ಊರ್‍ನ ಸಂಘ ಸಂಸ್ಥೆಗಳ್ಲೂ ದುಡೀತ್ತಿದ್ದರ್‌ಂದ

ಊರವರ ಗೌರವಕ್ಕೂ ಪಾತ್ರವಾಗಿತ್ತ್. ಮೆಚ್ಚಿಬಂದ ಕೆಲ್ಸ, ಅದಕ್ಕೆ ಸರಿಯಾದ ವಾತಾವರಣಂದ ಕಿಟ್ಟುನ ಮೋರೆಗೆ ಕಿತ್ತುಳಿ ಬಣ್ಣ ಬಂದಿತ್ತ್.

ಒಂದಿನ ಯಾಗೊಳುನಾಂಗೆ ಕ್ಲಾಸ್‌ಲಿ ಪಾಠ ಮಾಡಿಕಂಡ್ ಇರ್ಕನ ನೆರ್ಮನೆ ವಾಸುನ ಕಂಡ್ ಆಸ್ಚರ್ಯ! ಪಾಠನ ಅರ್ಧಕ್ಕೇ ನಿಲ್ಸಿ ಕ್ಲಾಸ್‌ಂದ ಹೊರಗೆ ಬಂದ ಕಿಟ್ಟುಗೆ ವಾಸುನ ಸುಟ್ಟ ಬದನೆಕಾಯಿನಾಂಗೆ ಇದ್ದ ಮೋರೆನ ನೋಡಿ, ತಲೆ ಬೆಚ್ಚಾಗಿ 'ಏನ್ ವಾಸು, ಅಪ್ಪ ಹೇಂಗುಟ್ಟೊ'ಂತ ಕೇಳ್ತ್.

'ಅಣ್ಣ ನೀವು ಕೂಡ್ಲೇ ಬರೊಕಡ ಅವ್ವಂಗೆ ಹಂಞ ಜೋರೇ'ಂತ ಹೇಳ್ದ ವಾಸುನ ಮಾತ್ ಕೇಳಿ, ಗಡಿಬಿಡಿಲಿ ನಾಲ್ಕ್‌ದಿನ ಸಾಲೆಗೆ ರಜೆ ಹಾಕಿ ಊರಿಗೆ ಹೊರ್ಟೇ ಬುಟ್ಟತ್ ಕಿಟ್ಟು. ಕೆಂಪು ಬಸ್ ಹತ್ತಿ ಹೊರ್ಟ ಕಿಟ್ಟುನ ಸರೀರ ಚಾರ್ಮಾಡಿ ಗಾಟಿಲಿ ತಿರ್ಗಿಕಂಡ್ ಹೋತಿದ್ದರೆ ಮನ್‌ಸ್‌ಲಿ ಅವ್ವನ ಕಾಯಿಲೆ ಇಚಾರನೇ ತಿರ್ಗ್‌ತ್ತಿತ್ತ್. ಒಂದು ತಿಂಗಳ ಹಿಂದೆ ಇಲ್ಲಿಂದ ಗುಣಾಗಿ ಹೋದ ಅವ್ವಂಗೆ ಈಗೇನಾತ್. ಬೇರೆ ಯಾ ಕಾಯಿಲೆನೂ ಇಲ್ಲೆ. ಸರೀರಲಿ ನೆತ್ತರ್ ಕಮ್ಮಿಯಾಗುಟ್ಟೂಂತ ಡಾಕ್ಟ್ರ ಹೇಳ್ದಕ್ಕೆ ತಾನೆ ನಾ ಇಲ್ಲಿಗೆ ಅವ್ವನ ಕರ್ಕಬಂದ್ ಎರ್ಡ್ ತಿಂಗ ಯಾವ ಕೆಲ್ಸನೂ ಮಾಡ್ಸದೆ ಲಾಯಿಕ್‌ಲಿ ನೋಡಿ ಕಂಡದ್. ಡಾಕ್ಟ್ರ ಹೇಳ್ದಲ್ಲದೆ ಆಚೆವು ಈಚೆವು ಹೇಳ್ದಾಂಗೆ ಮಟನ್ ಸೂಪು, ತರಕಾರಿ ಸೂಪೂಂತ ಏನೆಲ್ಲಾ ತಂದ್ ಕುಡ್ಸಿ, ಉಣ್ಸಿ, ಲಾಯಿಕ್‌ಲಿ ಮನೇಲ್ಯಾರ್ ಓಡಾಡುವಂಗೆ ಆದರೆ ಸಾಕ್‌ಂತ ಪೇಚಾಡ್ದ್. ಹೀಂಗೆ ಅವ್ವನ ಕಾಯಿಲೆನೇ ಗೇನ ಮಾಡಿಕಂಡ್ ಇರ್ಕನ ಬಸ್ ಚಾರ್ಮಾಡಿ ಗಾಟಿನ 'ಹೇರ್‌ಪಿನ್' ತಿರ್ಗಾಸ್‌ಲಿ ಮೆಲ್ಲೆ ಮೆಲ್ಲೆ ಹೋಗ್ತಾ ಇತ್ತ್. ಆದರೆ ಕಿಟ್ಟುನ ತಲೇಲಿ ಅವ್ವನ ಇಚಾರ ಏನೇನೋ ಗೇನಗ. 'ನಾ ಅವ್ವಂಗೆ ಮೊದ್ದು ಮಾಡ್ಸಿದ್ ಕಮ್ಮಿ ಆತಾ! ಛೆ ಯಾಕೆ ಹಿಂಗಾತ್? ನಾ ಪಾಡ್‌ಪಟ್ಟದೆಲ್ಲಾ ನೀರ್ಲಿ ಹೋಮ ಇಸಿದಾಂಗೆ ಆತಲ್ಲಾ? "ನಾ ಚಿಕ್ಕಮಂಗ್ಳೂರ್‌ನ ದೊಡ್ಡ ಆಸ್ಪತ್ರೆಗೆ ಕರ್ಕಂಡ್ ಹೋಗಿ ಸೇರ್ಸಕಾಯಿತೋ ಏನೋ. ಹಾಂಗೇನಾರ್ ಮಾಡಿದ್ದರೆ ಅವ್ವ ಪೂರಾ ಹುಸಾರ್ ಆತಿದ್ದನೋ ಏನೋ? ಅಯ್ಯೋ ಅವ್ವಂಗೆ ಏನಾರ್ ಹೆಚ್ಚು ಕಮ್ಮಿ ಆದರೆ..... ಅವ್ವನ ಒಂದೇ ಒಂದು ಆಸೆ.... ಅದೂ ನನ್ನ ಮೊದುವೆ.... ಆಗಿ ಬುಟ್ಟಿದ್ದರೆ...... ನಾನೆಂತಾ ಬೇಕೂಪ.... ಯಾಕೆ ಬೇಕಾಗಿ ಕೆಲ್ಸಲಿ ಇರುವ ಗೂಡೇನೆ ಆಕೂಂತ ಹುಡ್ಕ್ಯಂಡೆ ಇದ್ದ್ ಬುಟ್ಟೆ....." ಅಯ್ಯೋಂತ ಹುಚ್ಚನಾಂಗೆ ತಲೆನ ಚಚ್ಚಿಕಣೊಕೂಂತಿದ್ದ ಕಿಟ್ಟು ತಲೆ ಬಸ್‌ನ ಸರಳ್‌ಗೆ ಬೊಡ್ದ್ ಈ ಲೋಕಕ್ಕೆ ಬಾತ್. ಹಾಂಗೆ ಮುಂದೆ ನೋಡ್ರೆ ಬಸ್ಸ್‌ನ ಇಂಜಿನ್‌ನ ನೀರ್

ಬಿಸಿಯಾಗಿ ಕೊತಕೊತಾಂತ ಕೊದಿಯತ್ತಿತ್ತ್.

ಅಪ್ಪನ ಚಾಕ್ರಿಗೆ ಯಾರ್ನಾರ್ ಏರ್ಪಾಡ್ ಮಾಡಿ, ಅವ್ವನ ಮೂಡಿಗೆರೆಗೆ ವಾಪಾಸ್ ಕರ್ಕಂಡ್ ಹೋದು ಹೋದೇಂತ ಗ್ರೇಸಿಕಂಡ್ ಬಂದ ಕಿಟ್ಟುಗೆ ಅವ್ವನ ಮೋರೆ ನೋಡ್ಕನ ತಲೆ ಬೆಚ್ಚಾತ್. ಇಂದೋ ನಾಳೆನೋ ಹಾಳಾವ ಡೀಸೆಲ್ ಪಂಪುನಾಂಗೆ ಹೊಡ್ಕಂಬ ಅವ್ವನ ಎದೆನ ನೋಡಿ ಕೈಕಾಲೇ ನಡ್‌ಗಿತ್. 'ಅವ್ವಾಂತ ಕರೆಕನ ಮೆಲ್ಲೆ ಕಣ್ಣ್‌ಬುಟ್ಟ, ಬಿಳ್‌ಚಿಕಂಡ ಮೋರೆಲಿ ಕಸ್ಪಲಿ ನೆಗೆ ತಂದ್ 'ಕೂಸು ನಿಂಗೆ ನನ್ನಂದಾಗಿ ಸುಕನೇ ಇಲ್ಲೆ ಮಂಜ'ಂತ ಮರ್ಡಿಕೆ ಸುರು ಮಾಡ್ತ್. ಅವ್ವನ ಕಣ್ಣೀರ್ ಪೂಜಿ 'ಮರ್ಡ್‌ಬಡ ಅವ್ವ ನಿಂಗೇನೂ ಆಕಿಲ್ಲೆ, ನಾ ಈಗಳೇ ಹೋಗಿ ಸುಳ್ಯಂದ ಡಾಕ್ಟ್ರ ಕರ್ಕಂಡ್ ಬನ್ನೆ'ಂತ ಅಂಬೆರ್ಪುಲಿ ಹೊರ್ಟ ಕಿಟ್ಟುಗೆ ಸರ್ವೀಸ್ ಕಾರ್ ಇಂದೇಕೆ ಬಾರಿ ನಿದಾನ ಹೋದೇಂತ ಆತ್. ಮನೆಗೆ ಬಂದ ಡಾಕ್ಟ್ರ 'ಅಜ್ಜೀ ನಿಮಗೆ ಇನ್ನೆಷ್ಟು ವರ್ಷ ಬದುಕಬೇಕು'ಂತ ಕೇಳ್ದಕ್ಕೆ 'ನಂಗೇನು ತುಂಬ್ಲಾ ವರ್ಸ ಬೊದುಕೊಕೂಂತೇನ್ ಇಲ್ಲೆ, ಮಂಜನ ಮೊದುವೆ ಒಮ್ಮೆ ನೋಡ್ರೆ ಸಾಕ್'ಂತ ಹೇಳ್ತ್. 'ಮಗನ ಮೊದುವೆ ಮಾಡಿ ಮೊಮ್ಮಕ್ಕಳನ್ನೂ ಆಡಿಸುತ್ತೀರಿ'ಂತ ಕುಸಾಲಿಗೆ ಹೇಳ್ದ ಡಾಕ್ಟ್ರ, ಇಂಜೆಕ್ಸನ್ ಕುತ್ತಿ, ನಾಲ್ಕ್ ಮಾತ್ರೆ ಕೊಟ್ಟ್ ಹೋದೊ.

ಡಾಕ್ಟ್ರ ಕೊಟ್ಟ ಮಾತ್ರೆನ ಕಿಟ್ಟು ಅವ್ವನ ಬಾಯಿಗೆ ಹಾಕಿ ನೀರ್ ಕುಡ್ಸ್‌ಕನ ಒಂದೇ ಬರ ಕಕ್ಕಿದ ಅವ್ವನ ಕಣ್ಣ್ ಮೇಲಾತ್. 'ಅವ್ವಾ ಏನಾತ್'ಂತ ನಡ್‌ಗುವ ಕೈಲಿ ಅವ್ವನ ಎದೆ ಪೂಜಿತ್. 'ಅಣ್ಣಾ .. ಕೂಸು...' ಎಂತೇನೊ ತೊದಲ್‌ದಾಂಗೆ ಹೇಳ್ದ ಅವ್ವ ಬೇರೆ ಲೋಕಕ್ಕೆ ಹೋಗಿಯೇ ಬುಟ್ಟತ್. ನಿಜ ಸಂಗ್ತಿ ಗೊತ್ತಾದ ಕಿಟ್ಟು ಅವ್ವನ ಮೇಲೆ ಬಿದ್ದ್ ಗೋಳೋಂತ ಮರ್ಡಿಕೆ ಸುರು ಮಾಡ್ತ್. ಅವನ ಬೊಬ್ಬೆ ಕೇಳಿ ಏನೋ ಹೆಚ್ಚ್‌ಕಮ್ಮಿ ಆತ್'ಂತ ನೆರೆಕರೆವು ಎಲ್ಲಾ ಓಡಿ ಬಂದೊ. ಎಲ್ಲವೂ ಕಿಟ್ಟುನ ಸಮಾದಾನ ಮಾಡೊವೆ. ಯಾರ ಸಮಾದಾನದ, ತತ್ವಸಾಸ್ತ್ರ ಮಾತ್‌ಗ ಒಂದೂ ಕಿಟ್ಟುನ ಕೆಬಿಗೆ ಹೋತಿತ್ಲೆ. ಯಾಗೊಳೊ ಸಾಲೆಲಿ ಆಡ್ದ 'ಹುಚ್ಚ' ನಾಟಕದ ಶಾಮಣ್ಣನ 'ಇನ್ನು ನಾನು ಒಂಟೀ . . . . ಒಂಟೀ'ಂತ ಹೇಳ್ವ ಮಾತ್‌ಗ ಅವನ ಕೆಬಿಲಿ ಗುಂಯಿಗುಡ್‌ತಾ ಇತ್. ನೆರೆ ಮನೆ ಟಿ.ವಿ. ಲಿ 'ತಬ್ಬಲಿಯು ನೀನಾದೆ ಮಗನೆ ...... ಇಬ್ಬರಾ ಋಣ ತೀರಿತೆಂದು ತಬ್ಬಿಕೊಂಡಿತು ಕಂದನಾ'ಂತ ಪುಣ್ಯ ಕೋಟಿಯ ಪದ್ಯ ಕೇಳ್ತಾ ಇತ್.

* * * * *

8

## ಕೂಡ್ಸುವ–ಕಳಿವ ಆಟ!

ಕಣ್ಣ್ ಕುಕ್ಕುವ ಬೆಳ್‌ಕ್‌ನೊಟ್ಟಿಗೆ ಧಡ್ ದಢಾಲ್‌ಂತ ಸಿಡ್ಲ್ ಬೊಡ್ತ್! ಈ ಮಟ ಮಟ ಮಧ್ಯಾಹ್ನ ಕರಿಕೂಟ ಕತ್ತಲೆ ಆಗುಟ್ಟು, ಬೊಳ್ಪ್‌ಂದಲೇ ಮೋಡ ಮುಚ್ಚಿದ ಬಾನ್‌ನ ಒಮ್ಮೆ ನೋಡಿ, ಬೇಡ ಹೋಗ್‌ಬೇಡೀಂತ ಎಷ್ಟು ಬೊಡ್‌ಕಂಡ್ರೂ ನನ್ನ ಮಾತ್‌ನ ಕೆಬಿ ಮೇಲೆ ಹಾಕಿ ಕಣದೆ ಹೆಗ್‌ಲಿಗೆ ಕಂಬ್ಳಿಕುಪ್ಪೆನ ಏರ್ಸಿಕಂಡ್ ಹೊರ್‌ಟೇ ಬುಟ್ಟತ್ ಕಾಳಪ್ಪ. ಹೆಸ್ರ್ ಮಾತ್ರ ಕಾಳಪ್ಪ; ಬೆಳ್ಳ ಬೆಳ್ಳಂಗೆ ಸುರೆ ಹೂವುನಂಗಿದ್ದ ಗಂಡಂಗೆ ಕಾಳಪ್ಪಂತ ಯಾವ ಪುಣ್ಯಾತ್ಮ ಹೆಸ್‌ರ್ ಮಡ್‌ಗಿದನೊಂತ ಮನ್‌ಸಿನೊಳಗೇ ನೆಗಾಡ್ತ್ ಪೊನ್ನಮ್ಮ. ಛೇ ಇದೆಂತ ಮಳೆ; ಬಾನೇ ಒಟ್ಟೆ ಆದಾಂಗೆ ಒಂದೇ ಸಮನೆ ಸುರಿತಾ ಉಟ್ಟು, ಮಳೆ ಸುಡಲಿ, ಈ ಸಿಡ್ಲ್ ಹೊಡಿದು ನೋಡಿಕೆ ಹೆದ್‌ರಿಕೆ, ಕೆಬಿ ಹೊಟ್ಟಿ ಹೋದಾಂಗೆ ಆದೆ. ಈ ಹೆದ್‌ರಿಕೆಂದಲೇ ಗಂಡನ ತೋಟಕೆ ಹೋಗ್‌ಬಡೀಂತ ಬೊಡ್‌ಕಂಡದ್. ಅಲ್ಲಾ ಈ ಗೂಡೆಗೆ ಎಂತ ಗೊತ್ತ್ ಮೊಣ್ಣ್, ಕಾಪಿಗೆ ರೇಟ್ ಇಲ್ಲೆ ! ಒಮ್ಮೆ ಕಾಪಿಗೆ ಒಳ್ಳ ರೇಟ್ ಬಾತ್‌ಂತ ಜನ ಕುಸಿಲಿ ಇರ್‌ಕನೇ, ರೇಟ್ ಇಳ್ತ್, ಈ ಮಳೆಲಿ ಕಾಪಿನೂ ಉದ್‌ರ್‌ತಾ ಉಟ್ಟು. ತೋಟದ ಕೆಲ್ಸ ಮಾಡ್‌ಸುದೇ ಬೇಡಾಂತೇಳುವಷ್ಟ್ ರೇಟ್

ಡೌನ್ ಆತ್! ಕಾಪಿಗೆ ರೇಟ್ ಇರ್‌ಕನ ಕೂಲಿ ಆಳ್‌ಗಳ ದಮ್ಮಯ್ಯ ಗುಡ್ಡೆ ಹಾಕಿ ಜೇಪುಲಿ ಕರ್‌ಕಂಡ್ ಬರಕಾಗಿತ್ತ್. ಇನ್ನ ಸಂಬಳನೋ ಅವು ಕೇಳ್ದಷ್ಟ್. ಒಂದ್ ಕಾಲಲಿ ಅದೇ ಆಳ್‌ಗ ನೀವು ಕೊಟ್ಟ ಸಂಬಳ ಸಾಕ್, ಎರಡು ಹೊತ್ತ್‌ನ ಅಂಬ್ಲಿಗೂ ಗತಿ ಇಲ್ಲೆ ನಿಮ್ಮ ದಮ್ಮಯ್ಯ, ಕೆಲ್ಸ ಕೊಡೀಂತ ದಮ್ಮಯ ಗುಡ್ಡೆ ಹಾಕ್ತಿದ್ದೊ. ಹೂಂ ಏನ್ ಮಾಡ್‌ದು ಸುಖ-ದು:ಖ, ಏಳ್-ಬೀಳ್, ಕೂಡ್ಸುದು-ಕಳಿಯೊದು ಇದೆಲ್ಲಾ ಪ್ರಕೃತಿನ ನಿಯಮಂತ ಏಲಕ್ಕಿ ಮಲೆ ಕಡೆ ಬೀಸ ಹೆಜ್ಜೆ ಹಾಕಿತ್ ಕಾಳಪ್ಪ.

ಈಗ ಏನಾರ್ ನಾಕ್‌ಕಾಸ್ ಗಿಟ್ಟುದು ಈ ಸಂಬಾರ ರಾಣಿ ಏಲಕ್ಕಿಂದ. ಹಿಂದೊಮ್ಮೆ ಏಲಕ್ಕಿ ತೋಟ ಮಾಡ್‌ಕನ ಕಟ್ಟೆ ರೋಗ ಬಂದ್ ಕೈ ಸುಟ್ಟ್‌ಕಂಡ ಕಾಳಪ್ಪ, ಮತ್ತೆ ಆ ಜೌಗು ಜಾಗಲಿ ಪಸಂದಾದ ಏಲಕ್ಕಿ ತೋಟ ಮಾಡಿಟ್ಟು. ಕಾಪಿ, ಕಿತ್ತುಳಿ ದೈನ ಕೊಡಿಲಿ ಕಾಯಿ ಬುಟ್ಟರೆ ಏಲಕ್ಕಿ ದೈನ ಬುಡಲಿ ಕೆದ್‌ರ್‌ದ ಕೂದೊಲ್‌ನಾಂಗೆ ಅಷ್ಟ್ ಅಗಲ ಹರ್‌ಂಡಿಕಂಡ್ ಕಾಯಿ ಬುಟ್ಟದೆ. ಕೊತ್ತ್‌ಂದ ಕಾಯಿ ಬುಡ್ಸಿಕೂ ಜಾಣತನ ಬೇಕು. ಪೀಚೆಕಾಯಿ ಕೀಳ್‌ರೆ ರೇಟ್ ಸಿಕ್ಕಿಕ್ಕಿಲ್ಲೆ. ಅದ್ಕೆ ಆಳ್‌ಗಳಿಗೆ ಹೇಂಗೆ ಕೀಳೊಕೂಂತ ಹೇಳ್‌ತ್ತಾ ತಾನೂ ಕೀಳಿಕೆ ಸುರು ಮಾಡ್ತ್ ಕಾಳಪ್ಪ. ಪಿರಾಕ್‌ಲಿ ಕಟ್ಟಿದ ಐನ್ ಮನೆ ದೊಡ್ಡದೇನೋ ಉಟ್ಟು, ಆದರೆ ಈಗನ ಕಾಲಕ್ಕೆ ಲಾಯಿಕ್ ಕಾಂಬೊದುಲ್ಲೆಂತ, ಎಲ್ಲಾ ಸೌಕರ್ಯ ಇರುವ ಆರ್.ಸಿ.ಸಿ. ಮನೆ ಕಟ್ಟಿಕೆ ಸುರು ಮಾಡಿಟು ಕಾಳಪ್ಪ. ಹೊಸ ಮನೆ ಕಟ್ಟಿಕೆ ಸುರು ಮಾಡ್‌ಕನ ಕಾಪಿಗೆ ರೇಟ್ ಇತ್ತ್. ಈಗ ರೇಟ್ ಇಳ್ದುಟು. ಏಲಕ್ಕಿಗೆ ಪರವಾಗಿಲ್ಲೆ, ಹೇಂಗಾರ್ ಮಾಡಿ ಈ ವರ್ಸ ಮನೆ ಕೆಲ್ಸ ಮುಗ್ಸಿಯೇ ಬುಡೊಕೂಂತ ರಬಸಲಿ ಏಲಕ್ಕಿ ಬುಡ್ಸಿಕೆ ಸುರು ಮಾಡ್ತ್ ಕಾಳಪ್ಪ. ಹತ್ತಾರ್ ಜನ ಆಳ್‌ಗಳೊಟ್ಟಿಗೆ ಕಾಳಪ್ಪನೂ ಏಲಕ್ಕಿ ಬುಡ್‌ಸ್‌ತ್ತಾ ಉಟ್ಟು, ಕೈಕಾಲೆಲ್ಲಾ ಉಂಬುಳು ಕಚ್ಚಿ ನೆತ್ತರ್ ಸುರಿತಾ ಉಟ್ಟು, ಅವಂಗೆ ಅದ್ಯಾವುದೂ ಲೆಕ್ಕಯಿಲ್ಲೆ. ಸುಣ್ಣ, ಹೊಸೆಪುನ ಉಂಡೆ ಮಾಡಿ ಕೆಬಿನ ಹಿಂದೆ ಉಜ್ಜಿಕನ ಹೆಬ್ಬೆಟ್ಟ್ ತೋರದ ಉಂಬುಳೊಂದು ಕೆಳಗೆ ಬೀತ್. ಬೂಟ್‌ಕಾಲ್‌ಂದ ಅದರ ಹೊಸ್‌ಕಿ ಹಾಕ್‌ಕನ ಅಷ್ಟಗಲ ನೆತ್ತರ್ ರಟ್ಟಿತ್. ಥತ್ ಈ ಹಾಳಾದ ಉಂಬುಳ್‌ಗಂತ ಸಾಪ ಹಾಕಿಕಂಡೇ ಏಲಕ್ಕಿ ಬುಡ್ಸಿಕಂಡೇ ಇತ್ತ್.

ಮಳೆನ ರಭಸ ಗುಡುಗು ಸಿಡ್ಲ್‌ನೊಟ್ಟಿಗೆ ಸುರಾಗಿ ಜೋರು ಗಾಳಿನೂ ಸೇರಿಕಂಡ್ ಅಟ್ಟಹಾಸ ತೋರ್‌ಸ್ತಾ ಇತ್ತ್. ತೋಟಲಿದ್ದ ಬಾನೆತ್ತರದ ಮರಗ ರೊಂಯ, ರೊಂಯನೇ ಬೀಸುವ ಗಾಳಿನ ರಬಸಕ್ಕೆ ಅತ್ತಂದ ಇತ್ತ, ಇತ್ತಂದ

ಅತ್ತ ಓಲಾಡ್‌ತಿತ್. ಇನ್ನ್ ಇಲ್ಲಿದ್ದರೆ ಅಪಾಯ, ಮರನೇ ಬುಡ ಮೊಗ್‌ಚಿ ಬಿದ್ದ್‌ಬುಡುದು; ಗೆಲ್ಲ್‌ಗ ತಲೆ ಮೇಲೆ ಬೀಳುವಾಂಗೆ ಇದ್ದರೆನೂ ಆಳ್‌ಗ ಮಾತ್ರ ಹುರುಪುಂದಲೇ ಏಲಕ್ಕಿ ಬಿಡ್‌ಸ್‌ತ್ತಾ ಒಳೊ, ಯಾಕೆಂತ ಹೇಳ್‌ರೆ ಆ ಪಕ್ಕದ ಎಸ್ಟೇಟ್‌ನ ಚೆಟ್ಟಿಯಾರ್‌ಂದ್ ಎರ್‌ಡ್ ರೂಪಾಯಿ ಸಂಬಳ ಹೆಚ್ಚಿ, ಮತ್ತೆ ಅರ್ಧ ಗಂಟೆ ಮುಂದೆನೆ ಕೆಲ್ಸ್ ಕೈದ್ ಮಾಡ್ದು, ಅಲ್ಲದೆ ಹತ್ತ್‌ಗಂಟೆಗೆ ಕಡಕ್ ಚಾಯ, ಅದೂ ಕಡಿನೊಟ್ಟಿಗೆ. ಬರೀ ಹೊಟ್ಟೆಲಿ ನಿನ್ನೆನ ತಣಿಯೆಣನ ಅರೆಹೊಟ್ಟೆ ತಿಂದ್ ಬಂದವುಕೆ ಇದ್ ಬಾರಿ ಸಮ್ಮನದಾಂಗೆ ಕಾಣ್‌ತಿತ್. ಆ ಕುಷಿಲಿ ಮಳೆನ ಲೆಕ್ಕಕೆ ತಕಣದೆ ಏಲಕ್ಕಿ ಬುಡ್‌ಸ್‌ತ್ತಾ ಇದ್ದೊ.

ಕಾಳಪ್ಪನ ಏಲಕ್ಕಿ ತೋಟದ ಕೆಲ್ಸಕ್ಕೆ ಕನ್ನಡ ಜಿಲ್ಲೆಂದ ಮಾಂಕು, ಗುರುವ, ಚೆನ್ನು, ಚುಕ್ರಿಗ, ಕೇರಳ ಕಡೆಂದ ಉನ್ನಿಕೃಷ್ಣ, ಗೋಪಾಲನ್ ಮುಂತಾದವೂ, ಮೂಡಸೀಮೆಂದ ರಾಮೇಗೌಡ, ಚಿಕ್ಕೇಗೌಡ್ರೂ, ಹಾಂಗೆ ಕೊಡ್ಗ್‌ನ ಮೂಲದವು ಆದ ಜೇನು ಕುರುಬರ್, ಮಲೆ ಕುಡಿಯರ್ ಎಲ್ಲಾ ಕಡೆವೂ ಇದ್ದೊ. ಇವುಕ್ಕೆಲ್ಲಾ ನಮ್ಮ ಕೈಲ್‌ಪೋದ್ ಬಾಳ ಕುಷಿನ ಹಬ್ಬ!? ಕೈಲ್‌ಪೋದ್‌ಲಿ ಹಂದಿ ಉದ್ಕ ಕಡ್‌ಂಬಿಟ್ಟ್‌ನೊಟ್ಟಿಗೆ ಕಾಟಿ ಕುಪ್ಪಿ ಸಿಕ್ಕಿರೆ ಇವುಕೆ ಸ್ವರ್ಗಕ್ಕೆ ಮೂರೇ ಗೇಣ್!!!

ಕಾಳಪ್ಪ ಯಾಗೊಳು ಜೋಬ್‌ಲಿ ಒಂದು ಬಿಗಿಲ್ ಇಸಿಕಂಡದೆ, ದೂರ ದೂರಲಿ ಕೆಲ್ಸ್ ಮಾಡುವ ಆಳ್‌ಗಳ ಕರಿಯೊಕುತಾದರೆ ಬಿಗಿಲ್ ಉರಿಗಿರೆ ಸಾಕ್ ಅವುಕೆ ಅರ್ಥ ಆದೆ. ಬೇರೆ ಬೇರೆ ಊರ್‌ಗಳ್‌ಂದ ಬಂದ ಆಳ್‌ಗ ಅಲ್ಲಲ್ಲಿ ಗುಂಪು ಸೇರಿಕಂಡ್ ಅವರವರ ಭಾಸೆಲಿ ಮಾತಾಡಿಕಂಡ್ ಇದ್ದವೆ. ಯಾರ ಗುಂಪು ಹೆಚ್ಚ್ ಕೆಲ್ಸ ಮಾಡ್‌ದೆನೋ ಅವುಕೆ ಕಾಳಪ್ಪನ ಕಡೆಂದ ಸ್ಪೆಸಲ್ ಟ್ರೀಟ್‌ಮೆಂಟ್ ಉಟ್ಟು. ಎಲ್ಲವುಕೂ ಒಂದೊಂದ್ ಗ್ಲಾಸ್ ಹುಳಿ ಸೇಂದಿ. ಹೆಚ್ಚಿ ಕೆಲ್ಸ್ ತೆಗ್‌ಸಿದ ಮೇಸ್ತ್ರಿಗೆ ಒಂದು ಕುಪ್ಪಿ ಕಾಟಿ. ಎಲ್ಲಾ ಮೇಸ್ತ್ರಿಗಳಿಗೆನೂ ಈ ಮಳೆ ಚಳಿಗೆ ಒಂದು ಕುಪ್ಪಿ ಕಾಟಿನ ಗಂಟ್ಲ್‌ಗೆ ಬೊಗ್ಸುವ ಆಸೆ. ಇದ್ದಕ್ಕಿದ್ದಂಗೆ ಹೊತ್ತಲ್ಲದ ಹೊತ್ತುಲಿ ಬಿಗಿಲ್ ಜೋರಾಗಿ ಕೇಳ್ತ್. ಯಾಗೊಳು ತೋಟದ ಎತ್ತರಂದ ಕೇಳ್‌ತ್ತಿತ್. ಇಂದ್ ಮಾತ್ರ ನಮ್ಮ ಸುತ್ತಮುತ್ತಂದಲೇ ಕೇಳ್‌ದೆ. ಆಳ್‌ಗಳಿಗೆ ಅಪಾಯ ಸೂಚನೆ ಗೊತ್ತಾಗಿ ಯಜಮಾನನ ಹುಡ್‌ಕಿಕಂಡ್ ಹೋದೋ. ಹೋಗಿ ನೋಡ್ರೆ ಯಜಮಾನನ ಮೈ ನೀಲಿ ಆಗ್‌ತ್ತಾ ಉಟ್ಟು, ಮೊಣ್‌ಕಾಲ್‌ಂದ ಕೆಳ್ಗೆ ಗಾಯಾಗಿ ನೆತ್ತರ್ ಅರಿತಾ ಉಟ್ಟು. ಇದರ ನೋಡ್ದ ಕುರುಬರ ಮಂಜ ಕೂಡ್‌ಲೇ ಬಾಯಿಲಿದ್ದ ಎಲೆ ಅಡಿಕೆನ ಉಗ್‌ದ್, ಅಲ್ಲೆ

ಚೋಡಿಲಿದ್ದ ನೀರ್‌ಲಿ ಬಾಯಿ ಮುಕ್ಕ್‌ಳ್ಸಿ, ಗಾಯಕ್ಕೆ ಬಾಯಿ ಹಾಕಿ ನೆತ್ತರ್‌ನ ಹೀಂಪಿ ಹೀಂಪಿ ಉಗಿತಾ ಇತ್ತ್. ಬೋಜ, ಮಾಂಕು ಯಾವುದೊ ಹಸಿಸೊಪ್ಪು ತಂದ್ ಕಾಡ್ ಕಲ್ಲ್‌ಲಿ ಅರ್ದ್ ಅದರ ಮುದ್ದೆನ ಗಾಯಕ್ಕೆ ಪಟ್ಟಿಕಟ್ಟಿದೊ. ಯಾವುದೊ ಘಾಟ್ ವಾಸನೆನ ಒಂದೆರಡ್ ತೊಟ್ಟು ರಸನ ಮೂಕ್‌ಗೆ ಹಿಂಡಿದೊ. ಆ ರಸ ಮೂಕ್‌ನೊಳ್ಗೆ ಹೋದ್ದೇ ತಡ, ಮೇಲೆಂದ ಮೇಲೆ ಸೀನಿ, ಉಸುರಾಟ ಸರಾಗ ಆತ್. ಅಂತ ಚಳಿಲೂ ಕಾಳಪ್ಪನ ಹಣೆಲಿ ಬೆಗ್‌ರ್ ಬಿಚ್ಚಿತ್, ಮುಚ್ಚಿದ ಕಣ್ಣ್ ಬುಟ್ಟಿತ್. ಸಾವುನ ಕರಿ ನೆರಳ್ ಆವರ್ಸಿದ್, ಕರಿ ಮೋಡದ ಮರೆಂದ ಮಿಂಚ್ ಮಿಂಚಿದಂಗೆ ಆತ್. ಇನ್ನ್ ಯಾವ ಹೆದ್‌ರಿಕೆನೂ ಇಲ್ಲೆಂತ ಯಜಮಾನನ ಹೊತ್ತ್‌ಕಂಡ್ ಆಳ್‌ಗ ಮನೆ ಕಡೆ ಹೊರ್‌ಟೊ.

ತುಂಬಿದ ಬಸ್‌ರಿ ಪೊನ್ನಮ್ಮನ ಮೋರೆಗೆ ಹೆಸರ್‌ನ ಹಾಂಗೆ ಕೆಂಪು ಕೆಂಪು ಕಿತ್ತುಳಿ ಬಣ್ಣ ಬರ್‌ತಾ ಉಟ್ಟು. ಮನೆನ ಯಾಗೋಳ್‌ನ ಕೆಲ್ಸ ಗಿಲ್ಸ ಮುಗ್‌ಸಿ ಮುಂದೆ ಹುಟ್ಟುವ ಕೂಸಿಗಾಗಿ ಉಲ್ಲನ್‌ಂದ ಟೊಪ್ಪಿ, ಸ್ವೆಟರ್ ಕಾಲ್‌ಚೀಲ ಎಲ್ಲಾ ಹೆಣೆಯಕೆ ಸುರು ಮಾಡಿಟ್ಟು, ಇದ್ದಕ್ಕಿದ್ದಂಗೆ ಗುಡಿಗಿದ ಗುಡುಗುನ ಆರ್ಬಟೆಗೆ ಕರೆಂಟ್ ಕೈಕೊಟ್ಟಿತ್. ಗಾಳಿನ ರಬಸಕ್ಕೆ ಕಿಟಿಕಿ ಬಾಗಿಲ್‌ಗ ಎಲ್ಲಾ ಬಡಬಡ ಹೊಡ್‌ಕಂಡೊ. ಅದರೊಟ್ಟೊಟ್ಟಿಗೆ ಕಣ್ಣ್ ಕುಕ್ಕುವ ಮಿಂಚಿನೊಟ್ಟಿಗೆ ಬಾಂಬು ಬಿದ್ದಂಗೆ ಸಿಡ್ಲ್ ಬೊಡ್ತ್, ದೂರದ ತೋಟಲಿದ್ದ ಮರವೊಂದು ಸಿಡ್ಲ್‌ನ ಪೆಟ್ಟಿಗೆ ಪಳಾರ್‌ಂತ ಸೀಳಿ ಹೋಗಿ ಕಿಚ್ಚಿಹೊತ್ತಿಕಂಡಾಂಗೆ ಆತ್, ಅಡಿಗೆ ಮನೇಲಿದ್ದ ಅತ್ತೆ, ಕಟ್ಲ್‌ಲಿ ಮಲ್‌ಗಿಕಂಡಿದ್ದ ಅವರತ್ತೆ ಬೋಜೀ... ಬೋಜೀ... ಇಲ್ಲಿ ಬಾನೆ ಅಲ್ಲೆಂತ ಮಾಡ್ತ ಒಳಾಂತ ಕರ್‌ದೊ. ಸಿಡ್ಲ್‌ನ ಬೊಳ್‌ಪುಲಿ ದೊಡ್ಡ ಹಲ್ಸ್‌ನ ಮರದಕ್ಕಲೆ ಯಾರ್‌ನೋ ಹೊತ್ತ್‌ಕಂಡ್ ಬಾದು ಕಂಡತ್. ಸೈಂದವನಾಂಗಿದ್ದ ಮಲೆಕುಡಿಯ ಸೇಸ ಸಣ್ಣ ಮಕ್ಕಳ ಹೆಗಲ್ ಮೇಲೆ ಕೂರ್ಸಿಕಂಡ್ ಬಾವಹಾಂಗೆ ತನ್ನ ಗಂಡನ ಹೊತ್ತ್‌ಕಂಡ್ ಬಾದರ ನೋಡಿ ಪೊನ್ನಮ್ಮ 'ಅವ್ವಯ್ಯಾ ಎನಾಗಿಬುಡ್ತ್ ನನ್ನ ಗಂಡಂಗೇ'ಂತ ಕಿರ್‌ಚಿದ್ ಕೇಳಿ ಚಾಮವ್ವ, ಅತ್ತೆ ಇಬ್ಬರೂ ಹೊರಗೆ ಓಡಿ ಬಂದೊ.

ಇದ್ದಕ್ಕಿದ್ದಂಗೆ ಪೊನ್ನಮ್ಮಂಗೆ ಹೊಟ್ಟೆಬೇನೆ ಬಾತ್. ಮನೇಲಿ ಕಾರೇನೊ ಉಟ್ಟು. ಷೆಡ್ಡ್‌ಲಿ ಬೆಚ್ಚಂಗೆ ನಿತ್ತ್‌ಟು. ತುರ್ತುಗೆ ಮಾತ್ರ ಹೊರ್‌ಡುವ ಕಾರ್‌ಗೆ, ಇಂದ್ ಅದರ ಬುಡುವ ಯಜ್‌ಮಾನ ಹಾವು ಕಚ್ಚ್‌ಸಿಕಂಡೆ ಮಲ್‌ಗಿಟ್ಟು, ಕಾರ್ ಬುಡಂವ ಇಲ್ಲರೂ ಅದರ ತಳ್ಳಿಕಂಡೇ ಪೇಟೆಗೆ ಹೋವ ತಾಕತ್ತ್‌ನ

ಆಳ್‌ಗೇನೊ ಒಳೊ, ಆದರೆ ಏನ್ ಮಾಡ್ದು ಮಾರ್ಗಲಿಡೀ ಮರಗ ಮುರ್ದ್ ಬಿದ್ದೆಳೊ. ಈ ಮಳೆಲಿ ಬಸ್‌ರಿ ಹೆಂಗ್ಸ್‌ನ ಐದಾರ್ ಮೈಲ್‌ನ ಆಸ್ಪತ್ರೆಗೆ ಹೊತ್ತ್‌ಕಂಡ್ ಹೋದಾರು ಹೇಂಗೆ? ಪುಣ್ಯಕ್ಕೆ ಚಾಮವ್ವಂಗೆ ಕುರುಬರ ತೊಂಡಿ ಲಚ್ಚಿಯ ನೆನ್‌ಪಾತ್. ಅವರ ಕೇರಿಗೆಲ್ಲಾ ಆ ತೊಂಡಿ ಲಚ್ಚಿನೇ ದೊಡ್ಡ ನರ್ಸ್! ಎಷ್ಟೋ ದೂರಲಿದ್ದ ಕುರುಬರ ಗುಡ್ಳ್‌ಗೆ ನಡ್‌ದೇಬುಟ್ಟೊ ಚಾಮವ್ವ. ಬಾಗ್‌ಲಿಗೆ ಬಂದ ಯಜಮಾಂತಿನ ಕಂಡೇ ಅರ್ತ ಮಾಡಿಕಂಡ ಲಚ್ಚಿ ತನ್ನ ಸಂಚಿನಸೊಂಟಕ್ಕೆ ಸಿಕ್ಕಿಸಿ, ಬೊಚ್ಚುಬಾಯಿ ಅಗಲ್‌ಸಿ ಒಮ್ಮೆ ನಗಾಡಿ ದೊಣ್ಣೆನೊಂದು ಕೈಲಿ ಹಿಡ್‌ಕಂಡ್ ಚಾಮವ್ವನೊಟ್ಟಿಗೆ ನಡ್‌ದೇಬುಟ್ಟತ್.

ಅಲ್ಲಾ ಈ ಕೂಟೆ ಮಳೆ ಹೊಯ್ದರೆ ಹೇಂಗೆ? ಬಾನೇ ಒಟ್ಟೆ ಆಗುಟ್ಟು ಕಂಡದೆ. ಹಿಂಗಾರೆ ಬಸ್‌ರಿ, ಬಾಣಂತಿಗ, ಕಾಯಿಲೆ ಕಸಾಲೆವರ ಗತಿ ಏನ್. ವಟವಟಾಂತ ಮಳೆಗೆ ಸಾಪ ಹಾಕಂಡ್ ನಡೀತಿತ್ತ್ ಲಚ್ಚಿ. ಹತ್ತುವ ದಾರಿಲಿ ದೊಣ್ಣೆನ ಊರಿ ರೌಕೆ ಹಾಕದ ಬೊಗ್ಗಿದ ಬೆನ್ನ್‌ನ ಒಮ್ಮೆ ನೆಟ್ಟಂಗೆ ಮಾಡಿ ನಡ್ತೇ ನಡ್ತ್. ಮನೆಗೆ ಎತ್ತಿದೇ ಗೊತ್ತು ಸೀದಾ ಬಸ್‌ರಿ ಇದ್ದ ಕೋಂಬರೆಗೆ ಹೋಗಿ ಬಾಗ್‌ಲ್ ಹಾಕಿಕಂಡತ್ ತೊಂಡಿ.

ಮೂಡು ದಿಕ್ಕ್‌ಲಿ ದಿನಮಣಿ ನೆತ್ತ್ರ ಮೆತ್ತಿಕಂಡ ಹಾಂಗೆ ಮೇಲೆದ್ದ್ ಬರ್‌ತ್ತಾ ಉಟ್ಟು. ಮಳೆನ ಆರ್ಬಟ ಕಮ್ಮಿ ಆಗುಟ್ಟು, ಸಿಡ್ಲ್ ಮಿಂಚಿನ ಸದ್ದಿಲ್ಲೆ, ತಣ್ಣನೆಗಾಳಿ ಮೆಲ್ಲಂಗೆ ಬೀಸ್‌ತ್ತಾ ಉಟ್ಟು, ಕೋಳಿ ಕೂಂಗಿ ಜನ್ರ ಎದ್ರೀಂತ ಹೇಳ್ತ್ ಉಟ್ಟು, ಹಕ್ಕಿಗ ಚಿಲಿಪಿಲಿಗುಟ್ಟಿಕಂಡ್ ಇರುವ ಹೊತ್ತಿಗೆ ಕೋಣೆಂದ ಕೂಸುನ ಮರ್ಡ್ ಕೇಳ್ಸಿತ್. ನಿದ್ದೆಲಿ ತೂಗ್ಯಾಂಡ್ ಇದ್ದ ಚಾಮವ್ವ, ಅತ್ತೆ ಎಲ್ಲಾ ಗಡಿಬಿಡಿಲಿ ಎದ್ದ್ ಕೋಣೆಗೆ ಓಡ್ದೊ. ಕೆಂಪು ಕೆಂಪು ನೆತ್ತ್‌ರ್‌ನ ಮುದ್ದೆನಾಂಗೆ ಇದ್ದ ಗಂಡ್ ಕೂಸುನ ಕಂಡ್ ಅವರಿಬ್ಬರ ಮೋರೆ ಮೊರದಗಲ ಆತ್. ಬೊಗ್ಗಿ ಹೋದ ಬೆನ್ನ್‌ನ ಲಚ್ಚಿ, ಪಕ್ಕದ ಕೋಣೆಲಿ ಮಲ್‌ಕಂಡಿದ್ದ ಯಜಮಾನನ ಒಮ್ಮೆ ಬೊಗ್ಗಿ ನೋಡಿ ಮುಸ್‌ಕ್ರ ನೆಗೆ ಮಾಡ್ತ್. ಮೈಲಿಗೆ ತೊಳ್ದ್ ಸುಚಿ ಆಕೆ ಹಳ್ಳದ ಕಡೆ ಹೊರ್‌ಟತ್. ಉಕ್ಕಿ ಹರಿವ ಕನ್‌ಕ್ ನೀರ್‌ಲಿ ಮೀಯೊದು ಬೇಡ, ಇಲ್ಲೇ ಬಿಸಿ ನೀರ್‌ಲಿ ಮೈ ತೊಳ್‌ಕಾಂತ ಹೇಳ್‌ರೂ ಕೇಳದೆ 'ನಾ ಯಾಗ ಬಿಸಿ ನೀರ್‌ಲಿ ಮೀಯ್ದೊಳೆ, ತಣ್ಣೀರ್‌ಲಿ ಮೀಯ್ದರೆ ಮೈಲಿಗೆ ಹೋದೂಂತ' ಹೇಳ್ತಾ ಹಳ್ಳದ ಕಡೆ ನಡ್‌ದೇ ಬುಟ್ಟತ್. ಯಾರ ಮಾತ್‌ನೊ ಕೇಳ್ದೆ ಲಚ್ಚಿ ಉಕ್ಕಿ ಹರಿವ ಕನ್‌ಕ್ ನೀರ್‌ಲಿ ಕಂತಿಯೇ ಬುಟ್ಟತ್!?

* * * * *

# ಆಹುತಿ

ಶಾಂತಿ ಸತ್ತ ಸುದ್ದಿ ನಂಗೆ ಈಗಳೇ ಗೊತ್ತಾದ್ದ್. ಪೋಸ್ಟ್ ಮೇನ್ ನಾಗಪ್ಪ ಕೊಟ್ಟ ಟೆಲಿಗ್ರಾಂನ ಇದೆಂತಾ ಟೆಲಿಗ್ರಾಂಪ್ಪಾಂತ ನಡ್‌ಗುವ ಕೈಯಿಂದಲೇ ತಕಂಡೆ. ಒಡ್ದ್ ನೋಡ್ಕನ ಕಣ್‌ಕತ್ತಲೆ ಬಂದಾಂಗೆ ಆತ್. ಕೈಲಿದ್ದ ಟೆಲಿಗ್ರಾಂ ಕೈಂದ ಜಾರಿ ಬೀತ್. ನಾ ಹಂಗೆ ಕುಸ್ದ್ ಹೋದೆ. ಜಯಂತ ಬಿದ್ದ ಟೆಲಿಗ್ರಾಂ ಕೂಡ್ಳೇ ತಕಂಡ್ ಜೋರಾಗಿ 'ಶಾಂತಿ ಸುಸೈಡೆಡ್'ಂತ ಓದಿತ್.

ಎಲ್ಲವೂ ಏನೇನೊ ಸಮಾದಾನ ಮಾಡ್ತಾ ಇದ್ದೊ. ಕೆಲವು ಕಣ್ಣ್‌ಕಟ್ಟ್‌ನ ಮೋರೆ ಪೂಜುವ ಮಾತ್‌ಗಳ ಆಡ್ತಾ ಇದ್ದೊ. ಕೆಲವು ಜನ ಪಾಪ ಏನ್ ಮಾಡಿಕಣ್ತ್‌ಂತ ಮರ್‌ಗ್ತಿದ್ದೊ. ಆದರೆ ನನ್ನ ಕಣ್ಣ್‌ಂದ ಒಂದು ಹನಿ ಕಣ್ಣೀರೂ ಜಾರ್‌ತ್ಲೆ. ಎಲ್ಲವು ಮರ್ಗರೂ ನಾ ಮಾತ್ರ ಮರ್‌ಗ್ತಿತ್ಲೆ. ಮನ್‌ಸ್‌ನ ದುಃಖದ ಕಿಚ್ಚಿ ಬಂದ ಕಣ್ಣೀರ್ನೆಲ್ಲಾ ಆಹುತಿ ತಕಂಡಿತ್. ಹರ್ದಯ ಅಸಾಂತಿನ ಕೊಳ ಆಗಿತ್. ಶಾಂತಿ ಜನಗಳ ಮಾತಿಗೆ ಆಹುತಿ; ಅದರೊಟ್ಟಿಗೆ ನನ್ನ ಮನ್‌ಸ್‌ನ ಶಾಂತಿನೂ ಆಹುತಿ ತಕಂಡಿತ್.

ನನ್ನ ದೋಸ್ತಿ ಜಯಂತ ಕಣ್ಣೀರ್ ಪೂಜಿಕಂಡ್ 'ರವಿ ದೇವ್ರು ನಿಂಗೆ ಈಸೊಂದು ದುಃಖ ಕೊಡ್ದು

ಬೇಡಾಗಿತ್ತ್. ನೀ ಯಾಗೊಳು ಬೇರೆಯವರ ತನ್ನೊವೇಂತ ತಿಳ್ಕಂಡ್ ಇದ್ದಿಯ. ಬೇರೆವುಕೆ ಯಾವ ಸಾಯನೂ ಮಾಡ್ಯ. ಬೇರೆವರ ಕಸ್ಟ ತನ್ನ ಕಸ್ಟಂತನೇ ಗ್ರೇಸಿಯ. ಎಲ್ಲವೂ ತನ್ನವೇಂತ ಗ್ಯಾನ ಮಾಡಿಯಾ. ಆದರೆ ನಿಂಗೆ ಕಸ್ಟ ಬಾಕನ ಎಸ್ಟ್ ಜನ ನಿಂಗಾಗಿ ಮರ್ಗುವೆ ಹೇಳ್'ಂತ ಹೇಳ್ತ್.

ನಾ ಜಯಂತನ 'ನೀ ಎಲ್ಯಾರ್ ಹೊರಗೆ ಹೋಗು, ನನ್ನ ಒಂಟಿಯಾಗಿ ಇರಿಕೆ ಹಂಞ ಹೊತ್ತು ಬುಟ್ಟಿಯಾ'ಂತ ಒತ್ತಾಯಲಿ ಅವನ ದೂಡ್ದೆ. ಯಾರ ಬೂಟಾಟಿಕೆನ ಸಹಾನುಬೂತಿ ನಂಗೆ ಬೇಡಾಗಿತ್ತ್. ಶಾಂತಿನ ಆಹುತಿಗೆ ಪರೋಕ್ಷ ಆಗಿ ಕಾರಣ ಆಗಿದ್ದವರಲ್ಲಿ ಒಬ್ಬ ಆಗಿದ್ದ ಜಯಂತನ ಮೇಲೆ ಬೇಜಾರ್ ಬಂದಿತ್ತ್. ಮನ್ಸ್‌ಲಿ ಇಪರೀತ ಸಿಟ್ಟಿತ್ತ್. ಬಂದ ಸಿಟ್ಟ್‌ನ ನುಂಗಿಯಂಡ್ ಹೇಂಗಾರೂ ಅವನ ರೂಮುಂದ ಹೊರಗೆ ದೂಡೊಕೂಂತ ಮುಲಾಜಿಲ್ಲದೆ ಕಳ್ಸಿದೆ.

ಶಾಂತಿ ನಿಜಕ್ಕೂ ನನ್ನ ಪ್ರೀತಿನ ತಂಗೆನಾಂಗೆ ಇದ್ದದ್. ನನ್ನ ಯಶಸ್ಸ್‌ಗೆ ಸ್ಪೂರ್ತಿ ದೇವತೆಯಾಗಿದ್ದದ್. ಅದರ ಸುಸೈಡ್‌ಂದ ನಾ ಅಂತೂ ಕೆಲವು ಸಮೆಂದ ಸತ್ತ ಹೆಣನಾಂಗೆ ಒಳೆ. ಸರೀರನ ಅಶಾಂತಿನ ಚಿತೆಲಿ ಸುಡ್ತಾ ಬಂದೊಳೆ, ಬೊದ್ಕುಲಿ ಕುಸೀಂತ ಹೇಳ್ದು ದೂರಾಗಿ ಏಸೋ ಸಮೆ ಆತ್. ಸತ್ಯ ಸಂಗ್ತಿ ಎಂತಾಂತ ಸೆರಿಯಾಗಿ ತಿಳ್‌ಕಣದೆ ಬಾಯಿಗೆ ಬಂದಾಂಗೆ ಬೊಗುಳುವವರ ಗ್ರೇಸಿಕಂಡ್ ಎತೆ ಆದೆ. ಪ್ರಾಯಕ್ಕೆ ಬಂದ ಗೂಡೆ ಹೈದಂಗ ಎಲ್ಯಾರ್ ಏನಾರ್ ಮಾತಾಡಿಕಂಡಿದ್ದರೆ ಸಾಕ್, ಅವು ಯಾರ್, ಏನ್‌ಂತ ತಿಳಿವ ಗೊಡವೆಗೆ ಹೋಗದೆ, ಅವರ ಅಪ್ಪ ಅವ್ವನ ಕೇಳದೆ, ಕಾಗದ ಪ್ರಿಂಟ್ ಮಾಡ್ಸದೆ, ವಾಲಗ ಉರ‍್ಗದೆ ಆ ಗೂಡೆ ಹೈದಂಗಳಿಗೂ ಗೊತ್ತಿಲ್ಲದಾಂಗೆ ಮೊದುವೆ ಮಾಡಿ ಬುಡುವ ಈ ಜನಂಗಳ ಕಂಡರೆ ಅಯ್ಯೋ ಅನ್ಸಿದೆ. ಅವರ ಕಾಮಲೆ ಕಣ್ಣ್‌ಗೆ ಎತೆ ಆದೆ. ಜನಗಳ ಮಾತ್‌ಂದಾದ ಪರಿಣಾಮನ ಈಗ ಯಾಗೊಳು ಉಣಕಾಗಿ ಬಂದುಟ್ಟು, ಹೂಂ.... ಇದ್.... ಇಂದ್‌ನ ಕತೆ, ಆದರೆ ಅಂದ್....!!?

ನಂಗೆ ಎಲ್ಲಾ ಸೆರಿಯಾಗಿ ನೆನ್‌ಪುಗೆ ಬಂದದೆ. ಆಗ ನಾ ಕೊಡ್ಗ್‌ನ ಹೈಸ್ಕೂಲ್ ಒಂದರ್‌ಲಿ ಮಾಸ್ತ್ರಾಗಿದ್ದೆ. ಶಾಂತಿ ನನ್ನ ವಿದ್ಯಾರ್ಥಿನಿ. ಬಾಕಿ ಗೂಡೆ ಹೈದಂಗಳ ಹಾಂಗೆ ಶಾಂತಿನೂ ನನ್ನ ಕೈಲಿ ಟ್ಯೂಸನ್ ಹೇಳ್ಸಿಕಂತ ಇತ್ತ್. ಹೆಚ್ಚಿನ ಮಕ್ಕ ಪಾಪದವರ ಮನೇಂದ ಬಾವೆ ಆದರ್‌ಂದ ಪುಗ್ಸಟೆ ಟೂಸನ್ ಕೊಡ್‌ತಿದ್ದೆ. ನಿಸ್ವಾರ್ಥ ಸೇವೆನ ಬೆಲೆನೇ ಗೊತ್ತಿಲ್ಲದ ಈಗನ ಲೋಕಲಿ, ನನ್ನ

ಪುಗ್ಸಟೆ ಪಾಠಕ್ಕೆ ಮುಗ್ಧ ಮಕ್ಕಳ್‌ಂದ ಹರ್ದಯ ತುಂಬಿದ ಬೆಲೆ ಬಂದಿತ್ತ್. ಮುದ್ದುಮೋರೆನ, ಮುಗ್ಧ ಹರ್ದಯದ ಶಾಂತಿ ನನ್ನ ಮನ್‌ಸ್‌ನ ಗೆದ್ದಿತ್ತ್. 'ಶಾಂತಿ'ಂತೇಳುವ ಹೆಸ್ರ್ ಅದಕ್ಕಾಗಿಯೇ ಹುಟ್ಟಿದಾಂಗೆ ಇತ್ತ್. ಅಕ್ಕ ತಂಗೆಕ ಇಲ್ಲದ ಒಂಟಿ ಪಿಸಾಚಿನಾಂಗೆ ಇದ್ದ ನನ್ನ ಬರ್ಡ್ ಹರ್ದಯ ನಂಗೆ ಗೊತ್ತಿಲ್ಲದಾಂಗೇ ಅದರ ನೆಂಪು ಮಾಡ್ತಿತ್ತ್. ಹದ್ನೈದ್ ವರ್ಸ ಪ್ರಾಯ ಆಗಿದ್ದರೂ ಗೂಡೆ ಹಸು ಕೂಸುನಾಂಗೆ ಮೊದ್ದು ಮೊದ್ದಾಗಿ ಇತ್ತ್. ಯಾಗೊಳು ನೆಗೆ ಮೋರೆಲಿ ಬಂದ್ ಗೊತ್ತಿಲ್ಲದ ಪಾಠಗಳ ಕೇಳಿ ಕಣ್‌ತಿತ್ತ್. ನಾ ಕಾರಂತರ ಕಾದಂಬರಿನೊ, ಡಿ.ವಿ.ಜಿ.ಯವರ 'ಮಂಕು ತಿಮ್ಮನ ಕಗ್ಗ'ನೊ ಓದಿಕಂಡಿದ್ದರೆ ನಾನೂ ಓದಿನೆ ಕೊಡೀಂತ ಕೇಳಿಕಂಡ್ ಹೋಗಿ, ಅರ್ಥ ಆಗದ್ರೂ ಓದಿ ತಾತಿತ್ತ್. ನಾ ಓದುದೆಲ್ಲಾ ಲಾಯಿಕ್‌ನ ಪುಸ್ತಕ, ಎಲ್ಲಾ ಒಳ್ಳೆದೇಂತೇಳುವ ಕುರುಡು ನಂಬಿಕೆ ಅವಳ್ದಾಗಿತ್ತ್.

ಇಂತಾ ಮೊದ್ದು ಪೆದ್ದು ಗೂಡೆನ ಮರಿಯಕೆ ನನ್ನ ಕೈಲಿ ಆತೇ ಇತ್ಲೆ. ಏನೇ ಆದರೂ, ನನ್ನೊಟ್ಟಿಗೆ ಬೇರೆ ಮಾಸ್ಟ್ರ್ ಟೀಚರ್‌ಗ ಇದ್ದರೂ ದಿನಕೊಮ್ಮೆಯಾರ್ ಬಂದ್ ಏನಾರ್ ನೆಪಲಿ ಮಾತಾಡ್ಸಿಕಂಡ್ ಹೋತಿತ್ತ್. ಅದಕ್ಕೆ ಏನಾರ್ ಮಾಡಿಕಿದ್ದರೂ ನನ್ನ ಕೇಳಿಯೇ ಆಕಾಗಿತ್ತ್. ನನ್ನ ದೇವ್ರಹಾಂಗೆ ನಂಬಿಕಂಡಿದ್ದ ಅದರ ಪ್ರೀತಿ ಅಭಿಮಾನನ ಕಾಂಬಕನ ಆಸ್ಚರ್ಯ ಆತಿತ್ತ್. ಶಾಂತಿನ ನಿಷ್ಕಲ್ಮಸ ಮಮತೆ ನನ್ನ ಬಾಳ್‌ಲಿ ಅಕ್ಕತಂಗೆಕ ಇಲ್ಲದ ಕೊರ್ತೆನ ಕೊಚ್ಚಿಕಂಡ್ ಹೋವಾಂಗೆ ಮಾಡಿತ್ತ್. ಹಗಲೂ ಇರ್‌ಳೂ ನಂಗೆ ಅದರ ನೆಂಪೇ ಆಗುವಾಂಗೆ ನನ್ನ ಮನಸ್‌ನ ಗೆದ್ದಿತ್ತ್.

ಶಾಂತಿ ನಮ್ಮ ಸಾಲೆ ಹಕ್ಕಲೆನ 'ವ್ಯಾಲಿ ವ್ಯೂ' ಕಾಪಿ ತೋಟದ ಸಾವುಕಾರ ಭೀಮಯ್ಯನವರ ಮಗಳ್. ಆಗರ್ಭ ಸ್ಥಿತಿವಂತರಾದ ಭೀಮಯ್ಯನವು ಆಗಲಿ ಅಯ್ಯೆ ಕಾವೇರಮ್ಮ ಆಗಲಿ ತಮ್ಮ ಮಕ್ಕಳಿಗೆ ತಮ್ಮ ದುಡ್ಡುನ ಅಹಂಕಾರನಾಗಲೀ ದೊಡ್ಡಸ್ತಿಕೆನಾಗಲೀ ಕಲ್ಸಿತ್‌ಲೆ. ಗರೀಬರ ಕಂಡರೆ ಕರುಣೆ, ಗುರು ಹಿರಿಯರ್ಲಿ ಭಕ್ತಿ, ಸಮ ವಯಸ್‌ನವರೊಟ್ಟಿಗೆ ಪ್ರೀತಿ, ವಿಸ್ವಾಸಗಳ್ನೆಲ್ಲಾ ಇದ್ಯಾವಂತರಾದ ಅಪ್ಪ ತನ್ನ ಮಕ್ಕಳಿಗೆ ಕಲ್ಸಿದ್ದೊ. ಶಾಂತಿ ಭೀಮಯ್ಯನವರ ಮುದ್ದ್‌ನ ಮಗ. ಸುರುನವು ಇಬ್ಬೊರು ಗಂಡ್ ಮಕ್ಕ ಆದ ಮೇಲೆ ಹೆಣ್ಣ್ ಕೂಸೊಂದು ಬೇಕುಂತೇಳುವ ಅವರ ಆಸೆನಂಗೆ ಹುಟ್ಟಿದ ಮಗ ಶಾಂತಿ. ಎಸ್ಟೋ ಸರ್ತಿ ಚಂದಾ ಕೇಳಿಕೋ, ಬೇರೆ ಏನಕ್ಕೋ ನಾವು ಮಾಸ್ಟ್ರ್‌ಗ ಅವರ ಮನೆಗೆ ಹೋತಿದ್ದೊ.

ಅರ್‌ಮನೆನಾಂಗೆ ಇರುವ ಅವರ ಮನೆಗೆ ಹೋಕೆ ಅಳ್‌ಕ್ ಆತಿದ್ದರೂ ಶಾಂತಿನ ಮಮತೆ, ಭೀಮಯ್ಯನವರ ಔದಾರ್ಯ, ಕಾವೇರಮ್ಮನವರ ಸಂಮಾನ ನಮ್ಮ ಆಗಾಗ ಅವರ ಮನೆಗೆ ಹೋಗುವಾಂಗೆ ಮಾಡ್‌ತ್ತಿತ್ತ್.

ನಮ್ಮದ್ ಗುರು ಶಿಷ್ಯೆಯ ಸಮ್ಮಂದ. ನಮ್ಮ ಪಾಟದ ರೀತಿ ತುಂಬಾ ಇಚಿತ್ರ. ಯಾವುದೇ ಪಾಟ ಮಾಡ್ಕನೂ ಶಿಷ್ಯೆದೇ ಪ್ರಸ್ನೆಗಳ ಸುರಿಮಳೆ. ಅದ್‌ಕೇಳುವ ಎಲ್ಲಾ ಮುಗ್ಧ ಪ್ರಸ್ನೆಗಳಿಗೆ ಬೇಜಾರ್ ಮಾಡಿಕಣದೆ ತಾಳ್ಮೆಂದ ಉತ್ತರ ಕೊಡ್ತಿದ್ದೆ. ಮೊನ್ಸನ ಜೀವನಲಿ ಬರೀ ಸೀಂಯೇ ಅಲ್ಲ ಕಂಯಿನೂ ಇದ್ದದ್ದೇಂತೇಳುದರ ಆದಸ್ಟ್ ಮಟ್ಟಿಗೆ ಹೇಳಿ ಕೊಡ್‌ತಿದ್ದೆ. ಬೊದುಕುಂತೇಳ್‌ರೆ ಬರೀ ಬೆಲ್ಲ ಮಾತ್ರಲ್ಲ, ಬೇವುನೂ ಇದ್ದದೆ, ಬರುವ ಕಸ್ಟ ಸುಖನ ದೈರ್ಯಂದ ಎದ್‌ರ್‌ಸೊಕೂಂತೇಳುವ ಜೀವನ ಪಾಟನೂ ಮಾಡ್‌ತಿದ್ದೆ. ಬಾಳ್ವೆನೇ ಬೆಳ್‌ಕ್, ಮೊನ್‌ಸತ್ವನೇ ಮೊನ್ಸಂಗೆ ಇರಕಾದ್ದ್‌ಂತ ಅದೆಸ್ಟೋ ಉಪದೇಶಗಳ ಮಾಡ್‌ತ್ತಿದ್ದೆ. ನನ್ನ ಪಾಟದ ವಿಸೆಯನ ಕೆಲವು ಮಾಸ್ಟ್ರಗ ಕದ್ದ್ ಕೇಳ್‌ತಿದ್ದೊ, ಮತ್ತೆ ಕೆಲವು ನಿಲ್ಕಿ ನೋಡಿ ಹೋತಿದ್ದೊ. ನಾವು ಮಾತ್ರ ಪಾಟಲೇ ಮುಳ್‌ಗಿಯಂಡ್ ಇರ್‌ತಿದ್ದೊ. ನಮ್ಮ ರೂಂಲಿ ನಾ ಶಾಂತಿನ ಮೊದ್ದುತನದ ಬಗ್ಗೆ ಮಾತಾಡ್‌ತ್ತಿದ್ದೆ. ಅವಳ ಗುಣಗಳ ಹೊಗ್‌ಳ್‌ತ್ತಿದ್ದೆ. ಕೆಲವು ಸರ್ತಿ ಶಾಂತಿ ನನ್ನ ರೂಂಗೂ ಬಂದ್ ಹೋತ್ತಿತ್ತ್.

ಅಂದ್ ನವಂಬರ್ ಒಂದು; ಶಾಂತಿನ ಬರ್ತ್‌ಡೇ ದಿನ ನಾ ರಾಜ್ಯೋತ್ಸವದ ದಿನ ಹುಟ್ಟಿದವಳೂಂತ ಅದಕ್ಕೆ ಹೆಮ್ಮೆ. ನಾ ಸಾಲೆನ ರಾಜ್ಯೋತ್ಸವ ಆಚರಣೆ ಮುಗ್ಸಿ ಬಂದ್, ಆರಾಮಲಿ ಕುದ್ದ್‌ಕಂಡ್ ಭಾರತ ರತ್ನ ಡಾ: ಸರ್ವಪಳ್ಳಿ ರಾಧಾಕೃಷ್ಣನ್ ರವರ 'ಮಾನವ ಹಾಗೂ ಧರ್ಮ'ಂತೇಳುವ ಪುಸ್ತಕನ ಓದಿಕಂಡಿದ್ದೆ. ಆ ಓದುಲೇ ನನ್ನ ನಾ ಮರ್‌ತಿದ್ದೆ. ರಾಧಾಕೃಷ್ಣನ್‌ರವರ ನುಡಿಗ ಬೆಳ್‌ಕ್‌ನ ಕಿಡಿನಾಂಗೆ ಹೊಳ್‌ಪ್‌ತ್ತಿತ್ತ್. 'ಮಾನವನು ಹಕ್ಕಿಗಳಂತೆ ಹಾರುವುದನ್ನು ಕಲಿತ, ಮೀನುಗಳಂತೆ ಈಜುವುದನ್ನ ಕಲಿತ, ಆದರೆ ಮಾನವನಂತೆ ಬಾಳುವುದನ್ನು ಮರೆತ'!

ಅಬ್ಬಾ!! ಎಂತಾ ಮಾತ್‌ಗ, ಓದಿಕಂಡ್ ಇದ್ದಾಂಗೆ ಮೈನ ರೋಮ ಎಲ್ಲಾ ಕುತ್ತಾತ್. ಕುಸಿಲಿ ಪುಸ್ತಕನ ಎದೆನ ಮೇಲೆ ಇಸಿಕಂಡೆ. ಕಣ್ಣ್‌ಹಾಂಗೆ ಮುಚ್ಚಿಕಂಡತ್. ಆದರೆ ಮನ್‌ಸ್‌ಲಿ ರಾಧಾಕೃಷ್ಣನ್‌ರವರ ಮೊನ್ಸತ್ವದ ಸಮುದ್ರಲಿ ಮೀಯಿತಾ ಇದ್ದೆ. ಆಗ ಅಲ್ಲಿಗೆ ಬಂದ ಶಾಂತಿ ನಾ ನಿದ್ದೆ ಮಾಡ್ತಾ ಒಳೇಂತ ಗ್ರೇಸಿ, ನನ್ನ ಎದೆನ ಮೇಲೆ ಇದ್ದ ಪುಸ್ತಕನ ಮೆಲ್ಲೆ ತೆಗಿಯತ್ತಿತ್ತ್. ಇದ್ದಕ್ಕಿದ್ದ ಹಾಂಗೆ ಯಾರೋ

ಜೋರು ನೆಗಾಡ್ದು ಕೇಳಿ ನಾ ಕಣ್ಣ್ ಬುಟ್ಟೆ. ಯಾವುದೋ ಲೋಕಲಿ ಇದ್ದಂವ ಈ ಲೋಕಕ್ಕೆ ಬಂದೆ. ಆದರೆ ನಾ ಕೇಳುವ ಮಾತ್ ಇದೆಂತದ್ 'ಕೊತ್ತಿ ಕಣ್ಣ್ ಮುಚ್ಚಿಕಂಡ್ ಹಾಲ್ ಎಸ್ಟ್ ದಿನಾಂತ ಕುಡಿಯೊದು' ಹೀಂಗೆ ಹೇಳಿಕಂಡ್ ಬಾಗ್‌ಲ್‌ನವರೆಗೆ ಬಂದ ಜಯಂತ ವ್ಯಂಗ್ಯಲಿ ನೆಗಾಡಿಕಂಡ್ ಹೊರಗೆ ಹೋಕೆ ನೋಡ್‌ತ್ತಿತ್ತ್. ನೆಂಜಿನ ಕೊಂಕು ಮಾತ್‌ನ ಕೇಳ್ದ ಶಾಂತಿ, ದುಃಖ ಸಯಿಸಿಕೆ ಆಗದೆ 'ಸಾರ್ ನೀವು ಇವರ ಹಾಂಗೆ ನನ್ನ ಗುರುಗ, ಹಿರಿಯವುಂತ ತಿಳ್‌ಕಂಡ್ ಸುಮ್ಮನೆ ಒಳೆ, ನಾ ಗೂಡೆ ಆಗಿರುವೆ, ಆದರೆ ಮೊನಸ್ತನ ಬುಟ್ಟ್, ಮಾನ ಕಳ್‌ಕಂಬ ಕುಲಟೆ ಅಲ್ಲಾ. ಪ್ರೀತಿಂದ, ಸ್ವಾರ್ಥಬುಟ್ಟ್ ಪಾಟಹೇಳಿಕೊಟ್ಟ ಗುರು ಕಣ್ಣ್ ಕೊಟ್ಟ ದೇವ್ರ ಹಾಂಗೆ. ಅವರೊಟ್ಟಿಗೆ ನಾ ಇಂದ್‌ನವರೆಗೆ ಹೇಂಗೆ ನಡ್‌ಕಂಡರೂ ಗುರೂಂತೇಳುವ ಗೌರವಂದಲೇ, ಹೆಚ್ಚೀಂತೇಳ್ರೆ ಅಣ್ಣತಂಗೆನ ಪ್ರೀತಿ, ಮಮತೆನಾಂಗೆ. ಸರೀರದ ಮೋಹಂದ ನಾವು ಅನ್ಯೋನ್ಯವಾಗಿ ಒಳೋಂತ ನಿಮ್ಮ ಕಾಮಾಲೆ ಕಣ್ಣ್‌ಗೆ ಕಂಡರೆ ನಾ ಏನೂ ಮಾಡಿಕೆ ಆಲೆ. ಅದ್ ನಿಮ್ಮ ಸಣ್ಣ ಮನ್ಸ್, ಮೂಢತನ. ನಿಮ್ಮ ಈ ಕೊಂಕು ಮಾತ್‌ಗೆ ನಾ ಏನೂ ಹೇಳ್ದುಲ್ಲೆ.'

ಶಾಂತಿ ಇಸ್ಟ್ ಹೇಳಿ ತತ್ತರ್ಸಿದ ಹರಿಣಿನಾಂಗೆ ನನ್ನ ಒಮ್ಮೆ ಕರುಣಾ ದಿಟ್ಟಿಂದ ನೋಡಿ ಸರ್ಕನೆ ಕಣ್ಣೀರ್ ಸುರ್ಸಿಕಂಡ್ ಹೊರ್ಲು ಹೋತು. ಬರ್ತ್‌ಡೆ ಕುಸಿಲಿ ಮಾಸ್ಟ್ರಗಳಿಗೆ ಕೊಡಿಕೇಂತ ತಂದಿದ್ದ ಸ್ವೀಟ್ ಪೆಕೇಟ್, ಮೇಜಿನ ಮೇಲೆ ಬಿದ್ದಿತ್ತ್. ನಾ 'ಲೋಕದ ಎಲ್ಲರ್ರೂ ಮೆಚ್ಚುಸುದು ಮೂರ್ಖತನ'ಂತ ಗ್ರೇಸಿಕಂಡ್ ಉಸ್ಸಪ್ಪಾಂತ ಕುದ್ದುಬುಟ್ಟೆ.

ಶಾಂತಿ ಅಂದ್‌ಂದ ನಮ್ಮ ರೂಮಿಗೆ ಬಾದರ ಬುಟ್ಟತ್. ನಾ ಅಂತೂ ಸಾಲೆಲಿ ಎಲ್ಲಾ ಮಕ್ಕಳೊಟ್ಟಿಗೆ ಅದಕ್ಕೂ ಟ್ಯೂಸನ್ ಹೇಳ್ತಿದ್ದೆ. ಆದರೆ ಶಾಂತಿ ಹಿಂದೆನಾಂಗೆ ಇತ್ಲೆ. ಗೊತ್ತಿಲ್ಲದರ್ರೂ ಕೇಳಿಕೆ ಬಾತಿತ್ಲೆ. ಅವಳ ಪ್ರೀತಿ, ವಿಸ್ವಾಸನ ಜಯಂತನ ಕೊಂಕು ಮಾತ್‌ಗ ನುಂಗಿ ನೀರ್ ಕುಡ್ದಿತ್ತ್. ಪಾಟ ಮಾಡ್ಕನ ಅದರ ಮನ್‌ಸ್ ಎಲ್ಲಿಯೋ ಇರ್ತಿತ್ತ್. ಅದರ ಕದಡ್ದ ಮನ್‌ಸ್‌ನ ತಿಳಿ ಮಾಡಿಕೆ ನನ್ನಂದ ಆತೇ ಇಲ್ಲೆ.

ಜಯಂತನ ಸಂಸಯದ ಕಿಡಿಗೆ ಇನ್ನು ಕೆಲವು ಹಿತ್ತಾಳೆ ಕೆಬಿನ ಮಾಸ್ಟ್ರಗ ಗಾಳಿ ಹಾಕಿದೊ. ಶಾಂತಿನ ದೋಸ್ತಿ ಗೂಡೆಗಳೂ ಅದರ ಸಂಸಯಂದ ನೋಡಿಕೆ ಸುರು ಮಾಡ್ದೊ. ಅದಕ್ಕೆ ಕೇಳುವಾಂಗೆ ಕೆಲವು ಗೂಡೆಗೆ ಕೊಂಕು ಮಾತಾಡ್‌ತ್ತಿದ್ದೊ... ಹೀಂಗೆಲ್ಲಾ ಆಗಿ ಶಾಂತಿಗೆ ಸಾಲೆ ಮಸಣ ಆತ್. ಈಗ ಶಾಂತಿ ಎಲ್ಲಿ ಹೋದರೂ ಒಂಟಿಯೋ ಒಂಟಿ. ಯಾರೂ ಅದರೊಟ್ಟಿಗೆ ಸೇರ್‌ತ್ತಿತ್ಲೆ.

ಮನ್ಸ್ ಬಿಚ್ಚಿ ಮಾತಾಡ್‌ತ್ತಿತ್ಲೆ. ಯಾರೂ ಸೌಜನ್ಯಂದ, ಆತ್ಮೀಯವಾಗಿ ಸಮಾದಾನ ಮಾಡೊವೂ ಇತ್ಲೆ. ನಾ ಅಂತೂ ಅದರ ಬಗ್ಗೆ ಗೇನ ಮಾಡಿ ಮಾಡಿ ಸಾಕಾದೆ.

ಹೀಂಗೇ ಐದಾರ್ ತಿಂಗ ಕಳ್ತ್. ಈಗ ಶಾಂತಿ ಸಾಲೆಗೆ ಬಾದುಲ್ಲೆ. ಮನೆವರ ಒತ್ತಾಯಕ್ಕೆ ಎಸ್.ಎಸ್.ಎಲ್.ಸಿ. ಪರೀಕ್ಷೆ ಬರ್ದ್, ಅಲ್ಲಿಂದಲ್ಲಿಗೆ ಪಾಸೇನೋ ಆತ್. ಆ ಮೇಲೆ ನಾ ಕಾಲೇಜಿಗೆ ಹೋದೇ ಇಲ್ಲೇಂತ ಹಠ ಮಾಡಿ ಮನೆಲೇ ಇತ್ತ್. ಇದೆಲ್ಲಾ ಗೊತ್ತಾಗಿ ಒಂದು ಐತಾರ ನಾ ಶಾಂತಿನ ಮನೆಗೆ ಹೋದೆ. ಶಾಂತಿನ ಮುದ್ದು ಮೋರೆ ಅಶಾಂತಿಂದ ಬೇಯ್‌ತ್ತಿತ್ತ್. ಸರೀರ ಬೊಚ್ಚಿ ಕಡ್ಡಿನಾಂಗೆ ಆಗಿ ಹೋಗಿತ್ತ್. ಅದೇನೋ ಹೇಳೊಕೂಂತ ತುಟಿ ತವಕಿಸ್‌ತ್ತಿತ್ತ್. ಆದರೆ ಮಾತ್ ಹೊರ್ಡ್‌ತ್ತಿತ್ಲೆ. ಮೂಕಿನಾಂಗೆ ಬಾಗ್ಲ್‌ಗೆ ಒರ್ಗಿ ನಿತ್ತ್‌ಕಂಡ್ ಇತ್ತ್. ನಾನೇ ಮಾತಾಡಿಕೆ ಸುರು ಮಾಡ್ದೆ.

'ಶಾಂತಿ'

'ಹೂಂ'

'ಮಾತಾಡ್‌ದ್ಲೆನಾ?'

ಶಾಂತಿ ಮಾತಾಡದ್ರೂ, ಮಾತಾಡುವಾಂಗೆ ತಲೆ ದೂಂಗಿತ್. ಬಾಚಿದ ತಲೆನ ಎಡ್ದ್ ಬೊಗ್ತಲೇಂದ ಎರಡೇ ಎರ್ಡ್ ಗುಂಗುರು ಕೂದೊಲು ಕೆನ್ನೆ ಮೇಲೆ ಕೊಣ್‌ದಾಡ್ತ್. ಎದೆ ಮೇಲೆ ಹಾಕ್ಯಂಡಿದ್ದ ಮೋಟು ಜಡೆನ ಬೆರ್‌ಳ್‌ಲಿ ಸುತ್ತುತ್ತಿತ್ತ್. ಹಂಞ ಹೊತ್ತು ಯಾರ್ದೂ ಮಾತಿಲ್ಲೆ, ಕಣ್ಣ್ ತುಂಬಿ ಕಣ್ಣೀರ್ ಹರಿಯಕೆ ರೆಡಿಯಾಗಿತ್ತ್ . . . . ಆಗ

'ಸಾರ್'

'ಹೂಂ ಏನ್'

'ನನ್ನ ಒಂದು ಆಸೆನ ನಡ್‌ಸಿ ಕೊಟ್ಟರೆನಾ?' 'ಏನ್ ಎಂಥ ಆಸೆ ನಿನ್ನದ್'

'ನೀವು ನನ್ನೊಮ್ಮೆ ಬಾಯ್ತುಂಬಾ ತಂಗೇಂತ ಕರ್ದರೆನಾ'

'ಹೂಂ ಇಲ್ಲೆ'

'ಹಾಂ ! ! ! '

'ನನ್ನ ಮಾತ್ ಕೇಳೋ ಹಾಂಗಿದ್ದರೆ'

'ಹೂಂ ಖಂಡಿತಾ ಕೇಳ್ನೆ'

'ಎಲ್ಲಿ ನನ್ನ ಒಮ್ಮೆ ಅಣ್ಣಾಂತ ಕರಿ'

ನಾಚಿಕೆಂದ ತಲೆ ಬೊಗ್ಗ್‌ಸಿ, 'ಅಣ್ಣಾ, ನನ್ನ ಪ್ರೀತಿನ ಅಣ್ಣಾ.... 'ಂತ ಹೇಳ್ದ ಶಾಂತಿನ ಹಕ್ಕಲೆ ಎಳ್ದ್ ಪ್ರೀತಿಂದ ತಲೆನ ನೇವರ್‌ಸಿದೆ. ಅಷ್ಟಾಕನ 'ಶಾಂತಿ ಏ ಶಾಂತಿ'ಂತ ಕರ್ಕಂಡ್ ಕಾವೇರಮ್ಮನವು ಬಂದೊ. ಶಾಂತಿ ನಾಚಿಕೆಂದ ನನ್ನ

ಹಕ್ಕಲೆಂದ ಒಳಗೆ ಓಡ್ತ್. ಕಾವೇರಮ್ಮ ಸಿಟ್ಟ್‌ಲಿ ಸಿಂಹಿಣಿಯಾಗಿ 'ಮಾಸ್ಟ್ರೇ ನಿಮ್ಮ ದಮ್ಮಯ್ಯ, ಇನ್ನು ಮುಂದೆ ನಮ್ಮ ಮನಗೆ ಬರ್ಬೇಡಿ, ನಿಮ್ಮಂದಾಗಿ ನಮ್ಮ ಮನೆ ಹೆಸ್ರ್ ಮರ್ಯಾದೆ ಎಲ್ಲಾ ಮೊಣ್ಣು ಪಾಲಾತ್. ಕೊತ್ತಿ ಸನ್ಯಾಸಿ ಆದಾಂಗೆ ಇರ್ದು ನಂಗೂ ಗೊತ್ತಾತ್'.

ಈ ಘಟನೆ ನಡ್ದ್ ಮತ್ತೆರಡ್ ವರ್ಸ ಆತ್. ಶಾಂತಿ ಈಗ ಕಾರ್ಯಪ್ಪನ ಕೈ ಹಿಡ್ದುಟ್ಟು. ಶಾಂತಿ ಇನ್ನಾರ್ ಸುಕ ಶಾಂತಿಂದ ಇರ್ದೂಂತ ಗ್ರೇಸಿದೆ. ಆದರೆ ಅಂದ್ ಭೀಮಯ್ಯನವು ಹೇಳ್ದರ ಕೇಳಿ ಎದೆ ನಡ್‌ಗಿತ್. "ಮಿ:ರವಿ, ಕಾರ್ಯಪ್ಪ ಈಗ ನಿಮ್ಮ ಮೇಲೆ ಸಂಸಯ ಪಡ್ತಾ ಉಟ್ಟು. ಶಾಂತಿ ಯಾಗೊಳು ಕಣ್ಣೀರ್‌ಂದ ಕೈತೊಳಿತಾ ಉಟ್ಟು. ರಾತ್ರಿ ಒಮ್ಮೊಮ್ಮೆ 'ಸಾರ್ ಅಣ್ಣಾಂ'ತ ಕನ್‌ಸ್‌ಲಿ ಮಾತಾಡ್ದೆ ಗಡ.

ನಂಗೆ ಬಾಯಿಂದ ಮಾತೇ ಹೊರ್ಟತ್ತ್ಲೆ. ದೆವ್ವ ಮೆಟ್ಟಿದವರಾಂಗೆ ಕೈಕಾಲ್ ನಡ್‌ಗ್‌ತ್ತಿತ್. ಹೇಂಗೋ ಅಲ್ಲಿಂದ ಬಂದ್ ರೂಂ ಸೇರ್ದೆ. ಮನಸ್ ಕಲ್ಲಾತ್. ಹರ್ದಯ ಬರ್ಡಾತ್. ಯಂತ್ರದಾಂಗೆ ಸಾಲೆಗೆ ಹೋಗಿ ಬಾತಿದ್ದೆ. ಈ ಊರು ಸಾಕಪ್ಪಾ ಸಾಕ್, ಇಲ್ಲಿಂದ ವರ್ಗ ಮಾಡ್ಸಿಕಂಡ್ ಯಾವ್‌ದಾರ್ ಊರಿಗೆ ಹೋಗಿ ಬುಡೊನಾಂತ ಆತಿತ್. 'ಸತ್ಯ ಹೇಳ್ದಂವ ಸತ್ತು ಹೋದು, ಅನ್ನೆಯ ಮಾಡ್ದಂವ ಅನ್ನತಿಂಬೊದು'ಂತ ಅಪ್ಪ ಹೇಳ್ತ್ತಿದ್ದ ಮಾತ್ ನೆನ್‌ಪಾತ್.

ಅಂದ್ ಅದೇ ನವಂಬರ್ ಒಂದು. ಎಲ್ಲೆಲ್ಲೂ ಗೌಜಿಯೇ ಗೌಜಿ. ರಾಜ್ಯೋತ್ಸವದ ಸಂಭ್ರಮವೇ ಸಂಭ್ರಮ. ಎಲ್ಲವೂ ಯಾಗೊಳುಂದ ಹೆಚ್ಚಿ ಹುರುಪುಲಿ ಇದ್ದಾಂಗೆ ಕಾಂಬತ್ತಿತ್. ಸಾಲೆನ ಸಮಾರಂಭ ಮುಗ್ಸಿ, ರೂಂಗೆ ಬಂದ್ ಈಸೀ ಚೇರ್‌ಲಿ ಜೀವ ಇಲ್ಲದವರಾಂಗೆ ಬಿದ್ದ್‌ಕಂಡಿದ್ದೆ. ಮಾಸ್ಟ್ರಗ ಎಲ್ಲಾ ಸೇರಿಕಂಡ್ ರಾಜ್ಯೋತ್ಸವದ ಕಾರ್ಯಕ್ರಮದ ಇಚಾರ ಮಾತಾಡ್ತಾ ಇದ್ದೊ. ನಂಗೆ ಅವರ ಯಾವ ಮಾತೂ ಕೆಬಿಗೆ ಹೋತಿತ್ಲೆ. ಅದೇನೊ ಎತೆನೋ, ಬೇನೆನೋ ನನ್ನ ಹರ್ದಯನ ಹಿಂಡ್‌ತಾ ಇತ್. ನಾ ಸೂನ್ಯ ದೃಷ್ಟಿಂದ ರೂಮುನ ಎದ್ರ್‌ಗೆ ಇದ್ದ ಮುಳ್ಳು ಬೇಲಿನ ನೋಡ್‌ತ್ತಿದ್ದೆ. ಮೊನ್ಸನ ಮನ್‌ಸ್‌ನ ಕುತ್ತುವ ಮುಳ್ಳು ಬೇರೆ ಉಟ್ಟುಂತೇಳ್ದರ ಗ್ರೇಸದೆ ಮುಳ್ಳು ಬೇಲಿಗೆ ಸಾಪ ಹಾಕ್‌ತ್ತಿದ್ದೆ. ಹಾಂಗೆ ಇರ್ಕನ ಪೋಸ್ಟ್‌ಮೇನ್ ನಾಗಪ್ಪ "ಟೆಲಿಗ್ರಾಂ ಸರ್'ಂತ ಹೇಳ್ತ್ !!! ನನ್ನ ಪ್ರೀತಿನ ಶಾಂತಿ ಈಲೋಕ ಬುಟ್ಟ್ ಹೋಗಿತ್. ನನ್ನ ಮನ್‌ಸ್‌ನ ಶಾಂತಿನೂ ಸುಟ್ಟ್ ಬೂದಿಯಾಗಿತ್.

* * * * *

## ಆಸ್ಪತ್ರೆ ಹಾಸಿಗೆಲಿ. . . ! ?

ಕಿಸ್‌ಕ್ಕನೆ ತನ್ನಷ್ಟಕ್ಕೆ ನೆಗಾಡ್‌ದ ಹೆಣ್ಣ್‌ನ ಗಂಡ ಕೇಳ್‌ತ್ 'ಯಾಕೆನೆ ನೆಗಾಡಿಯಾ ಏನಾತ್, ಒಬ್ಬಳೆ ನೆಗಾಡಿಯಲ್ಲಾ ನಂಗೂ ಹಂಞ ಹೇಳ್, ನಂಗೂ ಹಂಞ ಕುಸಿಯಾಗಲಿ'. 'ಹೌದು, ಈಗ ನೀವುಗೆ ಯಾವ ಕುಸಿನೂ ಇಲ್ಲೆ. ನಾ ಎಂತ ಮಾಡಕ್ ಹೇಳಿ? ಈ ಹಾಳ್ ದರಿದ್ರ ಕಾಯಿಲೆ ಕ್ಯಾನ್ಸರ್ ನಂಗೇ ಬರೊಕೊ? ನನ್ನಂದಾಗಿ ಯಾರಿಗೂ ಸುಕ ಇಲ್ಲೆ, ನೀವೆಲ್ಲಾ ಎಷ್ಟ್ ಕಷ್ಟ ಪಟ್ಟರೆ, ಎಷ್ಟ್ ಸಂಕಟ ಪಟ್ಟರೆ, ಎಷ್ಟೆಲ್ಲಾ ನಷ್ಟ ಆತ್‌ತ ನಂಗೆಲ್ಲಾ ಗೊತ್ತಾದೆ. ಹಿಂಗೆ ಹೇಳ್‌ದ ಹೆಣ್ಣ್, ನೆಗಾಡಿಕಂಡಿದ್ದದ್ ಒಮ್ಮೆಲೆ ಮರ್‌ಡಿಕೆ ಸುರು ಮಾಡ್ತ್. ದುಃಕ್‌ಡ್‌ಸಿ ದುಃಕ್‌ಡ್‌ಸಿ ಮರ್ಡುದು ನೋಡಿ ಸಂಕಟ ಆತ್. ಈಗೀಗ ಬಾರಿ ಸೂಕ್ಷ್ಮ ಮನ್‌ಸ್‌ನವಳಾದ ಇದರೊಟ್ಟಿಗೆ ಮಾತಾಡ್‌ಕನ ಬಾರೀ ಎಚ್ಚರ ಬೇಕುಂತ ಗ್ರೇಸಿಕಂಡ್ ಮರ್ಡ್‌ಬಡ ಚಿನ್ನಾ, ಏನಾತೀಗ, ದುಡಿಂವ ಡಾಕ್ಟ್ರ ಮಂಙ ಉಟ್ಟು, ಬೇಂಕ್ ಮೆನೇಜರ್ ಮಗಳೂ ಉಟ್ಟು. ನಮ್ಮೆಲ್ಲಾ ಕಸ್ಟಸುಕಕ್ಕೆ ಆವ ಈ ಮಕ್ಕಳಿಗೆ ನಿನ್ನ ಕಣ್ಣೀರ್ ಕಂಡರೆ ಅವು ಕಂಗಾಲ್ ಆವೊ. ಸಮಾದಾನ ಮಾಡಿಕಾ, ದೇವ್ರ ದಯೆಂದ ಎಲ್ಲಾ ಸೆರಿಯಾದೆ.'

ಹಕ್ಕಲೆ ಬಂದ್ ಕುದ್ದ ಗಂಡಂಗೆ ಒರ್‍ಗಿ ಹೆಣ್ಣ್

ಹೇಳ್ತ್, 'ನಂಗೆ ಈಗ ಪ್ರಾಯ ಎಷ್ಟ್?' ಸರಿಯಾದ ಉತ್ತರ ಕೊಟ್ಟರೆ ಎತ್ತರ ಆಗಿ ಮತ್ತೊಮ್ಮೆ ಕಾವೇರಿ ಹರಿದು ಗ್ಯಾರಂಟಿಂತ ಗ್ರೇಸಿ 'ನಂಗೆ ನೀ ಇನ್ನೂ ಸಣ್ಣ ಗೂಡೆನೆ, ಈಗೀಗ ಸಣ್ಣ ಕೂಸುನಾಂಗೆ ಆಡ್‌ತಾಒಳಂತ ಹೇಳಿ ಪ್ರೀತಿಂದ ಬೋಳಾದ (ಕೀಮೋಥೆರಪಿಂದ) ತಲೆನೆ ಪೂಜಿದೊ. 'ಮಾತ್ ಆಡ್ರೆ ಹೋತು, ಮುತ್ತು ಒಡ್‌ದರೆ ಹೋತುಂ'ತ ಹೇಳುವಾಂಗೆ ಕೂಸೂಂತ ಹೇಳ್ದಕ್ಕೆ 'ಹೌದಪ್ಪಾ ನಾ ಸಣ್ಣ ಕೂಸೇ ಈ ಆಸ್ಪತ್ರೆಗೆ ಬಂದ ಮೇಲೆ, ಊಟ ತಿಂಡಿ ಬಾಯಿಗೆ ಕೊಡುತಾ ಒಳರಿ, ಮೊದ್ದು ಹೇಂಗೂ ಬಾಯಿಗೆ ಹೊಯ್ದರೆಲೆ, ನೀವೇ ಮೀಸೊಕು, ಗೌನ್ ಹಾಕೊಕು. ಹಾಸಿಗೆಂದ ಮೆಲ್ಲ ಹಿಡ್ದ್ ಎದ್ರ್‌ಸಿರೆ, ಕೈ ಹಿಡ್‌ದ್ ಟಾಯಿಲೆಟ್‌ಗೆ ಕರ್ಕಂಡ್ ಹೋದರೆ, ಹೀಂಗಿರ್‌ಕನ ನಾ ಕೂಸು ಕೂಸೇ!'

'ನನ್ನ ಚಿನ್ನು ಅಲ್ಲಾ ನೀ? ಯಾಕೆ ಹಿಂಗೆಲ್ಲಾ ಬೇಜಾರ್ ಮಾಡಿಕಂಡಿಯಾ ಒಂದ್ ವೇಳೆ ನಾನೇ ಕಾಯಿಲೆಗೆ ಬಿದ್ದಿದ್ದರೆ ನೀ ಎನ್ ಮಾಡ್‌ತಿದ್ದ? ಅದರ್‌ನ್ನೇ ನಾ ಈಗ ಮಾಡ್‌ನೆ ಅಷ್ಟೆ. ನನ್ನ ರಾಣಿ ನೀ. ಹಿಂಗೆಲ್ಲಾ ಬೇಜಾರ್ ಮಾಡಿಕಣಿಕೆ ಆಗದ್' ತೊಡೆ ಮೇಲೆ ಹಂಗೆ ಮಲ್‌ಗಿದ ಹೆಣ್ಣ್‌ನ ಬೆನ್ನ್ ತಟ್ಟಿಕಂಡ್ ಪೂಸಿ ಮಾಡಿಕೆ ನೋಡ್ದೊ ಪೂವಯ್ಯ.

ಹಾಂಗೆ ಗಂಡನ ತೊಡೆ ಮೇಲೆ ತಲೆ ಇಸಿ ಮಲ್‌ಗಿದ ಪೊನ್ನಮ್ಮ ಮತ್ತೆ ಕೇಳ್ತ್ 'ನಂಗೆ ಈಗ ಎಷ್ಟ್ ವರ್ಸ?'

'ನಿಂಗೆ ಪೆನ್ಸನ್ ಆಕೆ ಇನ್ನೂ ಹತ್ತು ವರ್ಸ ಉಟ್ಟು, ನಾ ಆಗಲೆ ಸರ್‌ಕಾರಂದ ಕೈಲಾಗದಂವ, ಮನೆಗೆ ಹೋಗೂಂತ ಹೇಳ್ದಕ್ಕೆ ಕಳ್ದ ವರ್ಸನೆ ಮನೆಗೆ ಬಂದ್ ಬಿದ್ದೊಳೆ ಅಲಾ? ಯಾಕೆ ನಿಂಗೀಗ ವಯಸ್ಸ್‌ನ ಲೆಕ್ಕ? 'ಅದ್ ಸೆರಿ. ಈಗ ನಾ ನೋಡಿಕೆ ಹೆಂಗೆ ಕಂಡನೆ?'

'ಹೇಂಗೇಂತ ಹೇಳ್‌ರೆ ಹೇಂಗೆ? ಲಾಯಿಕ್ ಕಂಡಿಯಾ, ನಿನ್ನ ವಯಸ್ಸಿಗೆ ಸೆರಿಯಾದ ಗಂಭೀರತೆ, ಅದಕ್ಕೆ ಸೆರಿಯಾಗಿ ಉಡುಗೆ ತೊಡುಗೆ, ಮಾತ್‌ಕತೆಲಿ ಅನುಭವ, ಜ್ಞಾನ ಉಟ್ಟು. ಮತ್ತೇನಾಕು ನೀ ಹಿಂಗೆ ಇದ್ದರೆ ದಾರಾಳ ಸಾಕ್, ಬೇಕಾದಷ್ಟ್ ಆತ್'. ಹೆಣ್ಣ್‌ನ ಬೇಜಾರ್‌ನ ಮನಸ್ಸಿಗೆ ಕುಸಿಯಾಗಲೀಂತ ಹೇಳ್ದೊ ಪೂವಯ್ಯ.

'ಮತ್ತೆ ಆ ಅಜ್ಜಿ ನರ್ಸ್ ಬಂದ್ ಅಜ್ಜೀ ಹೇಗಿದ್ದೀರೀಂತ ಕೇಳ್ತ್!? ನಾ ಅಜ್ಜಿ ಆಗೊಳೆನಾ? ಮಕ್ಕಳಿಗೆ ಒಬ್ಬಂಗೂ ಮೊದುವೆನೇ ಆತ್ಲೆ? ಸರಿ ನೀ ಹೇಳ್ದು, ಆದರೆ ನೀ ಆ ನರ್ಸ್‌ನ ಅಜ್ಜಿ ನರ್ಸ್‌ಂತ ಹೇಳ್ದ ತಾನೆ ಯಾಕೆ? ಅವ್‌ಳ

ವಯಸ್ಸೇನಾರ್ ನಿಂಗೆ ಗೊತ್ತುಟ್ಟಾ, ಹಾಂಗೆ ನಿನ್ನ ಅದೂ ಅಜ್ಜೀಂತ ಕರ್‌ದ್ರಿದು.

'ಸಾಕಪ್ಪಾ ಸಾಕ್, ನೀವುಗೆ ನನ್ನ ತೊಪ್ಪು ಕಂಡ್ ಹಿಡಿಯೊದೇ ಆತ್. ನಾ ಆ ನರ್ಸ್‌ಗೆ ಅಜ್ಜಿ ಆನೆನಾ? ಅದರ ನಾ ಏನೂ ನರ್ಸ್ ಅಜ್ಜಿ ಬಾಮ್ಮಾಂತ ಕರ್ತ್ಲೆ ಅಲಾ? ನಿಂಗೆ ವಯಸ್ಸಾತ್ ಪಿಂಚಣಿ ತಕಂಡ್ ಮನೇಲಿ ಇರ್‌ಂತ ಸರಕಾರ ಕಳ್ಸಿಕೆ ಇನ್ನೂ ಹತ್ತ್ ವರ್ಸ ಉಟ್ಟು ತಾನೆ? ಈ ಹತ್ತು ವರ್ಸದೊಳಗೆ ಮಗಳಿಗೂ, ಮಂಜಂಗೂ ಮೊದುವೆ ಮಾಡಿ, ಮನೇಲಿ ಪಿಳ್ಳಿಕ ಹರ್‌ದಾಡ್‌ಕನ ಯಾರ್ ಬೇಕರೂ ನನ್ನ ಅಜ್ಜೀಂತ ಕರೇಲಿ, ಆಗ ನಂಗೆ ಬೇಜಾರ್ ಇಲ್ಲೆ. ಈಗ ಅಜ್ಜೀಂತ ಕರ್‌ಸಿಕಣಿಕೆ ನಾ ಏನ್ ಹಳ್ಳಿ ಹೆಂಗ್ಸಾ? ಪಾಪ ಆ ಹಳ್ಳಿ ಮೊದ್ದುಗಳಿಗೆ ಹದಿನಾಲ್ಕ್ – ಹದಿನಾರಕ್ಕೇ ಮೊದುವೆ ಮಾಡುವೆ. ಅವರ ಮಕ್ಕಳಿಗೂ ಇದೇ ಸಿಕ್ಷೆ ತಪ್ಪಿತ್‌ಲ್ಲೆ. ನನ್ನ ವಯಸ್ಸಿಗೆ ಅವುಕ್ಕೆ ಪಿಳ್ಳಿಕ ಯಾಕೆ ಮರಿ ಪಿಳ್ಳಿಕಳೂ ಆವೊ, ಅಂತವರ ಅಜ್ಜೀಂತ ಕರ್‌ದರೆ ಕುಸೀಲಿ ಓಂತ ಹೇಳುವೆ. ಹಂಗೆ ನಂಗೆ ಕುಸಿ ಆಕೆ ನಾ ಏನ್ ಹಳ್ಳಿ ಗುಮ್ಮನಾ? ಹಂಞ ಓದಿಕಂಡೊಳೆ, ಟೀಚರ್ ಆಗಿನೂ ಒಳೆ. ಸಾಲೆಲಿ ಯಾರಾರ್ ನನ್ನ ಅಜ್ಜಿಂತ ಕರ್‌ದವೆನಾ? ಟೀಚರ್, ಮೇಡಂತ ಕರ್‌ಸಿಕಂಡಿದ್ದ ನನ್ನ ಈ ಕಾಯಿಲೆ ಬಂದ್ ಈ ಆಸ್ಪತ್ರೆಲಿ ಬಿದ್ದರ್‌ಂದ ಇವು ಹೇಂಗೆ ಕರ್ದರೂ ಬಾಯಿ ಮುಚ್ಚಿಕಂಡ್ ಓಗೊಡೊಕು.' ಈ ರೀತಿ ಎಲ್ಲಾ ಪರ್‌ಚಿಕಣ್‌ಕನ ಗಂಟ್‌ಲ್ ಕಟ್ಟಿ ಮರ್ದ್ ಬಂದರೂ, ಕಣ್ಣ್‌ಂದ ಕಣ್ಣೀರ್ ಉದ್‌ರ್‌ತ್‌ಲೆ.

'ಹೋಗಲಿ ಬುಡು, ಅದರ ತಲೆಗೆ ತಕಂಬಡ, ನೀ ಹುಷಾರಾಗಿ ಮನೆಗೆ ಬಂದ ಕೂಡ್ಲೇ, ಮಗಳಿಗೆ ಒಳ್ಳ ಕಡೆಂದ ಗಂಡ್ ನೋಡಿ ಮೊದುವೆ ಮಾಡೊನೊ. ಮತ್ತೆ ಒಂದೆರ್‌ಡ್ ವರ್ಸಲಿ ಮಜಂಗೂ ಗೂಡೆ ನೊಡೊನ.ಈಗ ಹಂಞ ಮಲ್‌ಗಿ ವಿಸ್ರಾಂತಿ ತಕ್ಕ. ನಾ ಹೊರಗೆ ಹೋಗಿ ಮಕ್ಕಳಿಗೆ ಪೋನ್ ಮಾಡಿ ಬನ್ನೆ.' ಕಣ್ಮುಚ್ಚಿ ಮಲಕ್‌ಕಂಡ ಹೆಣ್ಣ್‌ಗೆ ಕುತ್ತಿಗೆನವರೆಗೂ ಲಾಯಿಕ್ ಹೋಸಿ ಹೋದ ಗಂಡನ ದಾರಿನೇ ನೋಡಿಕಂಡ್ ಮಲ್‌ಗಿತ್ ಪೊನ್ನಮ್ಮ.

ಎರ್ಡ್ ವರ್ಸಗಳ ಹಿಂದೆ ಕನ್ನಡಿ ನೋಡ್‌ಕಾಕನ ಕುತ್ತಿಗೆನ ಹಕ್ಕಲೆ ಒಂದ್ ಸಣ್ಣ ಅಡ್‌ಕೆ ಹೋಳುನಷ್ಟ್ ಸಣ್ಣ ಗಂಟ್ ಕಂಡತ್. ಇದೆಂತಪ್ಪಾಂತ ಮುಟ್ಟಿ ನೋಡ್‌ಕನ ಗಳಲೆನಾಂಗೆ ಅತ್ತ ಇತ್ತ ಓಡಾಡ್‌ತ್ತಿತ್. ಬೇನೆಗೀನೆ ಒಂದೂ ಇಲ್ಲೆ. ಆದರೂ ಡಾಕ್‌ಟ್ರಿಗೆ ತೋರ್‌ಸಿ ಬುಡನೋಂತ ಗ್ರೇಸ್‌ಕನ; ಬೇರೆ ಡಾಕ್ಟ್ರ ಯಾಕೆ ಮಂಜನೇ ಉಟ್ಟಲ್ಲಾಂತ ಅವಂಗೆ ಪೋನ್ ಮಾಡ್ದೊ. ಕತ್ತಲೆ ಬೊಳ್ಪಾಕರೆ ಮಂಜ ಹಾರಿಬಿದ್ದ್ ಓಡಿ ಬಾತ್. ಅಂವ ನೋಡಿ ಇದ್ ನಂಗೆ ಏನೂ ಹೇಳಿಕೆ ಆದುಲ್ಲೆ. ಮೈಸೂರುನ ಸ್ಪೆಷಲಿಸ್ಟ್‌ಗಳಿಗೆ ತೋರ್ಸೊನೋಂತ ಹೇಳ್ತ್. ಮರ್‌ದಿನನೇ

ಮೈಸೂರುಗೂ ಕರ್‌ಕಂಡ್ ಹೋತು. ಅಲ್ಲಿನ ಸ್ಪೆಷಲಿಸ್ಟ್‌ಗ 'ಇದು ಥೈರಾಯ್ಡ್ ಕ್ಯಾನ್ಸರ್ ಆಪರೇಷನ್ ಆಗಲೇ ಬೇಕು'ಂತ ಹೇಳ್ದೊ. ಯಾವ ಹೆದ್ರಿಕೆನೂ ಇಲ್ಲದೆ ಆಪರ್ಸನ್‌ಗೆ ರೆಡಿ ಆತ್ ಪೊನ್ನಮ್ಮ. ಆರೇಳ್ ಗಂಟೆಗಳ ದೊಡ್ಡ ಆಪರ್ಸನ್. 'ಆಪರೇಷನ್ ಸಕ್ಸೆಸ್'ಂತ ಡಾಕ್ಟ್ರ ಹೇಳ್ದೊ. ಒಂಬತ್ತನೇ ದಿನನೇ ಡಿಸ್ಚಾರ್ಜ್. ಕುಸೀಂದ ಮನೆಗೆ ಬಂದೊ. ಹೋತೋ ಪಿಸಾಚೀಂತೇಳ್ರೆ ಬಂದೆ ಗವಾಕ್ಷೀಲೀಂತ ಹೇಳುವಾಂಗೆ ಹಂಞ ದಿನ ಕಳಿಯಕನ ಕೆಮ್ಮು ಸುರಾತ್. ಬಲ್‌ದ ಪುಡೆ ಸ್ವಾಸಕೋಸದ ಕಡೆಂದ ಉಸ್‌ರಾಡ್‌ಕನ ಗೊರಗೊರ ಗೂರಲ್ ಸದ್ದ್. ಇದೆಂತಪ್ಪ ಗ್ರಾಚಾರಂತ ಮೈಸೂರು ಡಾಕ್ಟ್ರ ಪುನಾ ಕಂಡಾತ್. 'ನಿಮಗೆ ಇನ್ನು ಕ್ಯಾನ್ಸರೇ ಬರುವುದಿಲ್ಲ, ನೂರರಲ್ಲಿ 98 ಭಾಗ ಭರವಸೆ ಕೊಡುತ್ತೇನೆ ಮತ್ತೂ ಬಂದರೆ ನಿಮ್ಮ ದುರಾದೃಷ್ಟಂತ ಹೇಳ್ದೊ. 'ಬೇರೆ ಫಿಸಿಷಿಯನ್ ಕಂಡು ಚಿಕಿತ್ಸೆ ಪಡೆಯಿರಿ, ನನ್ನ ಹತ್ತಿರ ಇದಕ್ಕಾಗಿ ಬರಬೇಡಿ'ಂತ ಹೇಳಿ ಕಳ್ಸಿಯೇ ಬುಟ್ಟೊ.

ಊರ–ಪರವೂರ ಆಸ್ಪತ್ರೆಗಳ್ನೆಲ್ಲಾ ಸುತ್ತಿ ಆಕೇರಿಗೆ ಇದ್ ಕ್ಯಾನ್ಸರ್‌ದ್ದೇ ಪೀಡೆಂತ ಬೆಂಗಳೂರ್‌ನ ಕಿದ್ವಾಯಿ ಆಸ್ಪತ್ರೇಲಿ ಮೊದ್ದು ಮಸಣ ಸುರು ಆತ್. ಆರೇಳ್ ತಿಂಗಳ ಆಸ್ಪತ್ರೆ ವಾಸ. ಕಿಮೊಥೆರಪಿ, ರೇಡಿಯೋ ಥೆರಪಿ ಸುಂಟಿ ಸುಡ್‌ಗಾಡ್‌ಂತ ಎಲ್ಲಾ ಆತ್. ಯಾದಕ್ಕೂ ಬಗ್ಗದೆ ಸ್ವಾಸಕೋಸಲಿ ಮನೆ ಮಾಡಿಕಂಡಿರುವ ಈ ಕ್ಯಾನ್ಸರ್ನ ಹೇಂಗೆ ಹೊರದಬ್ಬುದು. ಹಾಂಗೆ ಬುಟ್ಟರೆ ಕ್ಯಾನ್ಸರ್–ಕ್ಯಾನ್ಸಲ್‌ಂತ ಹೇಳುವ ಹಾಂಗೆ ಜೀವಕ್ಕೆ ಅಪಾಯ. ನಂಗೆ ಸಾಯಕೆ ಹೆದ್ರಿಕೆ ಇಲ್ಲೆ, ಹುಟ್ಟಿದಂವ ಒಂದಲ್ಲ ಒಂದು ದಿನ ಸಾಯೊಕೇ. ಸಾಯಕೆ ಮುಂದೆ ನಮ್ಮ ಕೆಲವು ಕರ್ತವ್ಯಗಳ, ಜವಬ್ದಾರಿಗಳ ಮಾಡಿ ಮುಗ್‌ಸೊಕ್ಕಲ್ಲಾ. ಮಕ್ಕಳ ನಡುನೀರ್‌ಲಿ ಕೈಬುಟ್ಟರೆ ಅವು ಹೇಂಗೆ ದಡ ಸೇರ್ದು. ಯಾರ ಆಸರೇಲಿ ಮುಂದೆ ಬಾದು. ಯಾದಾರ್ ಬೇನೆಂದ ಅವ್ವಾಂತ ಕರೆಕನ ಯಾರ್ ಅವ್ವನಾಂಗೆ ಓಂತ ಓಡಿಬಾವೊ. ಹೀಂಗೆಲ್ಲಾ ಮನಸ್‌ಲೇ ಪೇಚಾಡಿ ಕಂಡತ್ ಪೊನ್ನಮ್ಮ.

ಏಡ್ಸಂದೊಳು ಭಯಂಕರ ಕಾಯಿಲೆ ಇದ್. ಈ ಕಾಯಿಲೆ ಹೇಂಗೆ ಬಂದದೆ ಯಾಕೆ ಬಂದದೆ, ಕಂಡವೇ ಇಲ್ಲೆ. ಬೀಡಿ ಸಿಗರೇಟ್ ಸೇದಿದವ್ಕೆ, ಎಲೆ ಅಡ್ಕೆ ತಿಂಬವ್‌ಕೆ, ಹೆಂಡ ಸರಾಯಿ ಕುಡಿಯೊವುಕೆ ಈ ಕಾಯಿಲೆ ಬಂದದೇಂತ ಹೇಳುವೆ. ಎಲ್ಲಾ ಕಡೆ ಅದೇ ಬೋರ್ಡ್‌ಗ ನೇತ್ ಹಾಕೊಳೊ. ಆದರೆ ಈ ಕಾಯಿಲೆ ಆರ್ ತಿಂಗಳ ಕೂಸುಗಳ್ನೇ ಬುಟ್ಟತ್ಲೆ. ಜಾತಿ, ಮತ, ಪಂಥ, ಲಿಂಗ, ಬಾಸೆ ಯಾವುದೂ ಲೆಕ್ಕಕ್ಕಿಲ್ಲಂದಾಂಗೆ ಸರ್ವಾಂತರ್ಯಾಮಿನಾಂಗೆ ಕಾಡುವ ಈ ಕಾಯಿಲೆಗೆ ಅಂತ್ಯನೇ ಇಲ್ಲೇನೊ. ಸದ್ದಿಲ್ಲದೆ ಸರೀರನ ಸೇರಿ ಯಾವ ಬೇನೆ, ಸಂಕಟ ಕೊಡದೆ ತನ್ನ ಕಬಂಧ ಬಾಹುಗಳ ಚಾಚಿದೆ. ತನ್ನ ಆಕ್ಟೋಪಸ್ ಹಿಡ್ತ

ಗಟ್ಟಿ ಆದ ಮೇಲೆ ತಾನೇ ಒಳೇಂತ ತೋರ್ಸಿದೆ. ಅದ್ ಆಗಲೇ ಗುಣ ಆಗದ ಅವಸ್ಥೆಗೆ ಸೇರಿದ್ದದೆ. ಎಷ್ಟೋವರ್ಸ ಬದ್ಕಿ ಬಾಳಕಾದ ಜೀವಗ ಒಂದೆರ್ಡ್ ತಪ್ಪಿರೆ ನಾಲ್ಕಾರ್ ವರ್ಸಗಳ್‌ಲೇ ಪರಲೋಕ ಯಾತ್ರೆಗೆ ಹೊರ್ಟವೆ.

ಏಡ್ಸ್ ರೋಗಕೆ ಮೊದ್ದಿಲ್ಲರೂ, ಬರದ ಹಾಂಗೆ ತಡೆದು ಬಾರಿ ಸುಲ್ಬ. ಕಚ್ಚೆಬಿಗಿಯಾಗಿದ್ದರೆ ಆತ್. ಕಚ್ಚೆಹರ್ಕಂಗಳಿಗೆ ಮಾತ್ರ ಈ ರೋಗ ಬಾದು. ಎಲ್ಲೋ ಅಪ್ಪಿ ತಪ್ಪಿ ಅಮಾಯಕರಿಗೆ ಏಡ್ಸ್ ಬಾದೂ ಉಟ್ಟು. ರಕ್ತ ಪಡಿಯಕನೋ, ಇಂಜೆಕ್ಷನ್ ಸೂಜಿನ ಏಡ್ಸ್‌ನವಂಗೆ ಕುತ್ತಿದರ ಬೇರೆವುಕೆ ಕುತ್ತುದರ್‌ಂದನೋ ಬಾಕು ಸಾಕ್. ಇದಕ್ಕೆ ಸರ್ಕಾರನೇ ಹೊಣೆ ಆಕು. ಏನು ತಪ್ಪು ಮಾಡದ ಅಮಾಯಕರ ರೋಗಿಯಾಗಿ ಮಾಡ್ದ ಡಾಕ್ಟ್ರ ಇಚಾರ್‌ಸಕು. ತಪ್ಪು ಮಾಡಿದ್ದರೆ ಅಂತವುಕೆ ಕಠಿಣ ಸಿಕ್ಸೆ ಆಕು. ಸೆರಿಯಾಗಿ ಪರೀಕ್ಷೆ ಮಾಡಿ ಪರಿಶೀಲನೆ ನಡ್‌ಸಿ ಮೊದ್ದು ಕೊಡ್ದು ಡಾಕ್ಟ್ರ ಧರ್ಮ ಹಾಂಗೂ ಕರ್ತವ್ಯ. ಏಡ್ಸ್‌ನ ಇಚಾರಲಿ ಕಾಳಜಿ ವಯಿಸಿದಾಂಗೆ ಸರ್ಕಾರ ಈ ಕ್ಯಾನ್ಸರ್ ಇಚಾರಲಿ ಕಾಳಜಿ ವಯಿಸಿತ್ಲೆ. ಏಡ್ಸ್‌ನ ಇಚಾರಲಿ ಬೀದಿ ನಾಟಕಗಡ, ರೇಡಿಯೋ, ಟಿ.ವಿ.ಗಳ್ಲಿ ಎಚ್ಚರಿಕೆಗೆನೋ. ಇದೆಲ್ಲಾ ಯಾರಿಗೆ? ಹಳ್ಳಿನ ಬಡ ಬೋರೇಗೌಡ ಬೊಂಬಯಿ, ಡೆಲ್ಲಿಗೆ ಹೋಗಿ ಈ ರೋಗನ ಅಂಟಿಸಿಕಂಡ್ ಬಾದ್ಲೆ. ಸೋಕಿವಾಲಗ, ಪಡ್ಡೆ ಪೊಡಂಬರ್‌ಗ ಇದರ ಅಂಟಿಸಿಕಂಡ್ ಬಂದವೆ. ಅವು ಬಂದ್ ತಮ್ಮ ಹೆಣ್ಣಿಗೂ, ಆ ಮೇಲೆ ಹುಟ್ಟುವ ಮಕ್ಕಳಿಗೂ ಹಬ್ಸುವೆ. ಈಗ ಏಡ್ಸ್ ಹೇಂಗೆ ಬಂದದೆಂತ ಸಾದಾರ್ಣ ಎಲ್ಲವುಕೂ ಗೊತ್ತುಟ್ಟು, ಬಾರದಾಂಗೆ ಏನ್ ಮಾಡೊಕುಂತೇಳ್ದು ಗೊತ್ತುಟ್ಟು. ಆದ್ರೂ ಕೆಟ್ಟ ಚಟಂದ ಕೆಲವು ಜನ ಅವರ ಚಟ್ಟನ ಅವೇ ಕಟ್ಟಿಕಂಡವೆ. ಇದಕೆ ಯಾರ್ ಹೊಣೆ, ಅವುಕೆ ಅವೇ ತಾನೆ? ಎಲ್ಲವೂ ಮಾನ ಮರ್ಯಾದೀಂದ ಇದ್ದರೆ ಏಡ್ಸ್‌ನ ಯಾವ ಮೊದ್ದೂ ಇಲ್ಲದೆ ದೇಶಂದಲೇ ಓಡ್ಸಕ್. ಹೀಂಗೆ ಪೊನ್ನಮ್ಮನ ತಲೆಲಿ ನೂರೆಂಟ್ ಇಚಾರಗ ತೇಲಿ ಬಾತ್.

ಆದರೆ ಈ ಕ್ಯಾನ್ಸರ್ ಹಾಂಗಲ್ಲ. ಅದ್‌ಕ್ಕಾಗಿ ಸರ್ಕಾರ ಈ ಕಾಯಿಲೆ ಬಂದವರ ಮೇಲೆ ವಿಸೇಸ ಮುತುರ್ಜಿ ತಕಣಕು. ವಿಸೇಸ ಸಹಾಯ ಮಾಡೊಕು. ಹೀಂಗೆ ಏನೇನೊ ಗೇನ ಮಾಡಿಕಂಡಿದ್ದ ಪೊನ್ನಮ್ಮಂಗೆ ಹಾಂಗೆ ಜೊಂಪು ಹತ್ತಿತ್. ನಿದ್ದೆಗೆ ಮೆಲ್ಲೆ ಮೆಲ್ಲೆ ಜಾರ್‌ತ್. ಹೊರಗೆ ಹೋಗಿದ್ದ ಗಂಡ ಬಂದ್ ತಟ್ಟಿ ಎದ್ರ್‌ಸ್‌ಕನೇ ಎಚ್ಚರ. ಎಷ್ಟೊತ್ತು ಮಲ್‌ಗಿಬುಟ್ಟೇಂತ, ಮೆಲ್ಲೆ ಕುದ್ರಿಕೆ ನೋಡ್ದ ಹೆಣ್ಣ್‌ನ ಇನ್ನೂ ಹಂಞ ಹೊತ್ತು ಹೀಂಗೆ ಮಲ್‌ಕಾ, ನಾ ಹೋಗಿ ಟೀ ತಕ ಬನ್ನೇಂತ ಹೋದೊ ಪೂವಯ್ಯ. ಇವರ ಕಾಲ್‌ಲಿ ಏನ್ ಚಕ್ರ ಉಟ್ಟೋ? ಅದಕ್ಕೆ ಇದಕ್ಕೇಂತ ಎಸ್ಟ್ ಸುತ್ತುವೆ; ಸುತ್ತದೆ ಪಾಪ ಏನ್ ಮಾಡುವೆ. ಬೇರೆ

ಯಾರ್ ಒಳೋ? ಅವು ಒಬ್ಬನೇ ಎಲ್ಲಾ ಮಾಡೊಕು ತಾನೇ? ಹೀಂಗೆ ಗೇನ ಮಾಡಿಕಂಡಿದ್ದ ಪೊನ್ನಮ್ಮನ ಗೇನ ಮತ್ತೆ ಕ್ಯಾನ್ಸರ್ ಕಡೆ ಹೋತ್. ಎಸ್ಟೊಂದು ಬಗೆನ ಕ್ಯಾನ್ಸರ್‌ಗ ಒಳೊ. ರಕ್ತ ಕ್ಯಾನ್ಸರ್‌ಗಡ, ಮೂಳೆ ಕ್ಯಾನ್ಸರ್ ಗಡ, ಸ್ತನ ಕ್ಯಾನ್ಸರ್, ಸ್ವಾಸಕೋಸ, ಗಬ್ಬಕೋಸ, ಗಂಟ್ಲ್, ಅನ್ನನಾಳ, ಸ್ವರಪೆಟ್ಟಿಗೆ, ಜಠರ, ಕರ್‌ಳ್, ಯಕೃತ್, ಕಿಡ್ನಿ ಓ ಇನ್ನೂ ಏನೇನೋ ಕ್ಯಾನ್ಸರ್‌ಗಗಡ! ಅಬ್ಬಾ ಏಸೊಂದು ಬಗೆನ ಕ್ಯಾನ್ಸರ್‌ಗ. ಸ್ವಾಸಕೋಸಕ್ಕೆ ಬಂದರೆ ಅದ್ ಅಲ್ಲಿಂದ ಹಕ್ಕಲೆನ ಬೇರೆ ಬಾಗಗಳಿಗೆ ಹಬ್ಬಿದೆ ಗಡ. ಸರೀರದ ಒಂದು ಅಂಗಂದ ಮತ್ತೊಂದು ಅಂಗನ ಎಸ್‌ಂಡ್‌ನಾಂಗೆ ಹಿಡ್‌ಕಂಬ ಈ ಕಾಯಿಲೆಗೆ ಸರ್ಕಾರ ಹೆಚ್ಚಿನ ನಿಗಾ ಕೊಡೊಕು.ಈ ಕ್ಯಾನ್ಸರ್ ಪೀಡೆಂದ ಬಾವ ಅಕಾಲಿಕ ಸಾವು ಬೇರೆ ಯಾವ ಕಾಯಿಲೆಂದಲೂ ಬಾಕಿಲ್ಲೆ ಏನೋ? ಈ ಕಾಯಿಲೆ ಹಿಡ್‌ದವು ಯಾರೂ ಬಾಳ ಸಮಯ ಬದ್‌ಕಿಕೇ ಇಲ್ಲೆ. ಹುಳು ಹಿಡ್ದ ಮರದ ಹಾಂಗೆ ಒಳ ಒಳಗೇ ಕೊರ್ದ್ ಸಾವುನ ತಂದದೆ. ಮತ್ತೆ ಈ ಪೀಡೆ ಹಿಡ್‌ದರೆ ಅದಕ್ಕೆ ಬೇಕಾದ ಮೊದ್ದುಗಿದ್ದು ಮಾಡ್‌ಸಿಕೆ ಗರೀಬಂಗೆ ಬೊತ್ತೇ ಬೊತ್. ಲಕ್ಷಗಟ್ಲೆ ದುಡ್ಡು ಹೊಡಿಯಾದೆ. ತುಂಬಾಕಾಲ ಮೊದ್ದುಗಿದ್ದು ಮಾಡ್ಸಿಕೆ ಪಾಪದಂವ ಆಸ್ತಿಪಾಸ್ತಿ, ಚಿನ್ನಗಿನ್ನ ಎಲ್ಲ ಮಾರಿ, ಇತ್ತ ಜೀವನೂ ಕಳ್‌ಕಂಡ್ ಒಳ್‌ದವುಕೆ ಬೊದ್‌ಕಿಕೂ ದಾರಿಯಿಲ್ಲದೆ ಬಿಕಾರಿ ಆಗುವಾಂಗೆ ಆದೆ. ಇಂತಾ ಕ್ಯಾನ್ಸರ್ ಪೀಡೆಂದ ಜನ ಹೇಂಗೆ ಬಚಾವು ಆದುಂತ ಪೊನ್ನಮ್ಮ ಗ್ರೇಸಿಕಂಡೇ ಮಲ್‌ಕಂಡಿತ್.

ಯಜ್‌ಮಾನ ಹ್ಯೊದ್‌ಕೊಟ್ಟ ಚಾನ ಕುಡ್ದ್, ಹಂಞ ಹೊರಗೆ ಸುತ್ತಾಡಿಕಂಡ್ ಬರನೋಂತ ಹೊರ್‍ಟ್ ಹೋದವುಕೆ ದಾರಿಡೀ ಕ್ಯಾನ್ಸರ್ ಪೀಡೆನ ವಿಶ್ವರೂಪ ಕಂಡತ್. ಕೈಕಳ್‌ಕಂಡವು, ಕಾಲಿಲ್ಲದವು, ಕಣ್ಣಿಲ್ಲೆ, ಅರ್ದಕೆಬಿ, ಮೂಕ್ ಇಲ್ಲೆ, ದವ್‌ಡೆ ಹರ್‌ಕಂಡ್ ಹೀಂಗೆ ಏನೇನೋ ವಿಕಾಲಾಂಗದ ಜಾತ್ರೆನೇ ಕಂಡತ್. ಈ ಕ್ಯಾನ್ಸರ್‌ನ ಕಪಿಮುಷ್ಟಿಗೆ ಸಿಕ್ಕಿ ನಾನಾ ಅಂಗಾಂಗಗಳ ಕಳ್‌ಕಂಡವರ ನೋಡ್‌ಕನ ಅಯ್ಯೋ ದೇವ್ರೆ ಇದೆಂತ ಬಾಳ್ವೆ, ಇವುಕ್ಕಿಂತ ನಾನೇ ಎಸ್ಟೋ ವಾಸಿ, ನೋಡವ್‌ಕೆ ನಂಗೆ ಅಂತಾ ಯಾವ ಕೊರ್ತೆನೂ ಕಾಂಬೊಲ್ಲೇಂತ ಕಂಡತ್. ಮನ್ಸ್‌ಲಿ ಹಂಗೆ ಗ್ರೇಸಿರೂ ಎದೆಲಿ ಆಯಾಸ ಒತ್ತಿ ಒತ್ತಿ ಬಾತ್. ಅಲ್ಲೇ ಇದ್ದ ಒಂದು ಕಲ್ಲ್ ಬೆಂಚ್‌ಲಿ ಇಬ್ಬೊರು ಕುದ್ದೊ. ಗಂಡನ ಕೈನ ಹಿಡ್ಕಂಡ್ ಹಾಂಗೆ ಗೇನ ಮಾಡ್ತ್. ಇನ್ನೆಸ್ಟ್ ದಿನ ಈ ಆಸ್ಪತ್ರೆಲಿ ವನವಾಸ! ನಂಗೆ ಗುಣ ಆದೋ? ನಾ ಮುಂದೆನಾಂಗೆ ಜೀವನ ಉತ್ಸಾಹಂದ ನಡ್‌ಸುವೆನೋ? ಮಕ್ಕಳ ಮೊದುವೆ, ಪುಳ್ಳಿಕಳ ಆಟಪಾಟ ಕಾಂಬಕೆ ಆದೋ? ಇನ್ನಿದ್ದಷ್ಟ್ ವರ್ಸ ಚಾಕ್ರಿ ಮಾಡುವೆನೋ? ಮಾತಾಡದೆ ಏನೋ ಗೇನಲಿ ಎತ್ತಳೋ ನೋಡಿಕಂಡಿದ್ದ

ಗಂಡನ ಮುಂಗೈ ಮೇಲೆ ತಟಪಟಾಂತ ಬಿದ್ದ ಬಿಸಿ ಕಣ್ಣೀರ್‌ನ ನೋಡಿ, ಗಾಬ್ರಿ ಆದ ಪೂವಯ್ಯ, 'ಇದೇನ್ ನೀ ಮಾಡ್ದು, ಸಣ್ಣ ಮಕ್ಕಳ ಹಾಂಗೆ ಮರ್ಡ್ತಾ ಒಳ ಅಲ್ಲಾ? ಬಂದದ್ ಬರ್ಲಿ, ದೇವ್ರ ದಯೆ ಇರ್ಲೀಂತ ಇರೊಕು. ಕಸ್ಟನ ಎದುರ್‌ಸುವ ಸಕ್ತಿ ಕೊಡು ದೇವ್ರೇಂತ ಬೇಡೊಕು. ಮೊನ್ಸಂಗೆ ಕಾಯಿಲೆ ಕಸಾಲೆ ಬೇಡಾಂತ ಹೇಳ್ರೆ ಆದೆನಾ? ಕಾಯಿಲೆ ಮೊನ್ಸಂಗೆ ಬಾರದೆ ಕಾಡ್ ಮರಕ್ಕೆ ಬಂದದೆನೋ. ನಂಗೇ ಧೈರ್ಯ ಹೇಳ್‌ತಿದ್ದ ನೀ ಹೀಂಗೆ ಪುಕ್ಲಿಗಳಾಂಗೆ ಮರ್ಟರೆ ಹೇಂಗೆ?'

'ಅಲ್ಲಾ ತಾಳ್ಮೆಗೂ ಒಂದು ಮಿತೀಂತ ಇದ್ದದೆ ಅಲಾ, ಎಸ್ಟ್‌ಂತ ಸಯಿಸಕ್. ನನ್ನ ತಾಳ್ಮೆನ ಕಟ್ಟೆ ಒಡೀತ ಉಟ್ಟು, ಧೈರ್ಯದ ಗೋಡೆ ಬಿರೀತಾ ಉಟ್ಟು, ನಾ ಏನ್ ಮಾಡಲಿ ಹೇಳಿ? ನಿಂಮ ಮತ್ತೆ ಮಕ್ಕಳ ಈಗಳೇ ಬುಟ್ಟ್ ಹೋಕೆ ನಂಗೆ ಮನ್ಸ್ ಇಲ್ಲೆ. ಹಂಗೆಂತ ಸಾಯಕೆ ಹೆದ್ರಿಕೆಂತ ತಿಳಿಬಡಿ. ಹುಟ್ಟಿದಲ್ಲಿಂದ ನಮ್ಮೆ ನೆರಳ್‌ನಾಂಗೆ ಸಾವು ಹಿಂದೆ ಹಿಂದೆ ಬರ್‌ತ್ತಾ ಉಟ್ಟೂಂತ ಗೊತ್ತುಟ್ಟು ನಂಗೆ. ಈ ಲೋಕದ ಎಲ್ಲಾ ಆದುಹೋದಕ್ಕೆಲ್ಲಾ ಮುಕ್ತಾಯ ಹಾಡುವ ಸಾವು, ನಿಜವಾಗಿ ಸಾವಲ್ಲ ಹುಟ್ಟು. ಸಾವುನ ಕುಸೀಂದ ಬರಮಾಡಿಕಂಬವನೇ ಜ್ಞಾನಿ!'

ನಿನ್ನದ್ ಅತಿಯಾತ್. ಯಾಕೆ ಹಾಂಗೆಲ್ಲಾ ಮಾತಾಡಿಯಾ? ನಿನ್ನ ಸಾಯಕೆ ಬುಡುವೆನಾ ನಾ? ಬರುವ ಬೇಸ್ತಾರ ನಿನ್ನ ಆಪರ್ಸನ್ ಅಲ್ಲಾ? ನೀ ಲಾಯಿಕ್‌ಲಿ ತಿನೊಕು, ಉಣೊಕು. ಉಂಬಕೆ ತಿಂಬಕೆ ನಿನ್ನ ಮನಸ್ಸ್ ಸೆರಿ ಇರೊಕು. ಮನ್ಸ್ ಸೆರಿ ಇಲ್ಲರೆ ತಿಂದದ್ ಯಾವ್ದೂ ಮೈಗೆ ಹಿಡಿಯಕ್ಕಿಲ್ಲೆ. ಸರೀರಕ್ಕೂ ಮನ್ಸ್‌ಗೂ ಸಂಬಂಧ ಉಟ್ಟು. ಹಾಂಗೆ ಹೀಂಗೆಂತ ನಂಗೆ ಲೆಕ್ಚರ್ ಹೊಡಿತಿದ್ದ ನಿಂಗೆ ನಾ ಹೇಳೊಕೊ. ನೀ ಲಾಯಿಕ್ ತಿಂದ್ ಮೈ, ಮನಸ್ಸ್ ಆರೋಗ್ಯಲಿ ಇದ್ದರೆ ನಿಂಗೆ ರಕ್ತಕೊಡುವ ಅವಕಾಸನೇ ಬಾಕಿಲ್ಲೆ. ಒಂದು ವೇಳೆ ರಕ್ತ ಬೇಕರೂ ಅದೇನೂ ದೊಡ್ಡ ವಿಸ್ಯ ಅಲ್ಲಾ. ಅದ್ಕೆ ಬೇಕಾದ ಏರ್ಪಾಡ್ ನಾ ಮಾಡ್ನೆ. ನನ್ನ ಶಿಸ್ಯ ಶ್ರೀನಿವಾಸ ಮಾತ್ ಕೊಟ್ಟುಟು. ಹಾಂಗಾಗಿ ಆ ಬಗ್ಗೆ ಚಿಂತೆ ಇಲ್ಲೆ. ಹೇಂಗೂ ಮಕ್ಕ ಇಬ್ಬರೂ ಬಂದವೆ, ಅವು ಬಾಕನ ನೀ ಹೀಂಗೆ ಕಂಗಾಲಾಗಿ ಇರಿಕೆ ಬೊತ್ತು. ಮಂಜ ಡಾಕ್ಟ್ರ ಆರ್ದಂದ ಅಂವ ತನ್ನ ಅಳ್ಕ್‌ನ ತೋರ್ಸ್‌ಕಣದ್ರೂ, ಮಗಳ್ ಗಾಬ್ರಿ ಆದು. ಅವುಕೆ ನೀನೇ ಧೈರ್ಯ ಹೇಳೊಕು. ಹಿಂದೆ ಮೈಸೂರ್ಲಿ ಆಪರ್ಸನ್ ಆಗಿರ್ಕನ ಹೇಂಗೆ ಇದ್ದ ನೀ. ನೆಂಪು ಮಾಡಿಕಾ, ಹೆದ್ರಿಕೆ, ಆತಂಕ ಒಂದೂ ಇಲ್ಲದೆ ಕುಸೀಂದ ಆಪರ್ಸನ್ ಮಾಡ್ಸಿಕಂಡಿದ್ದ. ಈ ಎರ್ಡೇ ವರ್ಸಕ್ಕೆ

ನಿನ್ನ ಧೈರ್ಯ ಎಲ್ಲಾ ಏನಾತ್? ಗಂಡನ ಮಾತ್‌ನ ಅರ್ಥಲೇ ತಡ್‌ದ್ 'ನಂಗೆ ಧೈರ್ಯ ಉಟ್ಟು, ನಿಮ್ಮೆಲ್ಲಾ ಕಂಗಾಲ್ ಮಾಡಿಕೆ ನಂಗೆ ಮನ್‌ಸಿಲ್ಲೆ. ಆದರೆ ಈ ಕಾಯಿಲೆ ತುಂಬಾ ಬೆಳ್‌ದುಟ್ಟು. ಎರ್ಡ್ ಮೆಟ್ಟ್ ಹತ್ತಿಕೂ ಆಲೆ, ಉಬ್ಬಸ ಬಂದದೆ. ಎಸ್ಟೋಲಕ್ಸ ರೂಪಾಯಿ ಕರ್ಚ ಮಾಡಿ, ಇತ್ತ ಜೀವನೂ ಇಲ್ಲೆ, ಅತ್ತ ದುಡ್ಡುನೂ ಇಲ್ಲೇಂತ ಆದರೆ' ಹೆಣ್ಣ್‌ನಮಾತ್ ಪೂರ ಆಕೆ ಮುಂದೇ ಪೂವಯ್ಯ ಜೋರು ಮಾಡುವಾಂಗೆ 'ದುಡ್ಡುನ ನಾವು ಮಾಡ್ದು, ದುಡ್ಡು ನಮ್ಮ ಮಾಡ್ದು ಅಲ್ಲಾ. ನೀ ಒಮ್ಮೆ ವಾಸಿ ಆಗಿ ಮನೆಗೆ ಬಾ. ಆಮೇಲೆ ನೋಡು ನಾವು ಬದ್‌ಕುವ ರೀತಿ. ಎಸ್ಟ್ ಉಟ್ಟೋ ಅಸ್ಟ್, ಹೇಂಗೆ ಬೇಕೋ ಹಾಂಗೆ, ಸರಳ ಜೀವನ ನಡ್‌ಸೊನ, ಮಕ್ಕಳಿಗೆ ಬಾರ ಆಗಿ ಇರ್ದು ಬೇಡ. ನಮ್ಮ ಗೇಣುದ್ದ ಹೊಟ್ಟೆ ತುಂಬ್‌ಸಿಕೆ ಕಸ್ಟ್ ಆಕಿಲ್ಲೆ. ಇಬ್ಬೊರಿಗೂ ಪೆನ್ಸನ್ ಬಂದದೆ. ಉಳ್‌ದ ನಮ್ಮ ಆಯಿಸ್‌ನ ಮಾದರಿಯಾಗಿ ಕಳೆಯನ. ನಂಗೆ ನೀ, ನಿಂಗೆ ನಾ ಒಬ್ಬಂಗೆ ಒಬ್ಬ ಆಸರೆಯಾಗಿ ಬೊದ್ಕೊನ.'

ನಿಮ್ಮ ಮಾತೇನೋ ಸರಿ, ಆದರೆ ನಮ್ಮ ಮಕ್ಕ ನಮ್ಮ ಬುಟ್ಟು ಹಾಕುವನಾ? ಖಂಡಿತಾ ಬುಟ್ಟು ಹಾಕಿಕಿಲ್ಲೆ. ಆದರೆ ಮಾತ್ರ ನೀವು ಎಲ್ಲಿ ಇದ್ದರೆನೊ ಅಲ್ಲಿಯೇ ನಾ. ನೀವೊಂದು ಕಡೆ, ನಾ ಒಂದು ಕಡೆ ಬೇಡವೆ ಬೇಡ. ಅಮ್ಮ ಅಣ್ಣನೊಟ್ಟಿಗೆ ಇರ್ಲಿ, ಅಪ್ಪ ನನ್ನೊಟ್ಟಿಗೆ ಬರ್ಲಿಂತ ಮಗ ಖಂಡಿತಾ ಹೇಳಿಕಿಲ್ಲೆ. ಕೂಸಾಗಿರ್ಕನ ಏನೋ 'ನನ್ನ ಕೂಸು . . . ನನ್ನ ಕೂಸು . . . ನಾ ಅಪ್ಪನ ಕೂಸೂ'ಂತ ನನ್ನ ಹೀಯಾಳಸಿರ್ದು, ಈಗ ಅದಕ್ಕೆ ಅಮ್ಮನ ಮೇಲೆನೇ ಪ್ರೀತಿ, ಮಂಜಂಗಂತೂ ಅಮ್ಮಂತೇಳ್‌ರೆ ಜೀವ.

'ಸರಿಯಪ್ಪ ನೀ ಗ್ರೇಸಿದಾಂಗೆ ಆಗಲಿ, ಮಕ್ಕಳೊಟ್ಟಿಗೆ ಇದ್‌ಕಂಡ್ ಪಿಳ್ಳಿಕಳ ಎತ್ತಿ ಆಡ್ಸಿಕಂಡ್ ನಮ್ಮ ಮುದಿತನನ ಕಳೇನೊ. ನಮ್ಮ ಮಕ್ಕ ಎಲ್ಲರ ಮಕ್ಕಳಾಂಗೆ ಅಲ್ಲಾ, ಹೆತ್ತವರ ಯಾಗೊಳು ದೂರ ಮಾಡಿಕಿಲ್ಲೆ. ಈಗ ಮುಖ್ಯ ಆಕಾದ್ದ್ ನಿನ್ನ ಆಪರ್ಸನ್. ಅದೊಂದು ಲಾಯಿಕ್‌ಲಿ ಆಗಲಿ. ಎದ್ರ್ ಪೋಯಿ ಬಂದ್ ಸುಮಾರ್ ಹೊತ್ತಾತ್' ಕೈ ಹಿಡ್ದ್ ಎದ್ರ್‌ಸಿದ ಗಂಡನ ಕೈನ ಗಟ್ಟಿ ಹಿಡ್‌ಕಂಡ್ ಮೆಲ್ಲೆ ಹೆಜ್ಜೆ ಹಾಕಿತ್ ಪೊನ್ನಮ್ಮ. ಕಾಲದ ಪೊಯ್ಯೆ ಮೇಲೆ ಹೆಜ್ಜೆಗುರತು ಅಚ್ಚೊತ್ತ್‌ತಿತ್!?

* * * * *

# ಬೆತ್ತ ಕೊಣೀತ್ತಿತ್.....!!!

ಅಪ್ಪಂದ ಹೊಡ್ಸಿಕಂಡ ಮಂಜ !!
ಗುರುಂದ ಸಿಕ್ಸೆಗೊಳಗಾದ ಸಿಸ್ಯ !!
ಸುತ್ತಿಗೆಂದ ಪೆಟ್ಟ್‌ತಿಂದ ಚಿನ್ನ !!
ಲೋಕಲಿ ಬೆಳ್ಗುದು ನಿಗಂಟ್ !!!

ಬೆಂಗಳೂರ್ ಜೆ.ಪಿ. ಪಾರ್ಕ್‌ಲಿ ವಾಕಿಂಗ್ ಮಾಡಿಕಂಡಿರ್‍ಕನ ಗಿರಿಗೆ ನಮ್ಮ ಹಳೆ ಹೈಸ್ಕೂಲ್‌ನ ಲೆಕ್ಕದ ಮಾಸ್ಟ್ರ ರಾಂ ಭಟ್ರ್ ಹಾಂಗೆ ಇರುವ ಒಬ್ಬ ಮೊನ್ಸ ಕಲ್ಲ್ ಬೆಂಚ್‌ನ ಮೇಲೆ ಕುದ್ದುಕಂಡಿರ್ದು ಕಂಡತ್. ಛೆ ನಮ್ಮ ಲೆಕ್ಕದ ಮಾಸ್ಟ್ರ ಆಗಿರಿಕಿಲ್ಲೆ. ಅವು ಎಂತಕೆ ಬೆಂಗಳೂರ್‌ಲಿ ಇದ್ದವೆಂತ ಗ್ರೇಸಿಕಂಡ್ ಇಂವ ವಾಕಿಂಗ್ ಮಾಡಿಕಂಡ್ ಇತ್. ಆ ಮೊನ್ಸ ದಿನೊಳೂಂತ ಹೇಳ್ವಾಂಗೆ ಒಂದಲ್ಲ ಒಂದು ಕಡೆ ಕಲ್ಲ್‌ಬೆಂಚ್‌ಲಿ ಕುದ್ದುಕಂಡಿರ್ದು ಕಂಡ್‌ಕಂಡೇ ಇತ್. ಆ ಮೊನ್ಸನ ತಲೆ ಪೂರಾ ಬೆಳ್ಳಂಗೆ ಆಗುಟ್ಟು, ಮೋರೆಸಾ ನೆರಿಕಟ್ಟಿಟ್ಟು, ಮೀಸೆ ಇಲ್ಲೆ, ವಾಕಿಂಗ್ ಸ್ಟಿಕ್ ಬೇರೆ ಕಂಡದೆ, ಇವು ಯಾರೋ ಬೇರೆ ಆಗಿರ್‍ದೂಂತ ಗಿರಿ ಅವನ ಪಾಡಿಗೆ ಯಾಗೊಳು ತನ್ನ ವಾಕಿಂಗ್, ಜಾಗಿಂಗ್‌ತ್ತ ಓಡಾಡಿಕಂಡೇ ಇತ್. ಆದರೂ ಆ ಮೊನ್ಸನ

ಮರಿಯಕೆ ಆತಿಲ್ಲೆ. ಒಬ್ಬನಾಂಗೆ ಒಬ್ಬ ಎಸ್ಟೋ ಜೆನ ಇದ್ದವೆ, ನಮ್ಮ ಮಾಸ್ತ್ರ ಊರು ಕನ್ನಡ ಜಿಲ್ಲೆ, ಅವು ಮಂಗಳೂರ್‌ಲಿಯಾರ್ ಕಂಡಿದ್ದರೆ, ಅವೇತ ಹೋಗಿ ಮಾತಾಡ್ಸಕಾತ್, ಇದ್ ಬೆಂಗಳೂರ್‌ಲಿ! ಇದ್ ಯಾರೋ ಏನೋಂತ ಗ್ರೇಸಿಕಂಡತ್. ಹಾಂಗೆ ಒಂದು ದಿನ ವಾಕ್ ಮಾಡಿ ಹಂಞ ಕುದುರೊನೋಂತ ಒಂದು ಕಲ್ಲ್ ಬೆಂಚ್‌ನ ಮೇಲೆ ಹೋಗಿ ಕುದ್ದತ್ ಗಿರಿ. ನೋಡ್ರೆ ಹಕ್ಕಲೆನ ಕಲ್ಲ್ ಬೆಂಚ್‌ಲಿ ಅದೇ ಮೊನ್ನ ಕುದ್ದುಕಂಡ್ ಉಟ್ಟು, ಯೋರೊಟ್ಟಿಗೋ ಮೊಬೈಲ್‌ಲಿ ಮಾತಾಡ್‌ತಾ ಉಟ್ಟು. ಮೆಲ್ಲೆ ಕೆಬಿ ಕೊಟ್ರೆ ಕನ್ನಡ ಜಿಲ್ಲೆ ಹವಿಕರ ಹೋಪಲೆ ಬಪ್ಪಲೆ ಬಾಸೆ. ಗಿರಿಗೆ ಈಗ ಇವು ನಮ್ಮ ಲೆಕ್ಕದ ಮಾಸ್ಟ್ರನೋಂತೇಳ್ದು ನಿಗಂಟ್ ಆತ್. ಏನೇ ಆಗಲಿ ಒಮ್ಮೆ ಹೋಗಿ ಮಾತಾಡ್ಸಿಯೇ ಬುಡೊನೋಂತ ಗ್ರೇಸಿಕಂಡ್ ಹಕ್ಕಲೆ ಹೋಗಿ 'ಗುಡ್ ಮಾರ್ನಿಂಗ್ ಸರ್'ಂತ ಹೇಳ್ತ್. ಅವು ತಲೆ ಎತ್ತಿ 'ಗುಡ್ ಮಾರ್ನಿಂಗ್' ಹೇಳ್ದೊ. ಅವರ ಸೊರ ಕೇಳಿ ಇವು ನಮ್ಮ ಮಾಸ್ಟ್ರೇಂತ ಹೇಳ್ದಕ್ಕೆ ಸಂಸಯನೇ ಇಲ್ಲೇಂತ 'ಸರ್ ತಾವು ರಾಂ ಭಟ್ ಮಾಸ್ಟ್ರ ಅಲ್ವಾ'ಂತ ಕೇಳ್ತ್. ನನ್ನ ಮೋರೆನ ಹಂಞ ಹೊತ್ತು ನೋಡಿ 'ಹೌದು, ತಾವು ಯಾರೂಂತ ಗೊತ್ತಾಗ್ಲಿಲ್ಲಾ'ಂತ ಹೇಳ್ದೊ. 'ಸರ್ ನಾನು ನಿಮ್ಮ ಶಿಷ್ಯ ಗಿರೀಶ'ಂತ ಹೇಳಿ ಮಾಸ್ತ್ರ ಕಾಲ್ ಹಿಡ್ತ್. 'ಹೌದಾಪ್ಪಾ, ಸಂತೋಷ ಬೆಂಗಳೂರಿನಲ್ಲಿ ಏನ್ ಮಾಡ್‌ಕೊಂಡಿದ್ದೀಯಾ'ಂತ ಕೇಳ್ದೊ. 'ಸರ್ ನಾನು ಈಗ ಇಲ್ಲಿ ಟಿ.ಸಿ.ಎಸ್. ಕಂಪೆನಿಯಲ್ಲಿ ಸಾಫ್ಟ್‌ವೇರ್ ಇಂಜಿನಿಯರ್ ಆಗಿದ್ದೇನೆ', ನಿಮ್ಮಿಂದಾಗಿ ಪಿ.ಯು.ಸಿ.ಯಲ್ಲಿ ಮೇತ್ಸ್, ಫಿಸಿಕ್ಸ್‌ಗಳಲ್ಲೆಲ್ಲಾ ಒಳ್ಳೆ ಮಾರ್ಕ್ ಬಂತು, ಸಿ.ಇ.ಟಿ.ಯಲ್ಲೂ ಒಳ್ಳೆ ರ್‍ಯಾಂಕ್ ಬಂದು ಇಲ್ಲೇ ಬಿ.ಎಂ.ಎಸ್. ಕಾಲೇಜಿನಲ್ಲಿ ಇಂಜಿನಿಯರಿಂಗ್ ಮಾಡ್ದೆ, ಕ್ಯಾಂಪಸ್ ಸಿಲೆಕ್ಷನ್ ಆಗಿ ಟಿ.ಸಿ.ಎಸ್.ನಲ್ಲಿ ಅಪಾಯಿಂಟ್‌ಮೆಂಟ್ ಆಯತು ಸಾರ್'ಂತ ಹೇಳ್ತ್. 'ತುಂಬಾ ಸಂತೋಷಪ್ಪ, ನಿನ್ನ ಕಂಡು ತುಂಬಾ ಖುಷಿಯಾಯ್ತೂಂತ' ಹೇಳ್ದೊ. 'ಸರ್ ತಾವು ಬೆಂಗಳೂರಲ್ಲಿ . . . ?'ಂತ ಗಿರಿ ಕೇಳ್ದಕ್ಕೆ 'ನಾನು ಇಲ್ಲೇ ಗೋಕುಲದಲ್ಲಿ ಮಗನ ಮನೆಯಲ್ಲಿದ್ದೇನೆ'ಂತ ಹೇಳ್ದೊ. ಮಾಸ್ತ್ರ ಮೊಬೈಲ್ ನಂಬರ್, ಮನೆ ಅಡ್ರೆಸ್ ತಕಂಡ್ ಅವನ ಪಾಡಿಗೆ ಹೋತು.

ಹೈಸ್ಕೂಲ್‌ನ ಲೆಕ್ಕದ ಮಾಸ್ತ್ರ ಕಂಡ ಕುಸಿಲಿ ಅಂದೇ ಕತ್ತಲೆಗೆ ಬೆಂಗ್‌ಳೂರ್‌ಲಿ ಇರುವ ಅವನ ದೋಸ್ತಿಗ ಬೋಪಯ್ಯ, ಜೋಯಪ್ಪ, ಅನಿಲ್, ಇಂದಿರಾ, ಪೊನ್ನಮ್ಮಂಗೆಲ್ಲಾ ಪೋನ್ ಮಾಡಿ, ಲೆಕ್ಕದ ಮಾಸ್ಟ್ರ ರಾಂಭಟ್ ಬೆಂಗಳೂರ್‌ಲಿ ಇರ್ದರ ಹೇಳ್ತ್. ದೋಸ್ತಿಗ ಎಲ್ಲಾ ಸೇರಿ ಇಪ್ಪತ್ತೈದ್-ಮೂವತ್ತ್ ವರ್ಸಗಳ

ಹಿಂದೆ ಪಾಠ ಮಾಡ್ದ ಮಾಸ್ತ್ರ ಒಮ್ಮೆ ಕಂಡ್ ಮಾತಾಡ್ಸಿಕಂಡ್ ಬಾದೂಂತ ನಿಗಂಟ್ ಮಾಡ್ದೊ. ಹೇಂಗೂ ಮಾಸ್ತ್ರ ಕಾಂಬ ಲೆಕ್ಕಲಿ ದೋಸ್ತಿಗೆಲ್ಲಾ ಒಟ್ಟು ಸೇರ್ದಾಂಗೂ ಆತ್, ಅಂದ್ ಹನ್ನೆರ್ಡ್ ಗಂಟೆಗೆ ಯಶವಂತಪುರದ ಒರಾಯನ್ ಮಾಲ್‌ಲಿ ಎಲ್ಲವೂ ಸೇರಿ, ಅಪೂರ್ಪಕ್ಕೆ ಮಾಸ್ತ್ರ ಕಾಂಬೊದರ್‌ಂದ ನೆನ್ಪಿಗೆ ಒಂದು ಗಿಫ್ಟ್ ತಕಂಡ್ ಅಲ್ಲೆ ಲಂಚ್ ಮುಗ್ಸಿ ಹಿಂಬೊತ್ ನಾಲ್ಕ್ ಗಂಟೆಗೆ ಮಾಸ್ತ್ರ ಮನೆಗೆ ಹೋದೂಂತ ಮಾತಾಡಿಕಂಡೊ.

ಆ ದಿನ ಬಂದೇ ಬಾತ್, ಚಡ್ಡಿ ದೋಸ್ತಿಗ ಎಲ್ಲಾ ಒರಾಯನ್ ಮಾಲ್‌ಲಿ ಸೇರ್ದೊ. ಬಾಳ ಸಮೇಂದ ಎಲ್ಲವೂ ಒಟ್ಟಿಗೆ ಸೇರ್ದರ್‌ಂದ ಕುಸಿಯೋ ಕುಸಿ. ಹಾಂಗೆ ಒಬ್ಬೊಬ್ಬ ಹಳೇ ನೆನ್ಪುಗಳ ಪಟ್ಟಾಂಗ ಸುರು ಮಾಡ್ದೊ. ಗಿರಿ ಇದೇ ನಮ್ಮ ರಾಂಭಟ್ಟ ಮಾಸ್ಟ್ರ ಟೆಸ್ಟ್ ಪೇಪರ್ ಕೊಡುವ ಕತೆನ ನೆಂಪು ಮಾಡ್ತ್. ಪ್ರತಿ ತಿಂಗಳ ಅಕೇರಿ ವಾರ ಅಟೆಂಡರ್ ನಾಗಪ್ಪ ಮೂವತ್ತ್ ಟೆಸ್ಟ್ ಪುಸ್ತಕಗಳ ಮೇಲೆ ಒಂದು ಪಳ ಪಳ ಹೊಳೆವ ನಾಗರ ಬೆತ್ತನ ಇಸಿಕಂಡ್ ಬಂದ್ ಮೇಜಿನ ಮೇಲೆ ಇಸ್‌ಕನ ಎಲ್ಲಾ ಮಕ್ಕಳ ಎದೆ ಡವಡವ ಪುಕಪುಕ!? ಕಡ್ಮೆ ಮಾರ್ಕ್ ತೆಗ್ದವನ ಪುಸ್ತಕ ಮೇಲೆ, ಕ್ಲಾಸಿಗೆ ಪಸ್ಟ್ ಬಂದವನ ಪುಸ್ತಕ ಅಡೀಲಿ. ಮಾಸ್ಟ್ರ ಕ್ಲಾಸಿಗೆ ಬಾಕೆ ಮುಂದೆ ಎಲ್ಲಾ ಮಕ್ಕ ಎದ್ದ್ ಎದ್ದ್ ನನ್ನ ಪುಸ್ತಕ ಎಲ್ಲ್ಯುಟ್ಟು, ಎಸ್ಟ್ ಮೇಲೆ ಉಟ್ಟೂಂತ ಅಂದಾಜಿ ಮಾಡ್ದು. ಮಾಸ್ಟ್ರ ಕ್ಲಾಸಿಗೆ ಹೊಕ್ಕೊಂತೇಳ್ಕನ ಕ್ಲಾಸ್ ಪಿನ್ ಡ್ರಾಪ್ ಸೈಲೆನ್ಸ್' !!! ಮಾಸ್ಟ್ರ ಒಬ್ಬೊಬ್ಬನೇ ಕರ್ದ್ ಪ್ರತಿಯೊಂದು ತೊಪ್ಪುನೂ ತೋರ್ಸಿ ತೊಪ್ಪಿಗೆ ಒಂದರಾಂಗೆ ಒಂದೊಂದು ಪೆಟ್ಟ್ ಅಸ್ಟೇ . . . ಹೆಚ್ಚೇನು ಇಲ್ಲೆ ! ! ! ಒಮ್ಮೆ ನಾವು ಒಂಭತ್ತನೇ ಕ್ಲಾಸ್‌ಲಿ ಇರ್‌ಕನ ಬಿಟ್ಟೀರ ನಾಣಿಗೆ ಹೊಡ್ದ ಏಟ್‌ಲಿ ರಾತ್ರೆ ಇಡೀ ಜರ. ಏನಾತ್‌ಂತ ಕೇಳ್ರೆ ಮಂಜ ಹೇಳ್‌ತ್ತಲೆ. ಪೇಂಟ್ ಬಿಚ್ಚಿ ಚೆಡ್ಡಿ ಹಾಕ್‌ಕನ ನೋಡ್ದ ಅಯ್ಯಗೆ ಪೆಟ್ಟ್‌ನ ಬರೆಗ ಕಂಡತ್. ಕೋಲ್ ಕಾಲ್‌ಂದ ಹಿಡ್ದ್ ಪುಕುಳಿ ಮುಟ್ಟ ಎಲ್ಲೂ ಜಾಗೆ ಕಾಲಿ ಇಲ್ಲೆ, ಕೆಂಪು ಕೆಂಪು ಬರೆಗಳೇ ಬರೆಗ, ಒಂದೆರ್ಡ್ ಕಡೆ ಒಡ್ದ್ ನೆತ್ರ್ ಬಾತಾ ಉಟ್ಟು. ಹೆತ್ತ ಅಯ್ಯೆನ ಕರ್‌ಳ್ ಚುರುಗುಟ್ಟಿತ್, ಇದೆಂತ ಮೊನ್ಸಾಂತ ಮಾಸ್ಟ್ರಗೆ ಸಾಪ ಹಾಕಿಕಂಡ್ ಒಳ್ಳೆ ಮೆಣ್ಸ್‌ನ ಸೊಪ್ಪು ತಂದ್ ಎಣ್ಣೆ ಪೂಜಿ ಕೆಂಡಕ್ಕೆ ಹಿಡ್ದ್ ಹಂಜ ಬಿಸಿ ಮಾಡಿ ಮೆಲ್ಲೆ ಮೆಲ್ಲೆ ಬರೆಗಳ ಮೇಲೆ ಇಸಿ ವೈದ ಮಾಡ್ತ್. ಮಾಸ್ತ್ರ ಪೆಟ್ಟ್‌ಂದ ಜೆರ ಬಂದ್ ನಾಣಿ ಮಲ್‌ಗಿದ್ದ ಸುದ್ದಿ ನೆರೆಕರೆಗೆಲ್ಲಾ ಗೊತ್ತಾತ್. ಮರ್‌ದಿನ ನಾಣಿನ ಅಪ್ಪ ಮಾಚಯ್ಯ ನಾಲ್ಕ್ ಜನನ ಕೂಡ್ಸಿಕಂಡ್ ಮಾಸ್ಟ್ರ

ಮೇಲೆ ಪುಕಾರ್ ತಕಂಡ್ ಹೆಡ್ ಮಾಸ್ಟ್ರಲ್ಲಿಗೆ ಹೋದೊ. ಹೆಡ್ ಮಾಸ್ಟ್ರ ಬಂದವರೆಲ್ಲಾ ಕುದ್ರಿಸಿಕಂಡ್ ನಾಟಿ ಆತೊ, ಈ ವರ್ಸ ಕಾಪಿ ಹೇಂಗೆ, ಹಂಗೆ ಹಿಂಗೆಂತ ಸುಖ ದುಃಖ ಮಾತಾಡಿ ತಾಳ್ಮೆಂದ ಇವು ಹೇಳ್ದ ಪುಕಾರ್‌ಗಳ್ನೆಲ್ಲಾ ಕೇಳಿ ಮಾಸ್ಟ್ರ ಯಾಕೆ ಹೊಡ್ದವೆ? ನಿಮ್ಮ ಮಂಜಂನ ಮೇಲೆ ಮಾಸ್ಟ್ರಗೇನ್ ದ್ವೇಷ? ನಿಮ್ಮ ಮಂಜ ಲಾಯಿಕ್ ಓದೊಕು, ಕಡೇಗೆ ಎಸ್.ಎಸ್.ಎಲ್.ಸಿ. ಆದರ್ ಪಾಸ್ ಮಾಡಿಕಂಡ್ರೆ, ಮಿಲಿಟ್ರಿಗಾರ್ ಸೇರಕ್‌ಂತೇಳುವ ಉದ್ದೇಸಂದ ತೊಪ್ಪು ಮಾಡ್ಕನ ಹೊಡ್ದವೆ ಅಸ್ಟೇಂತ ಹೇಳ್ದೊ. ನೀವು ಮಕ್ಕಳಿಗೆ ಸಾಲೆ ಪೀಸ್, ಪುಸ್ತಕ, ಬಟ್ಟೆ ಬರೇಂತ ವರ್ಸಕ್ಕೆ ಎಸ್ಟ್ ಕರ್ಚಿ ಮಾಡ್ರೆ, ಅಸ್ಟೆಲ್ಲಾ ಕರ್ಚಿ ಮಾಡ್ಕನ ಅಂವ ಓದಿ ಪಾಸಾಗದ್ರೆ ಏನ್ ಪ್ರಯೋಜನ, ಹಾಂಗೆ ಹೀಂಗೆಂತ ಉಪದೇಸ ಮಾಡಿ ಬಂದವರ ಸಾಗ್ ಹಾಕಿದೊ. ಆಗ ಬೋಪಯ್ಯ ನೀವು ಏನೇ ಹೇಳಿ ರಾಂಭಟ್ ಮಾಸ್ಟ್ರ ಎಸ್ಟೇ ಹೊಡೆತ್ತಿದ್ದರೂ ಅಸ್ಟೇ ಲಾಯಿಕ್ ಪಾಠನೂ ಮಾಡ್‌ತ್ತಿದ್ದೊ. ಅವರ ಕೈಲಿ ಲೆಕ್ಕಲಿ ಪಾಸಾಗದಂವ ಜಲ್ಮಕ್ಕೆ ಪಾಸಕಿಲ್ಲೆ. ಅವು ಬರೇ ಲೆಕ್ಕಕ್ಕೆ ಮಾಸ್ಟ್ರಲ್ಲಾ, ಲೆಕ್ಕಕೆ ಸಿಕ್ಕುವ ಮಾಸ್ಟ್ರಂತ ಹೇಳ್ತ್!?

ಅಸ್ಪೊತ್ತಿಗೆ ಜೋಯಪ್ಪ ಸುರು ಮಾಡ್ತ್. ಅವನ ಹೆಸ್ರೇ ಜೋಯ್-ಅಪ್ಪ!? ಇನ್ನ್ ಕೇಳೊಕೊ ಅವನ ತಮಾಸೆನ? ದೊಡ್ಡದೊಡ್ಡ ಹೈದಂಗ ಕೆಲವು ಪೊಡಿಕಳ್ನ್ ಕರ್ಕಂಡ್ ಕಾಟಿ (ಸರಾಯಿ) ಕುಪ್ಪಿ ತಂದ್ ಕಾಪಿ ತೋಟಲಿ ರುಚಿ ನೋಡ್ದ ಸುದ್ದಿ ಎತ್ತಿತ್. ಈ 'ಕಾಟಿ ಪಾರ್ಟಿ'ನ ಸಂಗ್ತಿ ಮಾಸ್ಟ್ರಗಳಿಗೆ ಹೇಂಗೊ ಗೊತ್ತಾತ್. ಮರ್‌ದಿನ ಆ ಮಕ್ಕ ಎಲ್ಲಾ ಅಪ್ಪಂದರ ಕರ್ಕಂಡ್ ಬಾಕೂ ಬಂದೊ. ವಿಚಾರಣೆ ಸುರು ಆತ್. ಆದರೆ ಮಕ್ಕ ಯಾರೂ ಸತ್ಯನ ಬಾಯಿ ಬುಡುವಾಂಗೆ ಕಂಡತ್ಲೆ. ನಮ್ಮ ಬಿದ್ದಪ್ಪ ಮಾಸ್ಟ್ರಿಗೆ ಎಲ್ಲಿತ್ತೋ ಸಿಟ್ಟ್, ಎಮ್ಮೆ ಬೆತ್ತ ತೆಗ್ದ್ ನಾಲ್ಕ್ ನಾಲ್ಕ್ ಪೊಳಿ ಬುಟ್ಟದರ್ಲಿ ಸತ್ಯ ಪೂರಾ ಹೊರಗೆ ಬಾತ್. ಚೋಟುದ್ದ ಹೈದ ಮಣಿಗೆ ಬುಟ್ಟ ಪೆಟ್ಟ್‌ಲಿ ನೆತ್ತರ್ ಚಿಮ್ಮಿ ಬಿದ್ದಪ್ಪ ಮಾಸ್ಟ್ರನ ಬಿಳಿ ಪೇಂಟ್ ಕೆಂಪಾತ್. ಅವನ ಅಪ್ಪ ಮಂಜಂಗೆ ಬಿದ್ದ ಪೆಟ್ಟ್‌ನ ನೋಡಿ, 'ಪವನ್‌ರಂತ ಪೊಯ್ಯ್‌ತ್'ಂತ ಹೇಳ್ದೊ!? ಮತ್ತೊಂದು ತಮಾಸೆ ಗೇನ ಆದ ಜೋಯಪ್ಪ ನಮ್ಮ ವಿಜ್ಞಾನ ಮಾಸ್ಟ್ರ ಅಚ್ಚಯ್ಯ ಟೆಸ್ಟ್ ಪೇಪರ್ ಕೊಡ್‌ಕನ ಹೊಡಿಯೊತ್ತಿದ್ದರ ಹೇಳಿಕೆ ಸುರು ಮಾಡ್ತ್. ಅವರ ಹೊಡ್ತ ದೊಡ್ಡ ಲೆಕ್ಕಕೆ ಇಲ್ಲೆ. ಆದರೂ ಆ ಮೊಮ್ಮದೆ, ಮಾಸ್ಟ್ರ ಹೊಡ್ಯಕೆ ಬಾಕನ ಬೇಡ ಸಾರ್, ಬೇಡ ಸಾರ್‌ಂತ ಹುಸಿ ನೆಗೆ ನೆಗಾಡಿಕಂಡ್ ಬೆತ್ತನ ಮೆಲ್ಲೆ ಹಿಡ್ದ್ ಡೆಸ್ಕ್ ಒಳಗೆ ತುರ್ಕುದು, ಮಾಸ್ಟ್ರ ಸಿಟ್ಟ್‌ಲಿ ಲೀಡರ್‌ನ ಕರ್ದ್

ಮತ್ತೊಂದು ಬೆತ್ತ ತರ್ಸುದು ಇಂವ ಮತ್ತೆ ಮೆಲ್ಲೆ ಹಿಡ್ಕಂಡ್ ಡೆಸ್ಕ್‌ನ ಒಳಗೆ ಸೇರ್ಸುದು ಬಾರಿ ಲಾಯಿಕ್ ಇರ್‌ತ್ತಿತ್ತ್ ಅವನ ಆಟ!ಂತ ಹೇಳ್ತ್.

ಆಗ ಇಂದಿರಾ ನಮ್ಮ ಕನ್ನಡ ಮಾಸ್ಟ್ರ ದೊಡ್ಡಯ್ಯನವರ ನೀವೆಲ್ಲಾ ಮರ್ತೇ ಬುಟ್ಟರಿಯಲ್ಲಾ. ಯಾಗೊಳು ನೆಗೆ ಮೋರೆಲಿ ಇರ್ತಿದ್ದ ಮಾಸ್ತ್ರ ಕಂಡರೆ ನಾವುಗೆ ಯಾರಿಗೂ ಹೆದ್ರಕೆನೇ ಇತ್ಲೆ. ಶಾಲೆ ಸುರಾಗಿ ಮಕ್ಕಳಿಗೆ ಇನ್ನೂ ಪುಸ್ತಕ ತಕಂಡಾತ್ಲೆಂತ ಇರ್‌ಕನ ಎಸ್ಟೋ ಪುರಾಣದ ಕತೆಗಳ ಹೇಳ್‌ತ್ತಿದ್ದೊ. ರಾಮಾಯಣ, ಮಹಾಭಾರತದ ಪರೀಕ್ಷೆಗೂ ನಮ್ಮ ಕುದ್‌ರ್‌ಸ್‌ತ್ತಿದ್ದೊ. ಎಸ್ಟೋ ಮಕ್ಕ ಚಿನ್ನದ ಪದಕ, ಬೆಳ್ಳಿ ಪದಕ ಎಲ್ಲಾ ಪಡ್‌ದಿದ್ದೊ. ಅವು ಪ್ರಶ್ನೆ ಪತ್ರಿಕೆನ ಅಕೇರಿಗೆ 'ಸಿರಿಗನ್ನಡಂ ಗೆಲ್ಗೆ, ಸಿರಿಗನ್ನಡಂ ಬಾಳ್ಗೆ'ಂತ ಬರಿಯತ್ತಿದ್ದದ್, ಟೆಸ್ಟ್ ಪೇಪರ್ ಕೊಡ್‌ಕನ ಕಮ್ಮಿ ಮಾರ್ಕ್ ಸಿಕ್ಕದವುಕೆ ಮೋರೆ ಕೆಂಪು ಮಾಡಿ 'ಚೆನ್ನಾಗಿ ಓದಬೇಕು ಏನು'ಂತ ಹೇಳ್‌ತ್ತಿದ್ದ್. ಒಮ್ಮೊಮ್ಮೆ ಕೆಲವರ ಕೆಬಿ ತಿರ್‌ಂಟ್‌ತದ್ದೊದು ಇತ್ತ್. ಆ ಮಕ್ಕಗಳಿಗೆ ಮಾತ್ರ ಒಸಿನೂ ಬೇನೆನೆ ಆತಿತ್ಲೆ ಕಂಡದೆ, ಮಾಸ್ಟ್ರ ಕೆಬಿ ಹಿಡ್ದೊಂತ ಕುಸಿಲಿ ನೆಗಾಡಿಕಣ್‌ತ್ತಿದ್ದೊ! ಆ ಮಾಸ್ಟ್ರ ನಮ್ಮ ಕತೆ ಕವನ ಬರಿಯಕೆ ಎಸ್ಟ್ ಪುಸ್‌ಲಾಯಿಸ್‌ತ್ತಿದ್ದೊ! ಆಸಕ್ತಿ ಇರುವ ಮಕ್ಕಳೆಲ್ಲಾ ಒಟ್ಟು ಸೇರ್ಸಿ ಸಣ್ಣ ಸಣ್ಣ ಕವನ ಕತೆಗಳ ಓದಿ ಹೇಳ್‌ತ್ತಿದ್ದೊ. ಹೇಂಗೆ ಬರಿಯೊಕುಂತ ಹೇಳ್‌ತ್ತಿದ್ದೊ. ನಾವು ಏನಾರ್ ಬರ್ದ್ ಕೊಟ್ಟರೆ ತಿದ್ದಿ ಸರಿ ಮಾಡಿ 'ವಾಲ್ ಮೆಗಜಿನ್'ಲಿ ಹಾಕ್‌ತ್ತಿದ್ದದ್ ಎಲ್ಲಾ ಮರಿಯಕೆನೆ ಆಕಿಲ್ಲೆ. ಅವರ ಪ್ರೋತ್ಸಾಹಂದನೇ ನಂಗೆ ಸಾಹಿತ್ಯಲಿ ಆಸಕ್ತಿ ಹುಟ್ಟಿ, ಬರವಣಿಗೆ ಕಡೆ ಮನ್ಸ್ ಮಾಡ್ದ್. ಈಗ ನಾ ಟಿ.ವಿ.ಲಿ ವಾರ್ತಾವಾಚಕಿ ಆಗಿ, ಬರಹಗಾರ್ತಿ ಆಗಿರ್ಕೆ ಅವೇ ಕಾರಣಾಂತ ಹೇಳ್ತ್. ಅದೆಲ್ಲಾ ಸರಿ, ನಾವುಗೆ ಸೆರಿಯಾಗಿ ಕನ್ನಡ ಓದಿಕೆ ಬರಿಯಕೆ ಬಾಕೆ ಅವೇ ಕಾರಣ. ಅದಿರ್‌ಲಿ ಆ ಪಾಪದ ಮಾಸ್ಟ್ರಗೆ ಒಮ್ಮೆ ಸಿಟ್ಟ್ ಬಂದದ್ ನೀವುಗೆ ಗೇನ ಒಟ್ಟೋಂತ ಬೋಪಯ್ಯ ಕೇಳ್ತ್. ಎಲ್ಲವು ಅವನ ಮೋರೆ ನೋಡ್ದೊ. ಒಮ್ಮೆ ಆ ಸತದಡ್ಡ ದಿನುಗೆ ಟೆಸ್ಟ್‌ಲಿ ಇಪ್ಪತ್ತೈದಕ್ಕೆ ಐದ್ ಮಾರ್ಕ್ ಸಿಕ್ಕಿತ್. ಅಂವ ಅಪ್ಪಂಗೆ ತೋರ್ಸ್‌ಕನ ಐದರ ಹಿಂದೆ ಒಂದು ಸೇರ್ಸಿ ಹದಿನೈದ್ ಮಾಡಿ, ಈಚೆಲಿ ಅರ್ಧದ ಇತ್ತ ಒಂದು ಎರ್‌ಡ್ ಸೇರ್ಸಿ ಏನೆಲ್ಲಾ ತಿದ್ದಿ, ಅಪ್ಪನ ಕಣ್ಣಿಗೆ ಮೊಣ್ಣ್ ಹಾಕಿ ಬಿರ್ಸ ಅನ್ಸಿ ಕಂಡತ್. ಮಾಸ್ಟ್ರಗೆ ಕೊಡ್‌ಕಾಕಾನ ಪುನ ತಿದ್ದಿ ಕೊಟ್ಟತ್. ಇದ್ ಮಾಸ್ಟ್ರಗೆ ಗೊತ್ತಾಗಿ ಎಲ್ಲಿತ್ತೋ ಸಿಟ್ಟ್ ಬೆತ್ತಲಿ ನಾಲ್ಕ್ ಮೊಳಿ ಬುಟ್ಟದ್ರಲ್ಲಿ ಮಾಡ್ದ ತೊಪ್ಪುನ ದಿನು ಅಲ್ಲಾ ಅವನ ಅಪ್ಪನೂ ಒಪ್ಪಿಕಣೊಕೆ.

ಇನ್ನ್ ಅವರ ನಾಟಕದ ಕತೆ ಹೇಳ್‌ದೇ ಬೇಡ. ಅವರ್‌ದಾಂಗಿಯೇ ನಾ ಮೋರೆಗೆ ಬಣ್ಣ ಮೆತ್ತಿಕಂಡ್ ಸ್ಟೇಜ್ ಹತ್ತಿದ್. ನಾವುಗೆ ಸಾಲೆನ ಸ್ಕೂಲ್‌ಡೇಂತೇಳ್ರೆ ಎಸ್ಟ್ ಕುಸಿ ಇತ್ತ್. ಏನೆಲ್ಲಾ, ನಾಟಕ, ಡೇನ್ಸ್, ಕೋಲಾಟ ಮಾಡ್ತಿದ್ದೊಂತ ಹೇಳ್ತ್. ಆಗ ಪೊನ್ನಮ್ಮ ಮಾಸ್ಟ್ರ 'ಸೀತಾಪಹರಣ' ನಾಟಕಲಿ ನನ್ನ ಕೈಲಿ ಸೀತೆನ ಪಾರ್ಟ್ ಮಾಡ್ಸಿದ್, ಅಚ್ಚಯ್ಯ ಮಾಸ್ಟ್ರ ಇಂಗ್ಲೀಸ್ ನಾಟಕ ಶೇಕ್ಸ್‌ಪಿಯರ್‌ನ ಒಥೆಲ್ಲೋ ನಾಟಕದ ಭಾಗಲಿ ಡೆಸ್ಡಿಮೋನಳಾದ್ದ್ ಎಲ್ಲಾ ನೆನ್‌ಪು ಮಾಡ್ತ್. ಆಗ ಗಿರಿ ನಮ್ಮದೆಂತಾ ನಾಟಕ ಮಾಸ್ಟ್ರಗಳ ನಾಟಕ ನೆನ್‌ಪು ಮಾಡಿಕಣಿ. ನಮ್ಮ ದೊಡ್ಡಯ್ಯ ಮಾಸ್ಟ್ರ 'ಹುಚ್ಚ' ನಾಟಕಲಿ ನನ್ನ ಕೈಲಿ ಶ್ಯಾಮಣ್ಣನ ಮಂಜ ಕಿಟ್ಟುನ ಪಾರ್ಟ್ ಮಾಡ್ಸಿದ್ದೊ. ಮಾಸ್ಟ್ರಗಳ ಒಟ್ಟಿಗೆ ನಾನೂ, ಅಚ್ಚಯ್ಯ ಮಾಸ್ತ್ರ ಜುಗ್ಗನ ಪಾರ್ಟ್, ಬಿದ್ದಪ್ಪ ಮಾಸ್ತ್ರ 'ಸಂಪತ್' ಸಾವುಕಾರನ ಪಾರ್ಟ್, ನಮ್ಮ ದೊಡ್ಡಯ್ಯ ಮಾಸ್ತ್ರ ಶ್ಯಾಮಣ್ಣ! ನನ್ನ ಕೈ ಹಿಡ್ಕಂಡ್ ಮಂಜನ ಮಾರುವ ದೃಷ್ಯಲಿ ನಂಗೆ ನಿಜವಾಗಿಯೂ ಮರ್ದ್ ಬಾತಿತ್ತ್. ಅಕೇರಿ ದೃಷ್ಯಲಿ ಶ್ಯಾಮಣ್ಣಂಗೆ ಹುಚ್ಚು ಹಿಡ್ದ್ ಅಂಗಿನೆಲ್ಲಾ ಹರ್ದ್ ಹುಚ್ಚನಾಂಗೆ ಮಾಡ್ದ ನಟನೆ ನಿಜವಾಗೂ ಮಾಸ್ಟ್ರಗೆ ಹುಚ್ಚು ಹಿಡ್‌ತ್ತೋಂತ ಗ್ರೇಸೊಕು ಹಂಗಿತ್ತ್! ಊರ್‌ನವು ಕೆಲವು ಜನ ಇದ್ ನಾಟಕ ಅಲ್ಲಾ ಸಿನೆಮಾಂತ ಹೇಳಿಕಂಡ್ ಹೋತಿದ್ದೊ. ಆಗ ಇಂದಿರಾ ಕುವೆಂಪು ಹೇಳ್ದಾಂಗೆ 'ಆ ಕಾಲ ಒಂದಿತ್ತು ದಿವ್ಯತಾನಾಗಿತ್ತು ಬಾಲ್ಯವಾಗಿತ್ತು'ಂತ ಹೇಳ್ತ್.

ಆಗ ಜೋಯಪ್ಪ 'ನಮ್ಮ ಪಿ.ಟಿ. ಮಾಸ್ಟ್ರ ವಿಠಲ ನವರ ಮರ್ತರೆ ಹೆಂಗೆ? ಅವರ ಹಿಂದೆಂದ ಜೈ ಜೈ ವಿಠಲ ಪಾಂಡುರಂಗಾಂತ ಮಿಕ್ರಿ ಮಾಡ್ತಿದ್ದದ್! ಅವು ಬಂದ ಸುರುಲಿ ಹಂಜ ಲಾಯಿಕ್‌ಲಿ ಆಟ, ವ್ಯಾಯಾಮ, ಯೋಗಾಸನ ಹೇಳಿ ಕೊಡ್ತಿದ್ದೊ. ಯೋಗಾಸನಲಿ ಅವುಕೆ ತುಂಬಾ ಇಂಟೆರೆಸ್ಟ್, ಅದೇನೋ ಸೂರ್ಯ ನಮಸ್ಕಾರ, ಶಿರ್ಶಾಸನ, ತ್ರಿಕೋನಾಸನ, ವಜ್ರಾಸನ, ಭೂಜಂಗಾಸನಂತ ಏನೆಲ್ಲಾ ಕಲ್ಸ್‌ತಿದ್ದೊವು ಅಕೇರಿಗೆ ಕೆಲವು ಆಟ ಓಟಲಿದ್ದ ಗೂಡೆಗಳಿಗೆ ಪ್ರತ್ಯೇಕ ಪರಕಾಯ ಪ್ರವೇಶ ಆಸನಂತೇಳಿಯೊ ಏನೋ ಕಲ್ಸಿಕೆ ಸುರು ಮಾಡ್ದೊಂತ ಹೇಳ್‌ಕನ ಪೊನ್ನಮ್ಮ ಸಾಕ್ ನಿಮ್ಮ ಹರಿಕತೆ ಹೊತ್ತಾತ್, ಏನಾರ್ ತಿಂದ್, ಮಾಸ್ತ್ರ ಕಾಂಬಕೆ ಬೇಗ ಪೋಯೀಂತ ಹೇಳ್ತ್.

ಹಾಂಗೆ ಎಲ್ಲವೂ ಎದ್ದ್ ಅಲ್ಲಿಂದ ಫುಡ್ ಕೋರ್ಟ್‌ಗೆ ಹೋಗಿ ಹಾಳು ಮೂಳು ತಿಂದ್ ಮಾಸ್ಟ್ರಗೆ ನೆಂಪುನ ಕಾಣಿಕೆನ ತಕಂಡ್, ಹಣ್ಣ್‌ಹಂಪಲುಗಳ

ಕಟ್ಟ್‌ಸಿಕಂಡ್, ಹೋಕನ ಲೆಕ್ಕ ತೊಪ್ಪಿರೆ ಕಸ್ಟಾಂತ ಸೆರಿ ನಾಲಕ್‌ಗಂಟೆಗೆ ಮಾಸ್ತ್ರ ಮನೆ ತಲ್‌ಪಿದೊ. ಮಾಸ್ಟ್ರ ನಮ್ಮ ನಿರೀಕ್ಷೆಲಿ ಬಾಗ್‌ಲ್ ಹಕ್ಕಲೆ ಕಾಯ್ತಾನೆ ಇದ್ದೊ. ನಮ್ಮ ಹತ್ತ್ ಹದ್‌ನೈದ್ ಜನ ಮಕ್ಕಳ ಕಂಡ್ (ಈಗ ಗಂಡ್‌ಸ್ ಹೆಂಗ್‌ಸ್‌ಗ) ಮಾಸ್ತ್ರ ಮೋರೆಲಿ ಎಂದೂ ಕಾಣದ ನೆಗೆ ಮೂಡ್ತ್. ಎಲ್ಲರ ಹೆಸ್ರ್, ಕೆಲ್ಸ, ಎಲ್ಲಿ ಇರ್ದುಂತೆಲ್ಲಾ ಸುಖ ದುಃಖ ಇಚಾರ್ಸಿದೊ. ನಾವು ತಂದ ನೆಂಪುನ ಕಾಣಿಕೆನ ಮಾಸ್ತ್ರಿಗೆ ಕೊಡ್‌ಕನ ಅವರ ಕಣ್ಣ್ ಆನಂದ ಬಾಷ್ಪಲಿ ತುಂಬಿದ ಕೊಳ ಆತ್. 'ನಾನು ಕ್ಲಾಸಿನಲ್ಲಿ ನಿಮಗೆ ಸಿಕ್ಕಾಪಟ್ಟೆ ಹೊಡಿತ್ತಿದ್ದೆನೆಲ್ಲಾ ಮಕ್ಕಳೇ'ಂತ ಕೇಳ್ದೊ. ಆಗ ಗಿರಿ "ಸರ್ ನೀವು ಹಾಗೆ ಹೊಡೀತ್ತಿದ್ದರಿಂದಲೇ ಗಣಿತ ನಮ್ಮ ತಲೆಗೆ ಹತ್ತಿದ್ದು, ಗಣಿತದಲ್ಲಿ ಎಲ್ರೂ ಪಾಸಾಗ್ತಾ ಇದ್ದದ್ದು. ಅದರಿಂದಲೇ ನಾನು, ಬೋಪಯ್ಯ, ರವಿ ಎಲ್ಲಾ ಇಂಜಿನಿಯರ್ ಆದ್ವಿ, ಜೋಯಪ್ಪ ಸ್ಟೆಟಿಸ್ಟಿಕ್ಸ್ ಎಂ.ಎಸ್ಸಿಲಿ ರೇಂಕ್ ಬಂದು ಈಗ ಸ್ಟೇಟ್ ಬ್ಯಾಂಕಿನ ಜನರಲ್ ಮೆನೇಜರ್ ಆಗಿದ್ದಾನೆ. ಶಿಲ್ಪಿಯ ಉಳಿಯಿಂದ ಪೆಟ್ಟು ಬಿದ್ದಾಗಲೇ ಸುಂದರ ಮೂರ್ತಿ ನಿರ್ಮಾಣ ಆಗುತ್ತೆ"ಂತ ಹೇಳ್ತ್. ಎಲ್ಲವೂ ಮಾಸ್ತ್ರ ಕಾಲ್ ಹಿಡ್ದ್ ವಿದಾಯ ಹೇಳ್ದೊ.

* * * * *

# ಜೋಮಾಲೆ

ಬೇಷ ತಿಂಗಳ ರಣ ಬಿಸ್‌ಲ್. ತಡಿಯಕೆ ಬೊತ್ತದ ಸೆಕೆಲಿ ಕಾವೇರಮ್ಮ ಅಂಗಳಲಿ ಸಂಡಿಗೆ ಬಾಳಕಗಳ ಒಣಗಿಕೆ ಹಾಕಿಕಂಡ್ ಇದ್ದೊ. ಈ ಕೊಡ್‌ಗ್‌ಲಿಯೇ ಇಂತಾ ಬಿಸ್‌ಲ್ ಆದರೆ ಮಂಗ್ಳೂರು ಕಡೆ ಹೋಕೇ ಬೊತ್ತು ಪೂರಾ ಕರಂಚಿಯೇ ಹೋದೂಂತ ಗ್ರೇಸಿಕಂಡ್ ಸಂಡಿಗೆನ ಮೊಗ್‌ಚಿ ಹಾಕ್ಯಂಡ್ ಇರ್‌ಕನ ಗಂಡ ಬೋಪಯ್ಯನವು ಸ್ಕೂಟರ್‌ಲಿ ಬಂದ್, ಶೆಡ್ಡ್‌ಲಿ ಸ್ಕೂಟರ್‌ನ ನಿಲ್ಸ್‌ಸಿ ಕೈಕಾಲ್ ತೊಳಿಯಕೆ ಹೋದೊ. ಈ ಬಿಸ್‌ಲ್‌ಲಿ ಎಂತವನೂ ಕೈ ಕಾಲಿಗೆ ನೀರ್ ಹಾಕೊಕೇ ಮೀಂದಾಂಗೆ ಬೆಗರ್ ಅರ್ದದೆ. ಕೈ ಕಾಲ್ ತೊಳ್ದ್ ಬಂದ ಗಂಡ ಫ್ಯಾನಿನ ಸುಚ್ಚ್ ಹಾಕಿ ಸೋಪಲಿ ಉಪ್ಪಪ್ಪಾಂತ ಕುದ್ದೊ. ಅಸ್ಪೊತ್ತಿಗೆ ಕಾವೇರಮ್ಮ ನಿಂಬುಳಿ ಜ್ಯೂಸ್ ತಂದ್ ಕೊಟ್ಟೊ. ಅದರ ಒಂದೇ ಡಮ್ಮುಲಿ ಗಟಗಟನೆ ಕುಡ್ದ್ ಬೆಗರ್ ಒರ್‌ಸಿಕೊಂಡೊ. "ನೀವುಗೆ ಯಾಕೆ ಬೇಕು ರಾಜಕೀಯ, ಯಾರಾರೊಟ್ಟಿಗೆ ಸುತ್ತಿಕಂಡ್ ಇರ್ದಕಿಂತ. ಮನೆಲಿ ತೋಟ ತೊಡಿಗೆ ನೋಡಿಕಂಡ್ ತೆಪ್ಪಗೆ ಇರಕಲ್ಲಾ?"

"ನೋಡು ಕಾವೇರಿ ನಂಗೆ ಮನೇಲೆ ಇರಿಕೆ ಆದುಲ್ಲೆ. ಏನಾರ್ ಹಂಞ ಸಮಾಜಸೇವೆ ಮಾಡೊನಾಂತ".

"ನೀವುಗೆನಾ ಮೊದುವೆ ಆಗಿ ಬಂದಲ್ಲಿಂದ ನೋಡ್‌ತ್ತಾ ಒಳೆ ಯಾಗೊಳು ಪುರುಸೊತ್ತು ಇಲ್ಲೆ. ಪಿಂಚಣಿ ಆಕೆ ಮುಂದೆ ಆಫೀಸ್ ಗೀಪೀಸ್ ಆತ್. ಎಲ್ಲಾ ತಾನೇ ತಲೆ ಮೇಲೆ ಹೊತ್ತ್ ಕಂಡವರಾಂಗೆ ಆಡ್‌ತಾ ಇದ್ದರಿ; ಈಗ ಈಗ ಈ ಸುಟ್ಟ ರಾಜಕೀಯ.

"ಆತ್ ಮಾರಾಯಿತಿ, ನಿಂಗೆ ಒಂಚೂರು ಮನ್‌ಸಿಲ್ಲರೆ ನಂಗೆ ಯಾದೂ ಬೇಡ ಮನೇಲೇ ಕುಕ್ಕುರು ಬೊಡ್ಕಂಡ್ ಇದ್ದನೆ."

"ನಾ ಹಂಗೆ ಹೇಳ್‌ದಲ್ಲಾ? ನೀವುಗೆ ಈ ಪ್ರಾಯಲಿ ಹಂಞಾ ರೆಸ್ಟ್ ಬೇಕು. ಈ ಬಿಸ್‌ಲ್ ಮಳೇಂತ ನೋಡದೆ ಯಾರ್‌ಯಾರ್ದೊ ಕೆಲ್ಸಕ್ಕೆ ಹೊತ್ತು ಹೊತ್ತುಗೆ ಸೆರಿಯಾಗಿ ಊಟ ತಿಂಡಿ ಮಾಡದೆ ಸುತ್ತಾಡಿಕಂಡ್ ಇದ್ದರೆ ನಿಮ್ಮ ಆರೋಗ್ಯದ ಗತಿ ಏನಾದು? ನೀವುಗೆ ಈ ಸಮಾಜ ಸೇವೆಲಿ ಕುಸಿ ಉಟ್ಟುತಾದರೆ ನಂದೇನು ಅಡ್ಡಿಯಿಲ್ಲೆಪ್ಪಾ"

"ಹಾಂ.... ಅದೆಲ್ಲಾ ಇರ್‌ಲಿ. ಮಂಜ ಜಗ್ಗಂದ್ ಪೋನ್ ಬಂದುಟೂಂತ ಹೇಳ್ದಲ್ಲಾ? ಏನ್ ವಿಸೇಸ? ಪಿಳ್ಳೆಕೂಸು ಹೇಂಗುಟ್ಟುಗಡ? ಊರಿಗೆ ಬಂದೆವನಾ?"

"ನಾನೂ ಊರಿಗೆ ಒಮ್ಮೆ ಬಂದು ಹೋಗಿ, ಬಾರದೆ ವರ್ಸ ಹಕ್ಕಲೆ ಆತ್. ಕೂಸುನ ನೋಡೊಕೂಂತ ಆಸೆ ಆದೇ"ಂತ ಹೇಳ್ದೆ. ಅದಕ್ಕೆ ಅಂವ ನಂಗೆ ಈಗ ರಜೆನೇ ಸಿಕ್ಕುಲೆ. ಸರಳಂಗೆ ಒಂದಕ್ಕೆ ಅಸ್ಟ್ ದೂರ ಕೂಸುನೂ ಕರ್‌ಕಂಡ್ ಬಾಕೆ ಕಸ್ಟ. ನೀವೇ ಬಂದ್ ಹೋಗೀಂತ ಹೇಳ್ತ್.

"ಈಗ ಏನ್ ಮಾಡ್ದು ನಂಗಂತೂ ಹಂಞಾ ದಿನ ಒಂಚೂರು ಪುರುಸೊತ್ತು ಇಲ್ಲೆ. ನೀ ಒಮ್ಮೆ ಹೋಗಿ ಬಾದಾದರೆ ಬಾ"ಂತ ಹೇಳ್ದೊ ಬೋಪಯ್ಯ.

"ಹಾಂ ಹೇಳಿಕೆ ಮರ್‌ತೆ ನಮ್ಮ ಈರಪ್ಪ ಮಾಂವ, ಮರ್‌ಗೋಡುನವು ಗೊತ್ತುಟಲ್ಲಾ! ಅವು ಮನ್ನೆ ಮಡಿಕೇರಿಲಿ ಸಿಕ್ಕಿದೊ. ಗುರ್‌ತನೇ ಸಿಕ್ಕುದುಲೆ ಹಂಗೆ ಲಾಚಾರ್ ಆಗೊಳೊ. ಅವರ ಮಂಜ ಒಬ್ಬ ಅಮೆರಿಕಲಿ. ಮಗಳು ಆಸ್ಟ್ರೇಲಿಯಲಿ. ಒಬ್ಬೊನು ಬಾದು ಹೋದು ಬುಡ್. ಫೋನು ಮಾಡ್ದುಲ್ಲೆ ಗಡ. ಇವು ಈಗ ಅರೆಹುಚ್ಚನಾಂಗೆ ಆಗೊಳೊ. ಇದ್ದ ತೋಟನ ಮಾರಿ ಕುಶಾಲನಗರಲಿ ಹೊಸ್ತ್ ವೃದ್ಧಾಶ್ರಮ ಆಗುಟ್ಟುಗಡ. ಅದಕ್ಕೆ ಸೇರ್‌ದೂಂತ ಮಾಡಿಯೊಳೇ"ಂತ ಹೇಳ್ದೊ.

"ಅಯ್ಯೋ ಮೊನ್ಸನ ಪಾಡೇ ಅಂದ ಹಾಂಗೆ ನಾವುಗೆ ಎರ್‌ಡ್ ಸೀಟ್ ಈಗಲೇ ಬುಕ್ ಮಾಡಿ ಇಸುದಾ ಹೇಂಗೆ"ಂತ ಕಾವೇರಮ್ಮ ಬಾಯಿಗೆ ಕೋಲು

ಹಾಕಿದೊ ಬೋಪಯ್ಯ.

ಗಂಡನ ಮಾತ್ ಕೇಳಿ ಕಾವೇರಮ್ಮನ ಕಣ್ಣಿಂದ ಕಾವೇರಿ ಹರಿಯದೇನೊ ಪುಣ್ಯ. "ನೀವುಗೇನ್ ಹುಚ್ಚು? ಎಂತಾ ಮಾತಾಡ್ರೆ? ಈರಪ್ಪ ಮಾಂವನ ಮಕ್ಕಳಾಂಗೊ ನಮ್ಮ ಜಗ್ಗ? ಅಂವ ನಮ್ಮ ಬುಟ್ಟು ಹಾಕುದಾ?"ಂತ ಹೇಳಿಕಂಡ್ ಉಂಬಕೆ ರೆಡಿ ಮಾಡಿಕೆ ಒಳಗೆ ಹೋದೊ ಕಾವೇರಮ್ಮ.

ಕಾವೇರಮ್ಮಂಗೆ ಈಗ ಬೆಂಗಳೂರಿಗೆ ಮಂಜನ ಮನೆಗೆ ಹೊರ್‌ಡುವ ಸಂಭ್ರಮ! ಉಪ್ಪಿನಕಾಯಿ, ಸಾಂಬಾರ್ ಹೊಡಿ, ಕಾಫಿ ಹೊಡಿ, ಹಪ್ಪಳ, ಸಂಡಿಗೆ, ಬಾಳಕಗಳೆಲ್ಲಾ ಪ್ಯಾಕ್ ಮಾಡ್ದೇ ಕೆಲ್ಸ. ಬಾಳೇಕಾಯಿ, ಬಟರ್‌ಫ್ರೂಟ್, ಸೀಬೇಕಾಯಿಂತ ಇದ್ದೆಲ್ಲ ಹಣ್ಣ್‌ಗ. ಇನ್ನು ಪಿಳ್ಳೆಗೆ ಹೊಸ ಬಟ್ಟೆ. ಹೀಂಗೆ ಎಲ್ಲಾ ಸಾಮಾನ್‌ಗಳ ಕಟ್ಟ್‌ಕನ ಮನ್‌ಸ್‌ಲಿ ಏನೋ ಎಲ್ಲಾ ಯೋಚನೆಗ. ಈ ಮಕ್ಕಳೆಲ್ಲಾ ಹೆಚ್ಚಿ ಓದ್‌ಸಿಕೆ ಆಗದ್. ಅವು ಓದಿ ಆ ಕಂಪೆನಿಲಿ ಸಂಬಳ ಹೆಚ್ಚಿ, ಈ ಕಂಪೆನಿಲಿ ಸಂಬಳ ಹೆಚ್ಚೀಂತ ದೇಸ ಬುಟ್ಟ್ ಅಮೆರಿಕ, ಸಿಂಗಾಪುರಂತ ಹಾರುವೆ. ಊರ್‌ಲಿ ಇರುವ ಅಯ್ಯೆ ಅಪ್ಪ ಕಡೇಕಾಲಲಿ ಯಾರೂ ಇಲ್ಲದೆ ನರ್ಕ ಬಂದವೆ. ಇದ್ದದರ ಬೇಯ್ಸಿ ಹಾಕಿಕೂ ಜನ ಇರ್ದುಲ್ಲೆ. ಕಾಯಿಲೆ ಬಿದ್ದರೆ ದೇವ್ರೆ ಗೆತಿ. ಮತ್ತೆ ವೃದ್ಧಾಶ್ರಮನೇ ಮನೆ–ಮಸಣ! ಕೆಲವು ಮಕ್ಕ ಅಯ್ಯೆ ಅಪ್ಪನ ಅವು ಇದ್ದಲ್ಲಿಗೆ ಕರ್ಸಿಕಂಡವೆ. ಇನ್ನು ಕೆಲವುಕೆ ನೆನಪೇ ಇರ್ದುಲೆ.. ಮಕ್ಕ ಕರಿಯಕನ ಅವು ಇದ್ದಲ್ಲಿಗೆ ಯಾದೇ ದೇಸ ಇರ್ಲಿ ಹೋಕು. ಮಕ್ಕಳ ಏಳಿಗೆನೇ ಹೆತ್ತವುಕೆ ಬೇಕಾದ್ದ್ ತಾನೆ? ನಮ್ಮ ದೊಡ್ಡವ್ವ ಒಂದು ಮಂಜನ ಹಕ್ಕಲೆ ಅಮೆರಿಕಕ್ಕೆ ಹೋದ ಗಿರಾಕಿ ಆರು ಮೂರು ತಿಂಗಳ್ಲಿ ಊರಿಗೆ ಬಾತ್. ಅಲ್ಲಿ ನಂಗೆ ಸೆರಿಯೇ ಆದುಲ್ಲೆ. ಅಲ್ಲಿನ ಜನ ಯಾರೋ, ಬಾಸೆ ಎಂತದೊ, ಉಂಬೋದು ತಿಂಬೋದು ಏನೋ ಎಲ್ಲಾಂತ ನಮ್ಮೂರ್‌ಲಿ ಒಂಟಿಯಾದರೂ ಇರ್ವೆ. ಹೇಂಗಾದರೂ ಆದೆಂತ ಬಂದೇ ಬುಟ್ಟುತ್. ಊರಿಗೆ ಬಂದರೆ ಯಾರ್ ಮೂಸುವೆ. ದುಡ್ಡ್ ಇರ್‌ಕನ ಮುಟ್ಟ ನಾ ಒಳೆ. ಹಂಗೆ ಮಾಡ್ನೆ ಹಿಂಗೆ ಮಾಡ್ನೇಂತ ಅಜ್ಜಿನ ಕೆಬಿಕುತ್ತ ಮಾಡ್ಸಿ, ಮತ್ತೆ ಬೀದಿಗೆ ನೂಕಿದೊ. ಎಂತಾದರೂ ಪ್ರಾಯ ಆದ ಮೇಲೆ ಮಕ್ಕಳೊಟ್ಟಿಗೆ ಹೊಂದಿಕಣಕು. ನಮ್ಮ ಆಸೆ ಆಕಾಂಕ್ಷೆಗಳ ಹಂಞಾ ಬುಟ್ಟ್ ಮಕ್ಕಳ ಶ್ರೇಯಸ್ಸೇ ಮುಖ್ಯಂತ ಇರೊಕು. "ಆತ ಮಾರಾಯ್ತೀ ನಿನ್ನ ಪೇಕ್‌ಗಂತ ಗಂಡ ಕೇಳ್ಕನೇ ಕಾವೇರಮ್ಮ ಈ ಲೋಕಕೆ ಬಂದದ್. "ನಿಂಗೆ ಸ್ಪೆಷಲ್ ಬಸ್ಸೇ ಬುಕ್ ಮಾಡೊಕು ಕಂಡದೆ! ಅಸ್ಟ್ ಲಗೇಜೂ ಉಟ್ಟು!? ಹೋದಂವ ಅಲ್ಲೇ

ಪರ್ಮನೆಂಟಾಗಿ ಮಂಜನ ಮನೇಲಿ ಠಿಕಾಣಿ ಹೂಡುವ ಯೋಚನೆನೊ ಹೆಂಗೇಂತ" ಗಂಡ ತಮಾಸೆ ಮಾಡ್ರೂ ಕೆಬಿಗೆ ಹೋತ್ಲೆ.

'ಅಲ್ಲಾ. ಈ ಸತ್ತಿ ಮಂಜ ಇಸ್ಟ್ ಒತ್ತಾಯಲಿ ನೀ ಒಬ್ಬಾರ್ ಬಾ ಅಮ್ಮಾಂತ ಒತ್ತಾಯ ಮಾಡ್ದ್ ಯಾಕೆ? ಒಂದೂ ಅಂದಾಜೆ ಆದುಲ್ಲೆ. ಅಮ್ಮಾ, ನಂಗೆ ಕೆಲ್ಸ ಸಿಕ್ಕಿದ ಕೂಡ್ಲೆ ನನ್ನ ಸಂಬಳಲಿ ನಿಂಗೆ 'ಜೋಮಾಲೆ' ಮಾಡ್ಸಿ ಕೊಟ್ಟನೇಂತ ಹೇಳಿತ್ತ್. ಬಹುಸ ಅಮ್ಮಂಗೆ ಈ ಸರ್ತಿ ಅದರ ಮಾಡ್ಸಿಕೊಡಿಕೆ ಒತ್ತಾಯ ಮಾಡಿ ಕರ್ದದ್ ಆಗಿರೊಕು. ಪಾಪ. ಓದಿದ ಕೂಡ್ಲೆ ಕೆಲ್ಸ ಸಿಕ್ಕಿರೂ ಬೇಂಕ್‌ಲಿ ಓದಿಕೆ ಮಾಡ್ದ ಲೋನ್‌ನ ಕಟ್ಟಿಕೆ ಆತ್. ಮತ್ತೆ ನಾವೇ ಅವನ ಒತ್ತಾಯ ಮಾಡಿ ಮೊದುವೆನೂ ಮಾಡ್ಸಿದೊ. ಸಂಸಾರ ಸುರು ಆತ್. ವರ್ಸ ಆಕನೆ ಕೂಸೂನು ಹುಟ್ಟಿತ್. ಮತ್ತೆ ಹೇಂಗೆ ಅಂವ ನಂಗೆ 'ಜೋಮಾಲೆ' ಮಾಡ್ಸುದು?'

ಹೌದು. ಕಾವೇರಮ್ಮಂಗೆ ಆ ಜೋಮಾಲೆಂತ ಹೇಳ್ರೆ ಎಲ್ಲಿಲ್ಲದೆ ಕುಸಿ! ಅಪ್ಪ ಮೊದುವೆಗಾಕನ ಪ್ರೀತಿಂದ ಮಾಡ್ಸಿಕೊಟ್ಟ ಜೋಮಾಲೆ ಅದ್. ತೆಳ್ಳಂಗೆ ಬೆಳ್ಳಂಗೆ ಉರುಟುರುಟು ಮೋರೆನ ಮುಗುಳು ನೆಗೆನ ಕಾವೇರಮ್ಮ ಆ ಜೋಮಾಲೆ ಹಾಕ್‌ಕನ ದೊಡ್ಡ ರಂಬೆನಾಂಗೆ ಕಾಂತಿತ್ತ್. ಅದರ ಹಾಕಂಡ್ ಯಾರ್ದಾರ್ ಮೊದುವೆಗೊ, ಎಂಗೆಜ್ಮೆಂಟಿಗೊ ಹೋದರೆ ಜನ ಎಲ್ಲಾ ತಿರ್ಗಿ ತಿರ್ಗಿ ಕಾವೇರಮ್ಮನೇ ನೋಡ್‌ತಿದ್ದೊ. ಹೆಂಗ್ಸಗ ಬಂದ್ ಮುಟ್ಟಿ ಮುಟ್ಟಿ ನೋಡಿ ಬಾರಿ ಲಾಯಿಕ್ ಉಟ್ಟೊಂತ ಹೇಳ್ಕನ ಕಾವೇರಮ್ಮಂಗೆ ಕೊಂಬು ಮೂಡ್‌ತಿತ್ತ್. ಒಂದ್ ಗತ್ತ್ ಬಾತಿತ್ತ್. ಒಳ್ಳೆ ಹತ್ತ್ ಪವನ್‌ನ ಜೋಮಾಲೆನ ನೋಡ್ಕನ ಕಣ್ಣ್ ತುಂಬುದು. ಅದರ ಎಲ್ಲಿ ಮಾಡ್ಸಿದ್, ಎಸ್ಟ್ ಆತ್‌ಂತೆಲ್ಲಾ ಕೇಳ್ಕನ ಕುಸಿಯೋ ಕುಸಿ. ಹಕ್ಕಲೆ ಸಂಬಂಧದ ಮೊದುವೆಲಿ ಮೊದೊಳಿಗೆಗೆ ಹಾಕಿಕೂ ಕೊಡುತಿದ್ದೊ ಕಾವೇರಮ್ಮ. ಕೆಲವೊಮ್ಮೆ ಈ ನಗ ಆಪತ್ತಿಗೂ ಆತಿತ್ತ್. ಬೋಪಯ್ಯನವುಕೆ ಹಾರ್ಟ್ ಆಪರ್ಸನ್ ಆಕನ, ಅವರ ತಂಗೆನ ಮೊದುವೆ ಸಮೆಲಿ, ಮನೆ ಕಟ್ಟ್‌ಕನ, ಎಲ್ಲಾ ಜೋಮಾಲೆನ ಅಡು ಇಸಿ ದುಡ್ಡು ತಕಂದೂ ಉಟ್ಟು.

'ಆಪತ್ತಿಗೆ ಇಲ್ಲದ ನಗ ಎಂತಕೇಂತ ಕಾವೇರಮ್ಮ ಹಿಂದೆ ನೋಡದೆ ಕೊಡ್‌ತಿದ್ದೊ. ಅಕೇರಿಗೆ ಮಂಜ ಜಗ್ಗ ಇಂಜಿನಿಯರಿಂಗ್ ಕಲಿಯಕನ ದುಡ್ಡು ಹೊಂದಿಸಿಕೆ ಏನ್ ಮಾಡ್ರೂ ಆಗದೆ ಮಾರಿಕಾಗಿನೇ ಬಾತ್. ಇದ್ದ ಒಬ್ಬ ಮಂಜನ ಇಂಜಿನಿಯರಿಂಗ್ ಮಾಡ್ಸೊಕೂಂತ ಅಯ್ಯೆ ಅಪ್ಪ ಪಟ್ಟ ಪಾಡ್ ಅಸ್ಟಿಸ್ಟಲ್ಲ. ಹಾಂಗೂ ಹೀಂಗೂ ಓದಿ ಆದ ಕೂಡ್ಲೆ ಹೆಚ್. ಪಿ. ಕಂಪೆನಿಲಿ ಒಳ್ಳೆ

ಸಂಬಳದ ಕೆಲ್ಸನೂ ಸಿಕ್ಕಿತ್. ಆಗ ನಾವು ಪಟ್ಟ ಪಾಡ್ ಸಾರ್ಥಕ ಆತ್'ಂತ ಗ್ರೇಸಿಕಂಡೊ. ಹೊತಾರೆ ಆರ್ ಗಂಟೆಗೆ ಮೆಜೆಸ್ಟಿಕ್‌ಲಿ ಬಸ್ ಇಳಿಯಕನ ಮಂಜ ಜಗ್ಗ ಕಾರ್ ತಕಂಡ್ ರೆಡಿ. ಅಲ್ಲಿಂದ ಮಂಜನ ಮನೆ–ವಿದ್ಯಾರಣ್ಯಪುರಕ್ಕೆ ಕಾರ್‌ಲಿ ಅರ್ಧಗಂಟೆನೂ ಇಲ್ಲೆ. ಮನೆ ಬಂದೇ ಬುಟ್ಟತ್. ಸೊಸೆ ಹೆತ್ತ್ ಬಾಣಂತನನ ಮುಗ್ಸಿ ಎರ್ಡ್ ತಿಂಗಳ್ಳಿ ಬೆಂಗಳೂರಿಗೆ ಹೊರ್ಡ್'ಕನ ಕೂಸು ಅನಘ ಸಣ್ಣ ಬೊಮ್ಮಟೆ. ಈಗ ಅವಂಗೆ ವರ್ಸ ಆಕಂಡ್ ಬಾತ್. ಈಗಳೆ ಲೂಟಿಂತೇಳ್ರೆ ಲೂಟಿ, ಪುಂಡು ಪೋಕ್ರ. ಅವ್ವನ ನೋಡಿ ಸುರುಗೆ ಹಂಞ ಅಮ್ಮನ ಹಿಂದೆ ಅಂಡ್'ಗಿಕೆ ನೋಡ್ದಂವ, ಮತ್ತೆ ಮೆಲ್ಲೆ ಮೆಲ್ಲೆ ಹಕ್ಕಲೆ ಬಂದ್ ಹೊಂದಿಕಂಡದ್ ಕಂಡ ಸೊಸೆಗೆ ಸಮಾಧಾನ!

ಬೆಂಗ್ಳೂರ್ಲಿ ಪ್ಲಾಟ್‌ನ ಮನೆ ನೋಡಿ ಕಾವೇರಮ್ಮಂಗೆ ಉಸ್ಸಪ್ಪಾಂತ ಉಸುರು ಬುಡುವಾಂಗೆ ಆತ್. ಮಂಜ ಹೊತಾರೆ ಎಂಟ್ ಗಂಟೆಗೆ ಆಪೀಸಿಗೆ ಹೋದರೆ ಬಾದು ರಾತ್ರೆ ಎಂಟುವರೆ ಒಂಬತ್ತ್ ಗಂಟೆಗೆ. ಕೆಲವು ದಿನ ತುಂಬಾ ಕೆಲ್ಸಾಂತ ಆರ್ ಗಂಟೆಗೆ ಏನೂ ತಿನ್ನದೆ ಹೋದು ಉಟ್ಟು.. ಕತ್ತಲೆಗೆ ಬಾಕನ ಅವನ ಮೋರೆ ನೋಡಿಕೆ ಬೊತ್ತ್! ಬೊಚ್ಚಿ ಸುಟ್ಟ ಬದನೆಕಾಯಿನಾಂಗೆ ಆಗಿದ್ದದೆ ಮೋರೆ ಕೈಕಾಲ್ ತೊಳ್ದ್ ಸೊಪಲಿ ಕುದ್'ಕಂಡ್ ಕೂಸುನ ಕೊಂಡಾಟ ಮಾಡಿಕಂಡ್ ಇರ್ಕನ ಏನೂ ಮಾತಾಡಿಕೆ ಮನ್ಸು ಬಾಲೆ. ಒಮ್ಮೊಮ್ಮೆ ಒಂದ್ ಹನಿಮನಿ ಟಿ.ವಿ. ನೋಡ್ರು ಆತ್. ವಾರಲಿ ಎರ್ಡ್ ದಿನ ರಜೆ ಏನೋ ಉಟ್ಟು. ಅಂದೂ ಅವಂಗೆ ಪುರುಸೊತ್ತ್ ಮನಿ ಉಟ್ಟೋ ಅದೂ ಇಲ್ಲೆ. ಬೆಂಗ್ಳೂರುನವುಕೆ ಬೊಳ್ಪಾದೇ ಹತ್ತ್ ಗಂಟೆಗೆ. ಕಾಫೀಗೀಪಿ ಕುಡ್ದ್ ಪೇಪರ್ ನೋಡಿಕೆ ಕುದ್ರಿಕನ ಸುರು ಆದೆ ಅವನ ದೋಸ್ತಿಗಳ, ಆಫೀಸ್'ನವರ ಫೋನ್. ಮತ್ತೆ ಕೆಲವು ವಾರ ಯಾರ್ಯಾರ್ದೋ ಮನೆಲಿ ಕಾರ್ಯಕ್ರಮ, ಬರ್ತಡೇ, ಮನೆಸೇರ್ದು, ಮೊದುವೆ, ಪೂಜೇಂತ! ರಜೆಲೂ ಲಾಯಿಕ್‌ಲಿ ಕುದ್'ಕಂಡ್ ಮಂಜನೊಟ್ಟಿಗೆ ಮಾತಾಡುವಾಂಗೆ ಇಲ್ಲೆ!?

ಇನ್ನು ಸೊಸೆಗೆ ಮಾತ್ ಕಮ್ಮಿ. ಮನೆಲೇ ಇದ್ದರೂ ಎಸ್ಟ್ ಬೇಕೋ ಅಸ್ಟೇ ಮಾತ್. ಅಡಿಗೆ ಕೆಲ್ಸಕ್ಕೆ ಸೇರ್ದು ಸೊಸೆಗೆ ಕುಸಿ ಇಲ್ಲೇಂತ ಹಂಞ ದಿನಲೇ ಗೊತ್ತಾತ್. ಸೊಸೆ ಎಂ.ಎಸ್ಸಿ. ಒಳ್ಳೆ ಕೆಲ್ಸಲೂ ಉಟ್ಟು. ಹೆರಿಗೆ ರಜೆ ಮಾಡ್ದ ಗಿರಾಕಿ ಇನ್ನೂ ಕೆಲ್ಸಕ್ಕೆ ಸೇರ್'ತ್ಲೆ. ಪಿಳ್ಳಿನೊಟ್ಟಿಗೆ ಆಡಿಕೆ, ಕರ್ಕಂಬಕೆ ಏನೂ ತೊಂದರೆ ಇಲ್ಲೆ. ಎಲ್ಯಾರ್ ತರಕಾರಿ ತಾಕೋ, ಇನ್ನ್ ಎಂತಾರ್ ಸಣ್ಣ ಕೆಲ್ಸಕೋ

ಹೊರಗೆ ಹೋಕನ ಪಿಳ್ಳಿನ ನನ್ನೊಟ್ಟಿಗೆ ಬುಟ್ಟ್ ಮನೆಗೆ ಬೀಗ ಹಾಕ್ಕಂಡ್ ಹೋದೆ. ಅಂತೂ ಬೆಂಗ್ಳೂರಿಗೆ ಬಂದ್ ಹಂಞಾ ದಿನಲೇ ಊರ್‌ನ ಮನೆ ನೆನ್ಪಾಕೆ ಸುರಾತ್. ಅಲ್ಲಿನ ದನಕರ್‌ಗ್, ಹಂದಿ ಕೋಳಿಗ, ಗಂಡ ಏನ್ ಮಾಡುವೆನೋಂತ ಗ್ರೇಸಿಕೆ ಆತ್.

ಆ ದಿನ ಜಗ್ಗ ಏನೋ ಅಪೂರ್ಪಕ್ಕೆ ಆಫೀಸ್‌ಂದ ಹಂಞಾ ಬೇಗ ಬಾತ್. ಹಂಗೆ ಹಿಂಬೊತ್ತ್‌ನ ಕಾಪಿ ಕುಡ್ಕಂಡ್ ಇರ್ಕನ ಅಪ್ಪ ಯಾಗೊಳು ಬಿಜಿನಾ ಅಮ್ಮಾ, ರಾಜಕೀಯ, ಸಮಾಜದ ಕೆಲ್ಸಂತ ಸುತ್ತಿಕಂಡೇ ಇದ್ದವೆನಾಂತ ಕೇಳ್ತ್. ಹೌದು ಹಂಗೆನೇಂತ ಹೇಳಕ್ಕ್. ಅವುಕ್ಕೆ ಅದರ್ಲಿ ಸಂತೋಸ ಉಟ್ಟು. ಕುಸೀನ ಕೆಲ್ಸಂತ ಇರ್ಕನ ನಾ ಯಾಕೆ ಅಡ್ಡಿ ಮಾಡೊಕೂಂತ ಸುಮ್ಮನೆ ಒಳೇಂತ ಕಾವೇರಮ್ಮ ಹೇಳ್ದೊ.

'ಅಮ್ಮಾ.... ನಾ ನಿನ್ನೊಟ್ಟಿಗೆ ಹಂಞಾ ಮಾತಾಡಿಕೆ ಉಟ್ಟುಂತೇಳಿಯೆ ನಿನ್ನ ಬಾಕೆ ಒತ್ತಾಯ ಮಾಡ್ದ್. ಈಗ ಕೂಸು ಅನಘ ಮೊಲೆ ತಿಂಬೊದು ಬುಟ್ಟುಟ್ಟು. ನಿನ್ನ ಸೊಸೆನ ಕೆಲ್ಸಕ್ಕೆ ಕರಿತಾ ಒಳೊ. ಇನ್ನ್ ಹೆಚ್ಚ್ ದಿನ ರಜೆ ಕೊಡಿಕೆ ಆಲೆ. ಕೆಲ್ಸ ಬೇಕರೆ ಬೇಗ ಕೆಲ್ಸಕ್ಕೆ ಬರೊಕು. ಇಲ್ಲರೆ ಬೇರೆ ಜನ ತಕಂಡವೇಂತ ಹೇಳ್ತಾ ಒಳೊ. ಅದ್ ಹೆರಿಗೆ ರಜೆ ಮಾಡಿ ವರ್ಸ ಆತಲ. ಇನ್ನ್ ಎಸ್ಟ್ ರಜೆ ಕೊಟ್ಟವೆ. ಒಳ್ಳೆ ಕೆಲ್ಸ್, ಇಪ್ಪತ್ತೈದ್ ಮೂವತ್ತು ಸಾವಿರ ಸಂಬಳ ಉಟ್ಟು. ಈ ಬೆಂಗ್ಳೂರ್‌ಲಿ ಜೀವನ ಮಾಡ್ದು ಎಸ್ಟ್ ಕಸ್ಟ ಗೊತ್ತುಟಾ? ದುಡ್ಡು ಇಲ್ಲದೆ ಯಾವ ಕೆಲ್ಸನೂ ಆಲೆ. ಒಣಗಿದ ಬಜೆಂಟಿಗೂ ದುಡ್ಡು ಕೊಡೊಕು. ಮುಂದೆ ಕೂಸುನ ಓದ್ಸೋಕು. ನರ್ಸರಿಗೆ ಲಕ್ಷಗಟ್ಲೆ ಫೀಸ್ ಆದೆ. ಒಬ್ಬನ ಸಂಬಳಲಿ ಇಲ್ಲಿ ಬೊದ್‌ಕಿಕೇ ಬೊತ್ತ್. ನಿನ್ನ ಸೊಸೆನ ಕೆಲ್ಸಕ್ಕೆ ಕಳ್ಸದೆ ಬೇರೆ ದಾರಿ ಇಲ್ಲೆ. ಏನ್ ಮಾಡ್ದೂಂತ ಮಂಡೆ ಬೆಚ್ಚ ಸುರಾಗುಟ್ಟು. ನೀ ಏನ್ ಹೇಳಿಯಮ್ಮಾ'ಂತ ಕೇಳ್ತ್.

'ಹೂಂ. ನೀ ಹೇಳ್ದನೋ ಸೆರಿಯೇ. ಇಲ್ಲಿ ಒಣಗಿದ ದರ್ಗಿಗೂ ದುಡ್ಡು ಕೊಡದೆ ಸಿಕ್ಕುಲೆ. ಬೆಂಗ್ಳೂರುಲಿ ಇರ್ದೂಂತ ಊರ್‌ಲಿ ಇದ್ದವುಕೆ ಹೇಳಿಕೆ ಲಾಯಕ್. ಇಲ್ಲಿ ಇದ್ದವರ ಕಸ್ಟ ಅವುಕೆ ಗೊತ್ತು. ದುಡ್ಡು ಎಸ್ಟಿದ್ದರೂ ಸಾಲ್ದ್'!

'ಅದೇ ಅಮ್ಮ ಇರ್ದು. ನಿನ್ನ ಸೊಸೆನ ಕೆಲ್ಸಕ್ಕೆ ಕಳ್ಸೊಕು ತಾನೇ. ಮನೇಲಿ ಕೂಸುನ ನೋಡಿಕಂಬವು ಆಕು. ಕೂಸುನ ನೋಡಿಕಂಬ ಅಜ್ಜಿಕಳೋ, ಗೂಡೆಗಳೋ ಸಿಕ್ಕುದು ಕಸ್ಟ. ಇಲ್ಲಿ 'ಡೇ ಕೇರ್' ಅಂತ ಮಕ್ಕಳ ಹಾಕಂಬ ಜಾಗೆಗ ಏನೋ ಒಳೊ. ಆದರೆ ಅಲ್ಲಿ ಮೆನಿ ಹಾಕಿರೆ ಕೂಸುನ ಹೇಂಗೆ

ನೋಡಿಕಂಡವೇಂತ ಏನ್ ಗೊತ್ತು. ಹಾಲ್‌ಲಿ ನಿದ್ರೆ ಮೊದ್ದು ಹಾಕಿ ಮಕ್ಕಳ ಮಲಗ್ಸಿ, ಅವು ಅವರ ಕೆಲ್ಸ ಮಾಡಿಕಂಡ್ ಇದ್ದವೇತನೂ ಹೇಳುವೆ. ಈಗನ ಕಾಲಲಿ ಯಾರ್ನ ನಂಬುದು ಹೇಳಿ. ಅದಕ್ಕೆ ಅನಘ ದೊಡ್ಡಂವ ಆಕನ ಮುಟ್ಟಿ ನಿಂಗೆ ಇಲ್ಲಿ ಇರಿಕೆ ಆದೊ? ಅಪ್ಪ ಹೇಂಗೂ ರಾಜಕೀಯ, ಸಮಾಜ ಸೇವೇಂತ ಸುತ್ತಿಕಂಡೇ ಇದ್ದವೇಂತ ಹೇಳ್ಕನ ವಾಕ್..... ಕ್.... ಕ್.... ಕುಡ್ಕಂಡ್ ಇದ್ದ ಚಾ ಸೆರೆ ಹತ್ತಿ ಕಣ್ಣ್‌ಲಿ ನೀರ್ ಬಾತ್ ಕಾವೇರಮ್ಮಂಗೆ. ತಟ ಪಟಾಂತ ನೆತ್ತಿಗೆ ಹೊಡ್ಕಂಡ್ ವಾಶ್ ಬೇಸಿನಿನ ಹಕ್ಕಲೆ ಹೋಗಿ ಮೋರೆ, ಕಣ್ಣ್ ಎಲ್ಲಾ ತೊಳ್ದ್ ಬಂದರೂ ಹಂಞ ಸೆರಿ ಆದಾಂಗೆ ಆದರೂ ಕಣ್ಣ್‌ಲಿ ಮೂಕುಲಿ ನೀರ್ ಅರ್ಕಂಡೇ ಇತ್ತ್. ಅಸ್ಟ್ ಹೊತ್ತಿಗೆ ಕೂಸ್‌ನ ಮೀಸಿಕಂಡ್ ಬಂದ ಸೊಸೆ ಗಂಡನ ಕರ್ದ್ ಏನೋ ಕೆಲ್ಸ ಹೇಳ್ತ್‌ಕಂಡದೆ ಇಬ್ರೊರು ಕುಸುಕುಸು ಮಾತಾಡಿಕಂಡ್ ಇದ್ದೊ.

ಮರ್ದಿನ ಹೊತಾರೆ ಎದ್ದ ಕಾವೇರಮ್ಮ ಏನ್ ಮಂಜಂಗೆ ಉತ್ತರ ಹೇಳ್ದು. ಅತ್ತ ಉಗಿಯಕೂ ಅಲ್ಲ ಇತ್ತ ನುಂಗಿಕೂ ಅಲ್ಲದ ಉಭಯ ಸಂಕಟ. ಊರ್ನ ಮನೆ ಮಾರ್, ತೋಟ ತೊಡಿಗೆ ದನಕರುಗಳ ಎಲ್ಲಾ ಬುಟ್ಟ್ ನಾ ಪೇಟೆಲಿ ಇದ್ದರೆ ಅಲ್ಲಿ ಹೇಂಗಾದು? ಈ ಪ್ರಾಯಲಿ ಗಂಡನ ಒಬ್ಬನೇ ಬುಟ್ಟ್ ಇರ್‌ದು ಸೆರಿನೋ ಧರ್ಮನೊಂತ ಪೇಚಾಡಿಕಂಡ್ ಇದ್ದೊ. ಅಸ್ಟೊತ್ತಿಗೆ ಮಂಜಂಗೆ ಫೋನ್ ಬಾತ್. ಆಚೆಮನೆ ಕಾರ್ಯಪ್ಪ ಫೋನ್ ಮಾಡ್ದಾಂಗೆ ಇತ್ತ್. ಕಾರ್ಯಪ್ಪ ಜಗ್ಗಂಗೆ ನಿನ್ನ ಅಪ್ಪ ನಿನ್ನೆ ರಾತ್ರೆ ಸ್ಕೂಟರ್ಲಿ ಬಾಕನ ಸಡನ್ ಲಾರಿ ಅಡ್ಡ ಬಂದರ್‌ಂದ ತಪ್ಸಿಕೆ ಚರಂಡಿಗೆ ಇಳ್ಸಿ ಬಿದ್ದ್ ಕಾಲ್ ಪ್ರ್ಯಾಕ್ಚರ್ ಆಗುಟ್ಟು. ಆಸ್ಪತ್ರೆಗೆ ಸೇರ್ಸಿ ಆಗುಟ್ಟು. ಒಂದು ವಾರ ಆಸ್ಪತ್ರೆಲಿ ಇರೊಕಾದೂಂತ ಡಾಕ್ಟ್ರ ಹೇಳುವೆ. ಮನೆಗೆ ಬಂದರೂ ಒಂದೆರೆಡ್ ತಿಂಗ ರೆಸ್ಟ್ ಬೇಕಾದುಗಡಂತ ಹೇಳ್ದರ ಕೇಳಿ ಮಂಜನ ಮೋರೆ ಚಪ್ಪೆ ಆತ್. ಅರ್ಧಂಬರ್ಧ ಕೇಳಿಕಂಡ್ ಇದ್ದ ಕಾವೇರಮ್ಮಂಗೆ ಮಂಜ ಎಲ್ಲಾ ಹೇಳ್ತ್. ವಿಸಯ ಗೊತ್ತಾಗಿ ಕಾವೇರಮ್ಮ ಕಣ್ಣೀರ್ ಸುರ್ಸಿಕಂಡ್, ಸಿಕ್ಕಿದ ಬಟ್ಟೆ ಬರೆ ಚೀಲಕ್ಕೆ ತುರ್ಕಿಕಂಡ್ ಗಡಿಬಿಡಿಲಿ ಬಸ್ ಹತ್ತಿದೊ.

* * * * *

## ಕರಿಕೂಟ ಕತ್ತಲೆಲಿ ಮಿಂಚಿದ ಮಿಂಚ್

ಒಂದು ಕಾರ್ಡಿಗೆ 25 ಕೆ.ಜಿ. ಅಕ್ಕಿ ಸಿಕ್ಕಿದೇಂತ ತಕಣಿಕೆ ಉರ್‌ಡಪತ್ತ ಮಾಡಿಕಂಡ್ ಕ್ಯೂ ನಿಂತ ಜನಗಳ ಹಾಂಗೆ ಎಲ್ಲಾ ಶಾಲೆ ಮಕ್ಕ ಕ್ಯೂ ನಿತ್‌ಕಂಡ್ ಬಂದ್ ಮುತ್ತಮ್ಮ ಟೀಚರ್‌ನ ಕಾಲ್ ಹಿಡಿತಾ ಒಳೊ. ಗೂಡೆಗಳ ಕಣ್ಣ್‌ಂದ ಮಡಿಕೇರಿನ ಮಂಜಿನ ಹಾಂಗೆ ಹನಿ ಹನಿ ಕಣ್ಣೀರ್ ಸುರಿತಾ ಉಟ್ಟು. ಹೈದಂಗಳ ಮೋರೆನೂ ಚಪ್ಪೆ ಆಗುಟ್ಟು. ಪೊಟೋ ಹಿಡಿಯಂವ ಬೇರೆ ಬೇರೆ ಪೋಸ್‌ಲಿ ರಿಟೇರ್ ಆದ ಟೀಚರ್‌ನ ಪೊಟೋ ತೆಗಿತಾ ಉಟ್ಟು. 'ಇನ್ನು ಕೆಲವೇ ನಿಮಿಷಗಳಲ್ಲಿ ನಿವೃತ್ತರ ಸನ್ಮಾನ ಕಾರ್ಯಕ್ರಮ ಆರಂಭವಾಗಲಿದೆ' ಂತ ನಿರೂಪಕ ಹೇಳ್ತಾ ಉಟ್ಟು. ಹಾಂಗೂ ಹೀಂಗೂ ಮುತ್ತಮ್ಮ ಟೀಚರ್‌ನ ಬೀಳ್ಕೊಡುಗೆ ಮತ್ತೆ ಸಂಮಾನ ಜಂಬರ ಸುರು ಆತ್. ಬ್ರಿಗೇಡಿಯರ್ ಬಿದ್ದಪ್ಪನವರ ಅಧ್ಯಕ್ಷತೆಲಿ, ಕರ್ನಲ್ ಮುತ್ತಣ್ಣನವು ಮುತ್ತಮ್ಮ ಟೀಚರ್‌ಗೆ ಸಾಲ್ ಹೋಸಿ, ಫಲ ತಾಂಬೂಲ ಕೊಟ್ಟ್, ಚಿನ್ನದ ಉಂಗುರನ ನೆನ್‌ಪುನ ಕಾಣಿಕೇಂತ ಕೊಟ್ಟೊ. ಶಾಲಾ ಮಕ್ಕ, ಮಾಸ್ಟ್ರ, ಟೀಚರ್‌ಗ, ಎಸ್.ಡಿ.ಎಂ.ಸಿ. ಕಡೇಂದ, ಶಾಲೆನ ಹಳೆ ವಿದ್ಯಾರ್ಥಿ ಸಂಘಂದ, ಊರ ಸಂಘ ಸಂಸ್ಥೆಗಳ್‌ಂದೆಲ್ಲಾ ಬೇರೆ ಬೇರೆ ರೀತಿನ ನೆನ್‌ಪ್‌ನ

ಕಾಣಿಕೆಗಳ ಪಡ್ದ್, ಗುಣಗಾನದ ಮಾತ್‌ಗಳ ಕೇಳಿ 'ನಾ ಟೀಚರ್ ಆದ್ದ್ ಇಂದಿಗೆ ಸಾರ್ಥಕ ಆತ್'ಂತ ನೆನ್‌ಸಿಕಂಡ ಟೀಚರ್ ಮನ್‌ಸ್ ತುಂಬಿ, ಮಾತ್ ಕಮ್ಮಿ ಆತ್.

'ಬೆಳಗಿ ಬಾಳಲಿ ನಮ್ಮ ಹಳ್ಳಿಯೂರಿನ ಶಾಲೆ'ಂತ ಹೇಳ್ವ, ತಾನೇ ಬರ್ದ ಶಾಲಾ ಗೀತೆಂದ ಮಾತ್ ಸುರು ಮಾಡ್ದದ ಟೀಚರ್, 'ಏನಾನುಂ ಮಾಡು ಕೈಗೆ ದೊರೆತುಜ್ಜುಗವ ನಾನೇನು ಹುಲ್ಲುಕಡ್ಡಿಯೆಂಬ ನುಡಿಬೇಡ'ಂತ ಹೇಳ್ವ ಮಂಕುತಿಮ್ಮನ ಕಗ್ಗದ ನುಡಿಂದ ಮಾತ್ ಮುಗ್‌ಸಿ, ಕಣ್ಣೀರ್ ತುಂಬಿಕಂಡ್ ಕುದ್ದುಬುಟ್ಟೊ.

ಮೂವತ್ತೈದ್ ವರ್ಸಗಳ ಸುದೀರ್ಘ ಟೀಚರ್ ಕೆಲ್ಸದ ಒಂದು ದೊಡ್ಡ ಅಧ್ಯಾಯನೇ ಮುಗ್ಸಿದ ತೃಪ್ತಿಂದ, ತಮ್ಮ ಬದ್‌ಲಿಗೆ ಸೋಮಾರ್‌ಪೇಟೆಂದ ಬಡ್ತಿ ಹೊಂದಿ ಬಾವ ಹೊಸ ಟೀಚರ್‌ನ ಕಾದ್‌ಕಂಡ್ ಇರ್‌ಕನ 'ನಮಸ್ತೇ ಮೇಡಂ' ಂತ ಹೇಳ್ವ ಸ್ವರ ಕೇಳಿ ತಲೆ ಎತ್ತಿದ ಟೀಚರ್‌ಗೆ 'ನಾನು ನಿಮ್ಮ ವಿದ್ಯಾರ್ಥಿ ಸುಚರಿತ'ಂತ ಹೇಳಿ ಕಾಲ್ ಹಿಡ್ದ ಗೂಡೆನ ಪ್ರೀತಿಂದ ಎರಡ್ ಕೈಲಿ ತೊಬ್ಬಿಕಂಡ್ ಆಕೆರಿಗೂ ಅವ್ವನ ಆಸೆ ಈಡೇರ್ತ್, ಜೀವನ ಸಾರ್ಥಕ ಆತ್. ಹೊಟ್ಟೆ ಬಾಯಿ ಕಟ್ಟಿ, ಮಗಳ ಓದ್‌ಸಿಕೆ ಪಟ್ಟ ಪಾಡ್‌ಂದ ಇಂದ್ ಮಗಳ ಜೀವನ ಬೆಳ್‌ಗಿತ್‌ಂತ ಗ್ರೇಸಿಕಂಡ್ ಮುತ್ತಮ್ಮ ಟೀಚರ್‌ಗೆ ಕುಸಿ ಆತ್. ಮನ್ಸ್ ಮಾಡಿರೆ ಏನೂ ಸಾದ್‌ಸಕ್. ಸುಟ್ಟು ತಿಂಬಕೆ ನಾಲ್‌ಕ್ ಅಕ್ಷರ ಇಲ್ಲರೂ ತನ್ನ ಬಾಳ್‌ನ ಕೊಡಿನ ಒಂದು ದಾರಿಗೆ ತರೊಕೂಂತೇಳ್ವ ಗುರಿ, ಹಠ ಇದ್ದರೆ ಏನೂ ಸಾದ್‌ಸಕ್, ಕರಿಕೂಟ ಕತ್ತಲೆಲೂ ಮಿಂಚ್ ಮಿಂಚ್‌ದೂಂತೇಳ್ವ ಗ್ರೇಕೆಲಿ ಇದ್ದ ಮುತ್ತಮ್ಮ ಟೀಚರ್‌ನ ಮನಸ್ ಸುಮಾರ್ ಹದ್‌ನೈದ್ ವರ್ಸಗಳ ಹಿಂದೆ ಓಡ್ತ್.

ಹರ್‌ಕಟ್ ಸೀರೆ, ಅಡೆ ಹಾಕಿದ ರೌಕೆ ಹಾಕಿ, ಕೋಲ್‌ಕಡ್ಡಿನಾಂಗಿರುವ ಹೆಂಗ್ಸೊಂದು ಬಾದು ಕಂಡತ್. ತನ್ನ ಸಣ್‌ಕಲ್ ಕೈಲಿ ತನ್ನ ಕರ್‌ಳ್ ಕೊಡಿನ ಗಟ್ಟಿಲಿ ಹಿಡ್‌ಕಂಡ್ ಇತ್ತ್. ಹಕ್ಕಹಕ್ಕಲೆ ಬಂದಾಂಗೆ ಮಸ್‌ಕ್ ಮಸ್‌ಕಾಗಿದ್ದ ರೂಪ ಸೆರಿಯಾಗಿ ಕಂಡತ್. ಗ್ರೀನ್‌ವ್ಯಾಲಿ ತೋಟಲಿ ಕೆಲ್ಸ ಮಾಡಿಕಂಡ್ ಇದ್ದ ಹಂಜ ಕೂಲಿಯಾಳ್‌ಗ ನನ್ನ ನೋಡಿ "ಎಂಕ್ಲೆ ಊರುತ ಟೀಚರ್"ಂತ ಪ್ರೀತಿ ಅಭಿಮಾನಂದ ಚೆನ್ನೆ ಕಾಯಿನ ಹಾಂಗಿರುವ ಹಲ್ಲ್‌ಗಳ ಬುಟ್ಟ್‌ಕಂಡ್ ನೆಗಾಡ್‌ತಿದ್ದವರಲ್ಲಿ ಇವಳ ಕಂಡ ನೆನ್ಪಾತ್. ಪೊರ್ಲಕಂಡೆ ಗೂಡೆ ಒಂದು ತನ್ನ ಎರಡ್ ಕೈಗಳ್‌ಂದ ಅವ್ವನ ಕೈನ ಗಟ್ಟಿಲಿ ಹಿಡ್‌ಕಂಡ್ ಪೆರ್ಚಿ ಕಟ್ಟಿದಾಂಗೆ ಅವ್ವನ ಮೋರೆನೇ ನೋಡ್‌ತ್ತಿತ್ತ್. ಸುರೆ ಹೂವುನಾಂಗೆ ಬೆಳ್ಳಂಗೆ ಇದ್ದ ಆ ಸಣ್ಣ

ಕೂಸು ನನ್ನ ನೋಡಿ ಮತ್ತಷ್ಟ್ ಬಿಳ್‌ಚಿಕಂಡತ್. 'ಟೀಚರಮ್ಮ ನಾ ಒಂದು ಬಡೆ, ನನ್ನ ಅರಸಿನಕೊಂಬುನಾಂಗೆ ಇರುವ ಒಂದೇ ಒಂದು ಕೂಸು ಇದ್. ಇದರ ಸಾಲೆಗೆ ಸೇರ್‌ಸೊಕೂಂತ ಕರ್‌ಕಂಡ್ ಬಂದೊಳೆ'ಂತ ಏನೇನೋ ಬಡಬಡ ಹೇಳಿಕಂಡ್, ತನ್ನ ಹರ್ಕಟೆ ಸೀರೆ ಸೆರ್‌ಂಗ್‌ಂದ ಕಣ್ಣೀರ್ ಪೂಜಿಕಂಡ್ ತನ್ನ ಬೊದುಕ್‌ನ ಹಾಲಾವಲೆಗಳ ಹೇಳಿಕಂಡೇ ಇತ್ತ್. ದಾಖಲಾತಿ ಅರ್ಜಿ ತಕಂಡ್ ಅದರ್ಲಿ ಬರಿಯಕೆ ಮಗಳ ಹೆಸ್‌ರೆಂತ ಕೇಳ್ರೆ 'ಸುಸೀಲಾ'ಂತ ಹೇಳ್ತ್. 'ಆ ಹಳೇ ಹೆಸ್ರ್ ಯಾಕೆ ನಿಮ್ಮ ಮಗಳಿಗೆ, ನಾವೊಂದು ಒಳ್ಳ ಹೆಸರ್ ಹೇಳಕಾ'ಂತ ಕೇಳ್‌ಕನ ಆ ಅವ್ವ 'ಎಲ್ಲಾ ನೀವು ಹೇಳ್ದಾಂಗೆ ಅವಳ ನಿಮ್ಮ ಮಡ್ಲ್‌ಗೆ ಹಾಕಿಕೆ ಕರ್‌ಕಂಡ್ ಬಂದೊಳೆ, ನಿಮ್ಮ ಮಗಳೇಂತ ತಿಳ್‌ಕಂಡ್ ಒಳ್ಳ ಇದ್ಯೆ ಬುದ್ಧಿ ಕಲ್ಸಿ'ಂತ ಹೇಳ್ತ್. ಇಂದ್‌ಂದ ನಿಮ್ಮ ಮಗ 'ಸುಚರಿತ'ಂತ ಹೇಳ್ಕನ ಅಕ್ಕಕ್ಕ್‌ಂತ ಪೆದ್ದ್ ಪೆದ್ದ್ ನೆಗಾಡಿ ತಲೆ ಆಡ್ಸಿತ್. 'ಸುಶೀಲ' ಇವಳ ಬಾಯ್ಲಿ 'ಸುಸೀಲ' ಆಗುಟ್ಟು. 'ಸುಚರಿತ' ಇನ್ನೇನಾದೊಂತ ಗ್ರೇಸಿಕಂಡ್ ಹುಟ್ಟಿದ ತಾರೀಕ್, ಊರು, ಅಪ್ಪ ಅವ್ವನ ಹೆಸ್ರ್‌ಗಳ ಎಲ್ಲಾ ಕೇಳಿ ಅರ್ಜಿನ ತುಂಬಿಸಿದೊ ಮುತ್ತಮ್ಮ ಟೀಚರ್.

ಪ್ರಾಯ ಆಕೆ ಮುಂದೆ ಮೊದುವೆ ಆದ ಸೀತು ಕಷ್ಟಗಳ ಸರಮಾಲೆಗಳ್ನೇ ಎದ್‌ರ್‌ಸೊಕಾತ್. ಹೆಂಡ ಕುಡಿ, ಇಸ್ಪೀಟ್ ಆಟಗಳೇ ತಾನ್ ಮಾಡೊಕಾದ ದೊಡ್ಡ ಕೆಲ್ಸಾಂತ ತಿಳ್‌ಕಂಡ ಗಂಡಾಂತ ಹೇಳುವ ಗಂಡಾಂತರನ ಮರ್ಯಾದಿಗೆ ಹೆದ್ರಿ ಸಹಿಸೊಕಾತ್. ನಡುರಾತ್ರಿಲಿ ಕುಡ್ದ್ ತೂರಾಡಿಕಂಡ್ ಬರುವ ಗಂಡ ತನ್ನ ತೆವ್‌ಲ್ ತೀರ್‌ಸಿಕೆ ಪ್ರಾಣಿಗಳಾಂಗೆ ಮೇಲೆ ಬಿದ್ದ್, ತೆವ್‌ಲ್ ತೀರ್ದ್ ಮೇಲೆ ಮರದ ಕುಂಟೆನಾಂಗೆ ಬಿಸ್‌ಲ್ ಪುಕುಳಿಗೆ ಬೊಡಿಯಕನ ಮುಟ್ಟ ನಿದ್ದೆ ಮಾಡ್ದು ಬುಟ್ಟರೆ ಅವಂದ್ ಮತ್ತನೇನು ಹರಿಯಕ್ಕಿಲೆ. ತೌರುಂದ ತಂದ ಚೂರ್‌ಪಾರ್ ಚಿನ್ನಗಿನ್ನ ಪಾತ್ರೆ ಪಗಡಿಯೆಲ್ಲಾ ಹೆಂಡದಂಗಡಿ ಸೇರ್ತ್. ಇದ್ದ ಅರ್ಧ ಎಕ್ರೆ ಜಾಗನೂ ಸಾಲಗಾರ್ರ ಪಾಲಾತ್. ಗೇಣುದ್ದ ಹೊಟ್ಟೆ ಹೊರೆಯಕೆ ಬೇರೆ ದಾರಿ ಇಲ್ಲದೆ ಹಕ್ಕಲೆ ಇದ್ದ ಗ್ರೀನ್ ವ್ಯಾಲಿ ತೋಟಕ್ಕೆ ಕೆಲ್ಸಕ್ಕೆ ಹೋಕೆ ಸುರು ಮಾಡ್ತ್ ಸೀತು. ಒಂದು ಹೆಣ್ಣ್ ಹೆಂಗ್ಸ್ ದುಡ್ದರ್‌ಂದ ಇಬ್ಬರ ಹೊಟ್ಟೆ ಬಟ್ಟೆಗೆ ಆಕು. ಹೊಟ್ಟೆಗೆ ಹಿಟ್ಟಿಲ್ಲರೂ ಗಂಡಂತೇಳುವ ಬಂಡ ಹೆಂಡ ಹೊಯ್ಕಂಬದರ ಬುಟ್ಟತ್ಲ್ಲೆ. ಯಾರ್ ಏನ್ ಹೇಳ್‌ರೂ ಕೊಳ್ವೆಗೆ ಹಾಕಿದ ನಾಯಿ ಬೀಲನಾಂಗೆ ಡೊಂಕು ಡೊಂಕೇ. ಈ ನಡುಲಿ ತಾಯಿ ಆನೇಂತೇಳುವ ಕುಸಿಲಿ ಇರ್ಕನ ಮೈಂದ

ಹೋತು. ಹೊತ್ತುಹೊತ್ತಿಗೆ ಸೆರಿಯಾಗಿ ಊಟ ವಿಶ್ರಾಂತಿ ಇಲ್ಲದೆ ಜೀವದ ಹಂಗ್ ತೊರ್ದ್ ಕತ್ತೆನಾಂಗೆ ದುಡ್‌ದರೆ ಗಬ್ಬ ಹೋಗದೆ ಇನ್ನೇನಾದು. ಗಂಡನ ಪ್ರೀತಿ, ವಿಶ್ವಾಸ ಬುಡಿ, ಹೊಡ್ತ, ಒದೆಗಳ್‌ಂದ ಸೀತು ಕೊರ್ಗಿ, ಕರ್ಗಿ ಕಡ್ಡಿನಾಂಗೆ ಆತ್. ಮೇಲ್‌ಂದ ಮೇಲೆ ಗಬ್ಬ ಹೋದು, ಹಾಂಗೂ ಹೀಂಗೂ ಮೊದುವೆ ಆಗಿ ಹನ್ನೆರ್ಡ್ ವರ್ಸಕ್ಕೆ ದುಃಖದ ಕರಿಕೂಟ ಕತ್ತಲೆ ಕಳ್ದ್ ಹುಟ್ಟಿದ ಈ ಹೆಣ್ಣ್ ಕೂಸು ಇದರ ಜೀವನಾಡಿ ಆತ್. ಕೂಸುನ ಅಡಿಲಿ ಇಸಿರೆ ಪಿಜಿನ್ ಹೊರ್ದು, ಮೇಲೆ ಇಸಿರೆ ಕಕ್ಕೆ ಕಚ್ಚಿಕಂಡ್ ಹೋದುಂತ ಹೇಳುವಾಂಗೆ ಬಾರಿ ಎಚ್ಚರಂದ ಮುಚ್ಚಟೆಂದ ಸಾಂಕಿತ್. ಮುಂದೆ ಯಾಗಾರ್ ತನ್ನ ಕರಿಕೂಟ ಕತ್ತಲೆಯ ಬೊದುಕ್‌ಲಿ ಮಿಂಚ್ ಮಿಂಚುದೂಂತ ಕನ್ಸ್‌ಕಾಂಬಕೆ ಸುರು ಮಾಡ್ತ್ ಸೀತು.

ಎರ್‌ಡೇ ತಿಂಗಳ ಹಸಿಕೂಸುನ ಕಾಪಿ ತೋಟಕ್ಕೆ ಕೆಲ್ಸಕ್ಕೆ ಹೋಕನ ತೆತ್ತಿಕಂಡ್ ಹೋಗಿ, ಕಾಪಿ ದೈನ ನೆರ್‌ಳ್‌ಲಿ ಹರ್ಕ್ ಕಂಬ್ಳಿಹಾಸಿ, ಕೂಸುನ ಮಲ್ಗ್‌ಸಿ ಕೆಲ್ಸ ಮಾಡ್‌ತ್ತಿತ್ತ್. ಕೆಲವು ಸತ್ತಿ ಕೂಸು ಮೊರ್‌ಟರೂ ಪೊಟ್ಟಿನಾಂಗೆ ಕೆಲ್ಸ ಮಾಡೊಕಾಗಿ ಬಾತಿತ್ತ್. ಮಧ್ಯಾಹ್ನ ಉಂಬ ಹೊತ್ತ್‌ಲಿ ಕೂಸುಗೆ ಮೊಲೆಕೊಟ್ಟ್ ಬಿದ್ದ ಕಿತ್ತುಳಿ ರಸನ ಬಾಯಿಗೆ ಹಿಂಡಿ ಹಾಂಗೂ ಹೀಂಗೂ ಬೆಳ್ಸಿದ್, ಆ ಕಸ್ಟ ಹೇಳಿಕೆ ಬೊತ್ತ್. ಒಮ್ಮ ಕೂಸುಗೆ ಜರ ಮತ್ತೆ ಬೇದಿ, ಊರ್‌ನ ಭಟ್ರ್ ಡಾಕ್ಟ್ರಲ್ಲಿಂದ ಮೊದ್ದು ತಂದ್ ಕುಡ್‌ಸಿರೆ ಕಮ್ಮಿ ಆತ್‌ಲೆ. ಕೆಲ್ಸಕ್ಕೆ ಹೋಗದೆ ಬೇರೆ ದಾರಿ ಇಲ್ಲೆ. ಹಾಂಗೆ ಕಾಪಿ ದೈನ ನೆರ್‌ಳ್‌ಲಿ ಮಲ್‌ಗ್‌ಸಿದ ಕೂಸುನ ಮೊರ್ಡ್ ಕೇಳದ ಇರ್ಕನ ಗಾಬ್ರಿಲಿ ಬಂದ್ ನೋಡ್ರೆ ಕೂಸುಗೆ ಇತ್ತನ ಸೊಯೆನೇ ಇಲ್ಲೆ, ಮೈಕೆಂಡದಾಂಗೆ ಉಟ್ಟು, ಅಂತ ಕೂಸುನ ಎದೆಗೆ ಅವುಚಿಕಂಡ್, ಸಿದ್ದಾಪುರ ಆಸ್ಪತ್ರೆಗೆ ಕೂಸುನ ಕರ್ಕಂಡ್ ಹೋಕು ನಂಗೆ ರಜೆ ಬೇಕೂಂತ ಕೇಳಿರೆ, ‘ಈ ಪ್ರಾಯಲಿ ನಿಂಗೆ ಕೂಸೊಂದು ಕೇಡ್, ಇಂದ್‌ನ ಕೆಲ್ಸ ಮುಗ್ಸಿ ಹೋಗು, ಇಲ್ಲರೆ ನಾಳೆಂದ ಈ ತೋಟಕ್ಕೆ ಕಾಲ್ ಇಸ್‌ಬಡಾಂತ ರೈಟರ್ ಕುಪ್ಪುಸ್ವಾಮಿ ಹೇಳ್ದರ ಕೇಳಿ, ಮನ್ಸ್ ಕೊದ್ದತ್. ಈಗನ ಕಾಲನೇ ಹೀಂಗೆ, ಹೆಣ್ಣ್‌ಮಕ್ಕಳ ಮೇಲೆ ಎಲ್ಲರ್‌ಂದನೂ ಒಂದಲ್ಲ ಒಂದು ರೀತಿನ ಶೋಷಣೆ. ತೋಟದ ಯಜಮಾನರ್‌ಂದ ಕೂಲಿಗಳ ಮೇಲೆ ದಬ್ಬಾಳಿಕೆ, ಪಾಳೆಗಾರರಂಗೆ ನಡ್‌ಕಂಬ ರೈಟರ್‌ಗ. ಮೊನ್ಸತ್ವವೇ ಇಲ್ಲದಾಂಗೆ ಇರುವ ಈ ಜನಂಗಳ ವೈವಾಟೇ ಬೇಡ. ಕೆರೆನೋ ಬಾಮಿನೋ ನೋಡಿಕಂಡರೆ ಯಾವ ರಗಳೆನೇ ಇರ್ದುಲೆಂತ ಗ್ರೇಸಿ, ಕೂಸುನ ದೇವ್ರ್ ಇಸಿದಾಂಗೆ ಆಗಲಿಂತ ಅಂಬೆರ್ಪುಲಿ ಸಿದ್ದಾಪುರಕ್ಕೆ ಹೋಗೇ

ಬುಟ್ಟತ್.

ದೇವ್ರು ದೊಡ್ಡಂವ, ಕೂಸು ಹುಷಾರಾತ್, ಕೂಸುನ ಮುದ್ದು ಮೋರೆನ ನೋಡ್ಕನ ಸಾಯುವ ಬದ್‌ಲ್, ಬೊದ್‌ಕುವ ಬೊದ್‌ಕಿ ಬಂದದ್ದೆಲ್ಲಾ ಎದ್‌ರ್‍ಸುವ ಕೈಂಪೆ ಹುಟ್ಟಿತ್. ಈ ಕೂಸಿಗಾಗಿ ನಾ ಬೊದ್‌ಕೊಕು. ಈ ಕೂಸುನ ಸಾಂಕಿ ದೊಡ್ಡದ್ ಮಾಡೊಕು, ಕೂಸಿಗೆ ಒಳ್ಳ ಓದು, ಬರ ಕಲ್ರೊಕು, ಸಕಾರಿ ಚಾಕ್ರಿಗೆ ಸೇರ್‍ರೊಕು. ನಾ ಸಾಯಕನಾದ್ರ್ ಸುಖ ನೆಮ್ಮದಿ ಕಾಣೊಕು. ಹೀಂಗೆ ಏನೆಲ್ಲಾ ಹಗ್‌ಲ್ ಕನ್ಸ್‌ಗಳ ಟೀಚರ್ ಮುಂದೆ ಹೇಳಿಕಂಡತ್ತ್ ಬಡೆ ಅಯ್ಯೆ ! ಎಲ್ಲನೂ ತಾಳ್ಮೆಂದ ಕೇಳಿಕಂಡ ಟೀಚರ್ ಅರ್ಜಿ ಪಾರ್ಮುನ ತುಂಬುಕನ ಮೇಲ್ ವರ್ಗದ ಜಾತಿಂತ ಗೊತ್ತಾಗಿ ಪಾಪದ ಕೂಸಿಗೆ ಸರ್ಕಾರದ ಸವಲತ್ತ್‌ಗ ಸಿಕ್ಕುದುಲ್ಲೆಲ್ಲಾಂತ ಪೇಚಾಡ್ರೊ. 'ಟೀಚರಮ್ಮ ನೀವು ಮಕ್ಕಳಿಗೆ ಪುಸ್ತಕ, ಬಟ್ಟೆ ಕೊಟ್ಟರೆಗಡ, ಮಧ್ಯಾಹ್ನ ಊಟನೂ ಉಟ್ಟುಗಡ, ಅದರ ನಂಬಿನೇ ನಾ ಕೂಸುನ ಇಲ್ಲಿಗೆ ಕರ್ಕಂಡ್ ಬಂದೆ. ಇದ್ ನನ್ನ ಮಗ ಅಲ್ಲ, ನಿಮ್ಮ ಮಗಳೇಂತನೇ ತಿಳ್‌ಕಣಿ, ನೀವು ದೇವ್ರ ಹಾಂಗೇಂತ ಟೀಚರ್‌ಗೆ ಉಸುರು ಬುಡಿಕೂ ಆಸ್ಪದ ಇಲ್ಲದಾಂಗೆ ತನ್ನ ಹಾಲಾವಲೆಗಳ ಹೇಳಿಕಂಡ್, ಮಾಸಿದ ಹತ್ತ್ ರುಪಾಯಿ ನೋಟ್‌ನ ಕೊಡಿಕೆ ಬಾತ್. ಅದರ ಅವಳ ಕೈಗೇ ದಾಟ್ಸಿ, ಅದರ ಸಾಗ ಹಾಕಿರೂ ಟೀಚರ ಮನ್ಸ್ ಮಾತ್ರ ವಿಚಿತ್ರ ಸುಳಿಲಿ ಸಿಕ್ಕಿ ಒದ್ದಾಡ್‌ತ್ತಾ ಇತ್ತ್.

ಜಾತ್ಯತೀತ ರಾಷ್ಟ್ರಂತ ಲೇಬಲ್ ಅಂಟಿಸಿಕಂಡ ಮೇಲೆ ಎಲ್ಲೆಲ್ಲಿನೋಡಿರೂ ಪ್ರೇತ ನೃತ್ಯ ಮಾಡುವ ಈ ಜಾತಿಯತೆ. ಹೆಣ್ಣ್‌ಗಳ ಶೋಷಣೆ, ಬಡ ಕೂಲಿಯಾಳ್‌ಗಳ ಮೇಲೆ ಮಾಲಿಕರ ದಬ್ಬಾಳಿಕೆ, ಆಪೀಸ್‌ಗಳ್ಲಿ ಯಾದೇ ಕೆಲ್ಸ ಆಕರೂ ಲಂಚ ಕೊಡಕೇಂತ ಹೇಳ್ವ ಜನಗಳ ನಂಬಿಕೆ, ದುಡ್ಡಿಗಾಗಿ ಮೊನ್ಸತ್ವನೇ ಕಳ್‌ಕಂಬ, ತನ್ನತನ ಮಾರಿಕಂಬ ಅಧಿಕಾರಿಗ, ಹಿಂಗೆ ಇಂದ್‌ನ ಸಮಾಜದ ಬೇರೆಬೇರೆ ಕೂರೂಪದ ಮೋರೆಗೆ ಒಂದರ ಮೇಲೆ ಒಂದರಾಂಗೆ ಮನ್‌ಸ್‌ಲಿ ತೇಲಿಕಂಡ್ ಬಾತ್.

ಬೆಪ್ಪು ಬೆಪ್ಪಾಗಿ ಬಿಳ್ಚಿಕಂಡಿದ್ದ ಕೂಸುನ ಮೋರೆ ಹಂಞ ಗುಲಾಬಿ ಬಣ್ಣಕ್ಕೆ ತಿರ್‌ಗಿಕೆ ಸುರು ಆತ್. 'ಕೂಸು ಅಲ್ಲಿ ಕುದ್ಕ ನೀ ಜಾಣೆ ಅಲ್ಲಾ ನಿಂಗೆ ನಾ ಕತೆ ಹೇಳಿ ಕೊಟ್ಟನೆ, ಹಾಡ್ ಡೇನ್ಸ್, ಆಟ ಪಾಟ ಎಲ್ಲಾ ಕಲ್ಸಿನೆ, ನೀ ಯಾಗೋಳು ಶಾಲೆಗೆ ಮಾತ್ರ ಬರೊಕು ಆತಾ'ಂತ ಹೇಳ್ಕನ ಎಣ್ಣೆ ಕಾಣದ ಕೆಂಚಾದ ಕೂದಲ್‌ನ ತಲೆನ ಅಕ್ಕ್‌ಂತ ಹೇಳುವಾಂಗೆ ಆಡ್‌ಸಿತ್. ಸೋಕುಲಿ

ಇದ್ದವರ ಮಕ್ಕ ತಲೆಗೆ ಎಣ್ಣೆ ಹಾಕದೇ ಇದ್ದವೆ. ಇವ್ಕೆ ಇಲ್ಲೆ. ಒಂದು ಲೆಕ್ಕಲಿ ಇವೂ ಅವೂ ಬಡವೇ. ಇವು ದುಡ್ಡ್‌ಲಿ ಬಡವು ಆದರೆ ಅವು ಬುದ್ದಿಲಿ ಬಡವುಂತ ದೊಡ್ಡ ಉಸುರ್ ಬುಟ್ಟ್, ತನ್ನ ಕೆಲ್ಸಲಿ ತೊಡ್‌ಗಿದೊ ಮುತ್ತಮ್ಮ ಟೀಚರ್.

ಕೆಲವು ವರ್ಸಗ ಹಾಂಗೆ ಉರುಳಿ ಹೋತ್. ಆ ಬಡೆ ಗೂಡೆ ಸುಚರಿತ ಲಾಯಿಕೇ ಕಲೀತಿತ್ತ್. ತನ್ನ ಹೆಸ್‌ರ್‌ಗೆ ತಕ್ಕಹಾಂಗೆ ಒಳ್ಳ ಗುಣ ನಡ್ತೆ ಇತ್ತ್. ಏಳ್ನೇಲಿ ಕ್ಲಾಸಿಗೆ ಪಸ್ಟ್ ಬಂದ್ ಪಾಸಾದ ಗೂಡೆನ ಟಿ.ಸಿ. ತಕಂಡ್ ಹೋಕನ ಮುಂದೆ ಮಗಳ ಏನ್ ಮಾಡಿಯಂತ ಕೇಳ್‌ಕನ ದೊಡ್ಡ ಸಾಲೆಗೆ ಸೇರ್ಸಿನೆ. ದಿನಕ್ಕೆ ಹತ್ತು ರೂಪಾಯಿನಾಂಗೆ ಒಳ್ಸಿ ಹಂಞ ದುಡ್ಡ್ ಮಡ್ಗಿಯೊಳೆ. ದೇವ್ರು ಕಣ್ಣ್ ಬುಟ್ಟರೆ ಮುಂದೆ ನಿಮ್ಮ ಹಾಂಗೆ ಟೀಚರ್ ಆದೆ. ಮತ್ತೆ ಒಳ್ಳ ಹೈದನ ನೋಡಿ ಮೊದಿವೆ ಮಾಡೊಕು. ಅಷ್ಟ್ ಮಾಡ್ದ ಮರ್‌ದಿನ ನಾ ಸತ್ತರೂ ಬೇಜಾರ್ ಇಲ್ಲೇಂತ ಹುರುಪುಂದ ಹೇಳ್‌ಕನ ಆ ಅವ್ವನ ಕಣ್ಣ್‌ಲಿ ಕಂಡ ಕಣ್ಣೀರ್ ಕುಸಿದ್ದೋ ಬೇಜಾರ್‌ದ್ದೋಂತ ಗೊತ್ತಾತ್‌ಲೆ. ಅಯ್ಯೆ ಮಗಳ್ ಬಂದ ಕಣ್ಣೀರ್‌ನ ಹಾಂಗೆ ಪೂಜಿಕಂಡ್ ಕಾಲ್ ಹಿಡ್ದ್ ಶಾಲೆಂದ ಹೊರಟ್ ಹೋದವು ಮತ್ತೆ ಸುದ್ದಿನೇ ಇತ್ತ್‌ಲೆ. ಆಗೊಮ್ಮೆ ಈಗೊಮ್ಮೆ ಆ ಬಡೆ ಅಯ್ಯೆ, ಮಗಳ ನೆನ್ಪಾದರೂ, ಮತ್ತೆ ಮತ್ತೆ ಸಾವಿರಾರ್ ಮಕ್ಕಳ್ಲಿ ಇದೂ ಒಂದಾಗಿ ಹೋಗಿತ್ತ್.

* * * * *

48

# ಗುರುದಕ್ಷಿಣೆ

ಮಡಿಕೇರಿಗೆ ಹೋದ ಗಣಪತಿ ಮಾಸ್ಟ್ರ ಮನೆಗೆ ಬಂದಾಂಗೆ ಮಗಳು ಬಂದ ಒಂದು ಪೋಸ್ಟ್ ಕಾಗದನ ಕೊಟ್ಟತ್. ಒಡ್ದ್ ನೋಡ್ರೆ 'ಜಿಲ್ಲಾ ವರಿಷ್ಠ ಪೊಲೀಸ್ ಅಧಿಕಾರಿಯಿಂದ ಚಾರಿತ್ರ್ಯದ ಬಗ್ಗೆ ದೃಢೀಕರಣ ಪತ್ರ ಲಗತ್ತಿಸತಕ್ಕದ್ದು'ಂತ ಕಾಗದ. ಗಣಪತಿ ಮಾಸ್ಟ್ರ ಹೆಣ್ಣ್ ಗುಣವತಿ ಟೀಚರ್ ಕೆಲ್ಸಲಿ ಇರ್ಕನೇ ಪರಲೋಕ ಸೇರ್ದರ್‌ಂದ ಮಗಳಿಗೆ ಅನುಕಂಪ ಆಧಾರಲಿ ಕೆಲ್ಸಕ್ಕೆ ಅರ್ಜಿ ಹಾಕಿದ್ದೊ. ಮಾಸ್ಟ್ರಗೆ ಹೇಂಗೂ ಪಿಂಚಣಿ ಆಗಿ ಐದ್ ವರ್ಸಕ್ಕೆ ಹಕ್ಕಲೆ ಆಗಿತ್ತ್. ಮಕ್ಕಳ ಹೇಂಗಾರೂ ದಡ ಸೇರ್ಸೊಕಲೆ, ಸರ್ಕಾರದ ಈ ಅವಕಾಸನ ಬುಡುದು ಬೇಡಾಂತ ಪ್ರಯತ್ನ ಪಡ್ತಾ ಇದ್ದೊ. ಹುಟ್ಟಿದ ಮೇಲೆ ಒಮ್ಮೆನೂ ಪೊಲೀಸ್ ಸ್ಟೇಸನ್ ಹತ್ತದ ಮಾಸ್ಟ್ರಿಗೆ ಹೇಂಗಪ್ಪ ಈ ಸರ್ಟಿಪಿಕೇಟ್ ತಕಂದೂಂತ ಚಿಂತೆ ಸುರಾತ್. ಏನ್ ಮಾಡಿಕೆ ಆದೆ ಕಾರ್ಯ ಆಕರೆ ಕತ್ತೆ ಕಾಲೂನೂ ಹಿಡಿಯೊಕೆ. ಭಾಗಮಂಡ್ಲ ಪೊಲೀಸ್ ಸ್ಟೇಸನ್‌ಂದ ಏನೂ ತಕರಾರ್ ಇಲ್ಲೇಂತ ಬರ್ಸಿಕಂಡ್ ಹೋದರೆ ಮಾತ್ರ ಎಸ್.ಪಿ. ಆಪೀಸ್ಲಿ ಸರ್ಟಿಫಿಕೇಟ್ ಸಿಕ್ಕುದು. ಹಂಗಾಗಿ ನಾಳೆ ಭಾಗಮಂಡ್ಲ ಪೊಲೀಸ್ ಸ್ಟೇಸನ್‌ನ ಮೆಟ್ಲ್ ಹತ್ತೊಕೇಂತ ಗ್ರೇಸಿಕಂಡೋ

ಗಣಪತಿ ಮಾಸ್ಟ್ರ ಹಿಂದೆಂದಲೂ ನೇರೆ ನೇರ ಮೊನ್ಸ. ಅತ್ತೊಳು ಅಲ್ಲಾ ಇತ್ತೊಳು ಅಲ್ಲಾಂತ ಅಡ್ಡ ಗೋಡೆ ಮೇಲೆ ದೀಪ ಇಸಿದಾಂಗೆ ಇರಿಕಿಲ್ಲೆ. ಎಲ್ಲಾ ಸೀದಾ, ಸೀದಾ, ಸತ್ಯಧರ್ಮ ಬುಟ್ಟ್ ಯಾವ ಕೆಲ್ಸನೂ ಮಾಡಿಕಿಲ್ಲೆ. ಹಂಗಾಗಿಯೋ ಏನೋ ಬೊದ್‌ಕ್‌ಲಿ ಬಂದ ಎಂತೆಂತೊ ಅವಕಾಸಗ ತೊಪ್ಪಿಹೋತು. ಅದಕ್ಕೆ ಮಾಸ್ಟ್ರ ಯಾಗೊಳು ಮಂಡೆ ಬಿಸಿ ಮಾಡಿಕಂಡವು ಅಲ್ಲಾ. ಮೊನ್ಸಂಗೆ ಬೊದ್‌ಕಿಕೆ ಎಸ್ಟ್ ಬೇಕೋ ಅಸ್ಟ್ ಇದ್ದರೆ ಸಾಕ್. ದುಡ್ಡ್‌ನ ಕೊಳೆ ಗೊಬ್ಬರಲಿ ಹುಳುನಾಂಗೆ ಒದ್ದಾಡಿ ಯಾಕೆ ಸಾಯೊಕು. ಹಣ ಕಂಡರೆ ಹೆಣ ಬಾಯಿ ಬುಟ್ಟದೆಂತ ಹೇಳ್ರೂ, ಮಾಸ್ಟ್ರ ಮಾತ್ರ ಅನ್ಯಾಯದ ದುಡ್ಡಿಗಾಗಿ ಯಾರ ಮುಂದೆನೂ ಕೈಯೊಡ್ಡಿದವು ಅಲ್ಲಾ; ದುಡ್ಡೇ ದೊಡ್ಡಪ್ಪಂತ ತಿಳಿದವು ಮುಂದೇ ಅಲ್ಲಾ.

ಮಾಸ್ಟ್ರ ಈ ಜೀವನ ದೃಷ್ಟಿಂದಾಗಿಯೇ ಬುಗುರಿನಾಂಗೆ ಕೆಲ್ಸಲಿ ಊರೂರು ತಿರುಗೊಕಾಗಿ ಬಾತ್. ಸುರುಗೆ ಕೆಲ್ಸ ಸಿಕ್ಕಿದ ಮೂರ್ನಾಡ್ ಸಾಲೆಲಿ ಇರ್‍ಕನ ಪ್ಯೊಲಾದ ಒಬ್ಬ ಹೈದಂಗೆ ಮಾರ್ಕ್ ಎಲ್ಲಿಯಾರ್ ಸೇರ್‍ಸಿ ಪಾಸ್ ಮಾಡೀಂತ ಹೆಡ್‌ಮಾಸ್ಟ್ರ ಹೇಳ್ದೊ. ಅವಂದ ಹೆಚ್ಚಿ ಮಾರ್ಕ್ ತೆಗ್ದ ಮಕ್ಕಳೂ ಪ್ಯೊಲಾಗಿ ಇರ್ಕನ ಇವಂಗೆ ಮಾತ್ರ ಮಾರ್ಕ್ ಸೇರ್‍ಸಿ ಪಾಸ್ ಮಾಡ್ದು ಹೇಂಗೆ? ನೋಡ್ರೆ ಆ ಹೈದ ಶಾಲಾ ಆಡಳಿತ ಮಂಡಳಿನ ಅಧ್ಯಕ್ಷರ ಮಂಜ; ಏನ್ ಮಾಡ್ದೂಂತ ಮಾಸ್ಟ್ರ ಮಂಡೆ ಬಿಸಿ ಮಾಡಿಕಂಡ್ ಇರ್ಕನ ಸಾಲೆ ಪಿಯೋನ್ ಬಂದ್, 'ಸರ್ ನೀವು ಇವತ್ತು ಸಂಜೆ ಅಧ್ಯಕ್ಷರನೊಮ್ಮೆ ಕಾಣಬೇಕಂತೆ'ಂತ ಹೇಳ್ತ್. ಅಧ್ಯಕ್ಷರ್ ಬಾಕೆ ಹೇಳ್ದ ಮೇಲೆ ಅವರ ಮಾತಿಗೆ ಬೆಲೆ ಕೊಡೊಕಲೇಂತ ಅಂದ್ ಹಿಂಬೊತು ಅವರ ಮನೆಗೆ ಹೋದೊ. ಮಾಸ್ಟ್ರ ಬಾರಿ ಪ್ರೀತಿಂದ ಬರಮಾಡಿಕಂಡ್ ಅಧ್ಯಕ್ಷರ್, ಮಾಸ್ಟ್ರ ಸುಖ ದು:ಖ ಎಲ್ಲಾ ಇಚಾರ್ಸಿ , ಸ್ವೀಟ್, ಕಾರ, ಕಾಪಿ ಎಲ್ಲಾ ಕೊಟ್ರೊ. ಕಿತ್ತುಳಿ, ಏಪಲ್, ಬಾಳೆ ಹಣ್ಣುಗಳನ್ನು ತಂದ್ ಇಸಿದೊ. ಎಲ್ಲಾ ಆದ ಮೇಲೆ 'ಮಾಸ್ಟ್ರೇ ನಿಮ್ಮ ಹೆಚ್.ಎಂ. ನಿಮಗೊಂದು ವಿಚಾರ ಹೇಳಿರ್‍ಬೇಕಲ್ಲಾ'ಂತ ಕೇಳ್ದೊ. 'ಸರ್ ಹೇಳಿದ್ದಾರೆ ಆದ್ರೆ ನಿಮ್ಮ ಮಗನನ್ನು ಪಾಸ್ ಮಾಡಿದ್ರೆ ಅವನಿಗಿಂತ ಹೆಚ್ಚು ಮಾರ್ಕ್ಸ್ ಪಡ್ದವರೂ ಫೈಲಾಗಿದ್ದಾರಲ್ಲಾ ಅವ್ರನ್ನೂ ಪಾಸ್ ಮಾಡಬೇಕಾಗುತ್ತಲ್ಲಾ! ಏನೂ ಬರಿಯದವರನ್ನು ಹೇಗೆ ಪಾಸ್ ಮಾಡೋದು'ಂತ ಹೇಳ್ದಕ್ಕೆ ಒಳಗೆ ಹೋದ ಅಧ್ಯಕ್ಷರ್ ಒಂದು ಕವರ್ ತಂದ್ ಮಾಸ್ಟ್ರ ಕೈಗೆ ತುರ್‍ಕಿಸಿ, 'ಏನಾರ್ ಮಾಡಿ, ಏನ್ ಮಾಡ್ತಿರೊ ನಂಗೆ ಗೊತ್ತಿಲ್ಲ ನಮ್ಮ ಹುಡ್ಗ ಪಾಸಾಗಾಲೇಬೇಕು. ಇಲ್ಲಾಂತಾದ್ರೆ ಮುಂದೆ ನಿಮಗೂ ಕಸ್ಟ್ ಬಂದೀತು'ಂತ ಹೇಳ್ದೊ. ಅವು ಕೊಟ್ಟ

ಕವರ್‌ನ ಅಲ್ಲೇ ಟೀಪಾಯಿ ಮೇಲೆ ಇಸ್‌ಕನ ಸಾವಿರದ ನೋಟ್‌ಗ ಇಣ್ಕಿ ನೆಗಾಡ್ತಿದ್ದೊ. ಅಲ್ಲಿಂದ ಹೊರ್ಟ ಮಾಸ್ಟ್ರ ತಲೇಲಿ ವಿಚಾರಗಳ ತಾಕಲಾಟ ಸುರು ಆತ್, ಏನ್ ಮಾಡ್ದು ಅವು ಹೇಳ್ದಾಂಗೆ ಮಾಡ್ರೆ ನಾ ಇಸ್ಟ್ ದಿನ ಇಸಿಕಂಡಿದ್ದ ಮೌಲ್ಯಗೆಲ್ಲ ಹಳ್ಳಲಿ ಹುಣ್‌ಸೊಳಿ ಪಿಚಿಕಿದಾಂಗೆ ಆದೆ. ಅಂತಾ ಹೇಲ್ ತಿಂಬ ಕೆಲ್ಸ ನನ್ನಿಂದ ಆಕೇ ಇಲ್ಲೆ. ಮಾಸ್ಟ್ರಗಳಿಗೆ ಮಕ್ಕ ಎಲ್ಲಾ ಒಂದೇ. ದೊಡ್ಡವರ ಮಕ್ಕ, ಪಾಪದವರ ಮಕ್ಕ, ನಮ್ಮ ಜಾತಿ ಮಕ್ಕ, ಬೇರೆ ಜಾತಿಯವರ ಮಕ್ಕಂತ ಏನಾರ್ ಭೇದ ಭಾವ ತೋರ್ಸಿರೆ ಮಾಸ್ಟ್ರ ಕೆಲ್ಸಕ್ಕೇ ಅಪಮಾನಂತ ಗ್ರೇಸಿಕಂಡ್ ರೂಮಿಗೆ ಬಂದೊ. ಮರುದಿನ ಸಾಲೆಗೆ ಹೋದ ಮಾಸ್ಟ್ರ; ಮಕ್ಕಳ ಉತ್ತರ ಪತ್ರಿಕೆಗಳ್ನೆಲ್ಲಾ ತಕಂಡ್ ಹೆಡ್‌ಮಾಸ್ಟ್ರ ರೂಂಗೆ ಹೋಗಿ ಆ ಹೈದನ ಪೇಪರ್‌ನ ಮೇಲೆ ಇಸಿ, 'ಈ ಹುಡುಗನ ಪತ್ರಿಕೆಗೆ ಮಾರ್ಕ್ ಸೇರಿಸಲು ನನ್ನಿಂದಾಗದು ಸರ್. ನೀವು ಬೇಕಾದರೆ ಸೇರಿಸಿ'ಂತ ಹೇಳಿ ಹೊರ್ಟು ಬಂದೊ. ಅದರ ಪರಿಣಾಮ ತತ್ಕಾಲದ ಕೆಲ್ಸಕ್ಕೆ ಸೇರ್ದ ಮಾಸ್ಟ್ರಿಗೆ ಗೇಟ್ ಪಾಸ್ ಸಿಕ್ಕಿತ್‌ಂತ ಬೇರೆ ಹೇಳೊಕೂಂತ ಇಲ್ಲೆ.

ಅಲ್ಲಿಂದ ಗಣಪತಿ ಮಾಸ್ಟ್ರ ಪಾಲಿಬೆಟ್ಟಲಿ ಒಂದು ಕಾನ್ವೆಂಟ್ ಸಾಲೆಗೆ ಸೇರ್ದೊ. ಅಲ್ಲಿನೋ ಏನೋ ಎಲ್ಲಾ ರೂಲ್ಸ್‌ಗ. ಸಾಲೆ ಮಕ್ಕ ಕನ್ನಡ ಮಾತಾಡಿಕೇ ಬೊತ್ತು. ಕನ್ನಡಲಿ ಮಾತಾಡ್ರೆ ಫೈನ್. ಉಸುರು ಕಟ್ಟುವ ವಾತಾವರಣ. ಏನ್ ಮಾಡ್ದು ಹೊಟ್ಟೆ ಪಾಡ್, ಬಾಯಿ ಮುಚ್ಚಿಕಂಡ್ ಇರೊಕೇ. ತಿಂಗಳ ಆಕೇರಿಗೆ ಸಂಬಳ ಏನೋ ಸಿಕ್ಕ್‌ತ್ತಿತ್ತ್. ಸಂಬಳ ಬಟವಾಡೆ ಪುಸ್ತಕಲಿ ಐದ್ ಸಾವಿರ ರೂಪಾಯಿ, ಕೊಡ್‌ತಿದ್ದದ್ ಮೂರು ಸಾವಿರ!? ಇಲ್ಲಿ ನನ್ನಂದ ಅಂತೂ ಕೆಲಸ ಮಾಡಿಕೆ ಆಕೇ ಇಲ್ಲೆ, ಸೇರ್ದಕ್ಕೆ ಒಂದು ವರ್ಸದವರೇಗೆ ದೂಡುದುಂತ ಇರ್‌ಕನ ಮತ್ತೊಂದು ತಲೆಬೇನೆ ಸುರು ಆತ್. ಸಾಲೆನ ಸ್ಕೂಲ್ ಡೇ. ಸ್ಕೂಲ್ ಡೇ ಏನೋ ಗೌಜಿಲಿ ನಡ್ತ್. ದೊಡ್ಡ ದೊಡ್ಡ ಕಾಪಿ ಪ್ಲಾಂಟರ್ಗ ಇರುವ ಊರು ತಾನೆ. ಹಂಗಾಗಿ ಚಂದಾ ಲಾಯಿಕ್‌ಲಿ ಸಂಗ್ರಹ ಆತ್, ಸ್ಕೂಲ್ ಡೇ ಮುಗ್ದ ಮೇಲೆ ಲೆಕ್ಕಚಾರ ಸೆರಿ ಮಾಡಿಕಿಲ್ಲೆ. ಆ ರಸೀದಿ ಈ ರಸೀದಿಂತ ಅದಕ್ಕೆ ಸೈನ್ ಹಾಕಿ, ಇದಕ್ಕೆ ಸೈನ್ ಹಾಕಿಂತ ಏನೋ ಎಲ್ಲಾ 'ಕಾಕೆ ಲೆಕ್ಕ' ಬರ್ದ್ ಮಾಸ್ಟ್ರಗಳ ಕೈಯಿಂದ ಸೈನ್ ತಕಂದು, ಗಣಪತಿ ಮಾಸ್ಟ್ರ ಜಪ್ಪಯ್ಯಾಂತ ಹೇಳ್ರೂ ಸೈನ್ ಸುಮ್ಮನೆ ಹಾಕಿಕೆ ಒಪ್ಪಿತ್‌ಲೆ. ಅದೇ ನೆವನಲಿ ಮಾಸ್ಟ್ರ ಕುದ್ದರೆ ತೊಪ್ಪು, ನಿತ್ತರೆ ತೊಪ್ಪು, ಕಾಂಬಕನ ಹೆಚ್.ಎಂ.ನ ಕಣ್ಣ್ ಯಾಗೊಳು ಕೆಂಪು. ಸೈನ್ ಹಾಕಿದವುಕೆ

ಎಲ್ಲಾ ಸ್ಕೂಲ್ ಡೇ ಲೆಕ್ಕಲಿ ಗಡ್ದ್ 'ಕಡಿಕುಡಿ ಪಾರ್ಟಿ' ಆತ್'ಂತ ಮತ್ತೆ ಸುದ್ದಿ ಗೊತ್ತಾತ್. ವರ್ಸದ ಅಕೇರಿ ಪರೀಕ್ಷೆ ಮುಗ್ದ ಮೇಲೆ ಆ ಸಾಲೆಗೆ ದೊಡ್ಡ ನಮಸ್ಕಾರ ಹಾಕಿ ಗಂಟ್ ಮೂಟೆ ಕಟ್ಟಿದೊ ಮಾಸ್ಟ್ರ. ಇನ್ನು ಬೇರೆ ಸಾಲೆ ಎಲ್ಲಿ ಸಿಕ್ಕುದೂಂತ ಹುಡ್ಕಿಕಂಡ್ ಇದ್ದೊ ಮಾಸ್ಟ್ರ. ನನ್ನ ನ್ಯಾಯ ಧರ್ಮಗಳ ಹಂಞಾ ಬುಡದಿದ್ದರೆ ಹೊಟ್ಟೆಗೆ ತಣ್ಣೀರ್ ಬಟ್ಟೆನೇ ಗೆತಿ. ಕಾಲ ಬಂದಾಂಗೆ ಕೋಲ ಕಟ್ಟೊಕೇಂತ ಗ್ರೇಸಿಕಂಡ್ ಇದ್ದೊ.

ಅಂತೂ ಇಂತೂ ನಾಪೊಕ್ಲನಕ್ಕಲೆ ಒಂದು ಹೊಸ ಸಾಲೆಲಿ ಕೆಲಸ ಏನೋ ಸಿಕ್ಕಿತ್. ಕೆಲಸಕ್ಕಾಗಿ ಊರೂರು ಸುತ್ತಾಡಿ ಕೈಲಿದ್ದ ಕಾಸೆಲ್ಲಾ ಕರ್'ಗಿದ ಮೇಲೆ ಸಿಕ್ಕಿದ ಸಾಲೆ. ಹೊಸ ಸಾಲೆ ಆದರಂದ ಪಾಠ ಮಾತ್ರ ಮಾಡ್ರೆ ಸಾಲ್ದ್. ಕ್ಲರ್ಕ್ ಕೆಲ್ಸನೂ ಮಾಡೊಕು. ಉಪಾಯ ಇಲ್ಲರೆ ಪಿವೋನ್ ಕೆಲ್ಸನೂ ಮಾಡೊಕು. ಗಣಪತಿ ಮಾಸ್ಟ್ರಿಗೆ ಕೆಲ್ಸ ಮಾಡಿಕೇನೊ ಬೇಜಾರಿಲ್ಲೆ. ಎಂತಾ ಕೆಲ್ಸನೂ ಮಾಡಿಕೆ ರೆಡಿ. ಆದರೆ ಕೆಲ್ಸಕ್ಕೆ ಸೇರ್ಕನ ಸಾಲೆನ ಕರೆಸ್ಪಾಂಡೆಂಟ್ ಒಂದು ಕಾಲಿ ಪೇಪರ್ ಕೊಟ್ಟ್ 'ಇಲ್ಲಿ ಸೈನ್ ಹಾಕಿ ಮಾಸ್ಟ್ರೇ'ಂತ ಹೇಳಿ ಸೈನ್ ತಕಂಡೊ. ಕಾಲಿ ಪೇಪರ್'ಗೆ ಸೈನ್ ಹಾಕದಿದ್ದರೆ ಕೆಲ್ಸ ಇಲ್ಲೆ!? ಆ ಕಾಲಿ ಪೇಪರ್'ಲಿ ಸಂದರ್ಭ ಬಂದರೆ ನನ್ನ ರಾಜಿನಾಮೆ ಮೂಡ್'ದೆಂತೇಳುವ ಸತ್ಯ ಗೊತ್ತಾತ್, ಕೂಸು ಹುಟ್ಟ್'ಕನೇ ಗಂಟ್ಲಿಗೆ ಕೋಣಿಕೆ ಬೊಳ್ಳಿ ಹಾಕಿ ಇಸುದು. ಬೇಕಾದಾಕನ ಕೋಣಿಕೆನ ಕಾಸಿ, ಕೊಂದ್, ನೇತಾಡ್ಸಿ ಆತ್ಮಹತ್ಯೆಂತ ಹೇಳ್ದು. ಎಂತಾ ಹಿಕ್'ಮತ್!? ಆ ಪೇಪರ್'ನ ಪರಪರನೆ ಹರ್ದ್ ಕರೆಸ್ಪಾಂಡೆಂಟ್ ಮೋರೆಗೆ ಇಟ್ಟ್ ಎದ್ದ್ ಬರುವಸ್ಟ್ ಸಿಟ್ಟೇನೊ ಬಾತ್. ಆದರೆ ಏನ್ ಮಾಡಿಕೆ ಆದೆ? ಹೊಟ್ಟೆಪಾಡ್, ಸಾಲ್ದಕ್ಕೆ ಗಣಪತಿ ಮಾಸ್ಟ್ರ ಎರ್'ಡ್ ಕೈ ಈಗ ನಾಲ್ಕ್'ಕೈ ಆಗುಟ್ಟು. ಗುಣವತಿ ಇವರ ಯಾವ ಗುಣನ ಕಂಡೊ ಕೈ ಹಿಡ್ದುಟ್ಟು. ಟ್ರೈನಿಂಗ್ ಆದ ಗೂಡೆ ಇಂದಲ್ಲ ನಾಳೆ ಎಲ್ಲಿಯಾರ್ ಕೆಲ್ಸ ಸಿಕ್ಕುದೂಂತ ದೂರದ ಆಸೆಲಿ ಕಟ್ಟಿಕಂಡಿದ್ದೊ.

ಈ ಸಾಲೆಲಿ ಮತ್ತೊಂದು ಘಟನೆ ನಡ್ತ್. ಸಾಲೆಲಿ ಕೆಲ್ಸ ಮಾಡಿಕಂಡಿದ್ದ ಕ್ಲರ್ಕ್ ಒಬ್ಬ ಮಾಸ್ಟ್ರ ಸೇರಿಕೆ ಮುಂದೆ ದೊಡ್ಡ ದುಡ್ಡು ಮಾಡಕ್'ಂತ ದುಬೈಗೆ ಹಾರಿತ್. ಆದರೆ ಅವನ ಹೆಸ್ರ್ ಮಾತ್ರ ದಾಖಲೆಗಳ್ಲಿ ಹಂಗೇ ಒಳ್'ದಿತ್. ಸಂಬಳನೂ ತಿಂಗತಿಂಗ ಬಂದ್'ಕಂಡೇ ಇತ್ತ್. ಅದ್ ಹೇಂಗೆಂತ ಮಾತ್ರ ಗಣಪತಿ ಮಾಸ್ಟ್ರಿಗೆ ಗೊತ್ತಿತ್ತೆ. ಒಂದು ದಿನ ಹಿಂಬೊತ್ತು ಮನೆಗೆ ಹೊರ್ಡಿಕೆ ಆಕನ ಹೆಚ್.ಎಂ. ಆಫೀಸ್ಗೆ ಕರ್ದ್, ಆ ಕ್ಲರ್ಕ್'ನ ಸೈನ್'ನ ಅಂವ ಹಾಕಿದಾಂಗೆ ಹಾಕಿಕೆ

ಗುಟ್ಟುಲಿ ಹೇಳ್ದೊ. ಅಸ್ಟ್ ಮಾತ್ರ ಅಲ್ಲಾ ಇವುಕ್ಕೆ ಕಾಂಬ ಹಾಂಗೆ ಇವು ಕಾಲಿ ಪೇಪರಿಗೆ ಸೈನ್ ಹಾಕಿದರ್ಲಿ ರಾಜಿನಾಮೆ ಬರ್ಸಿದರ ಮೇಜಿನ ಮೇಲೆ ಇಸಿದೊ. ಅವರ ಹಿಕ್‌ಮತ್ ಗಣಪತಿ ಮಾಸ್ಟ್ರಿಗೆ ಲಾಯಿಕ್‌ಲಿ ಗೊತ್ತಾತ್. ಆ ಕ್ಲರ್ಕ್‌ನಾಂಗೆ ಸೈನ್ ಹಾಕದಿದ್ದರೆ ಮನೆಗೇಂತ. ಈಗ ಏನ್ ಮಾಡ್ದು ಕತ್ರಿಲಿ ಸಿಕ್ಕಿ ಹಾಕಿಕಂಡಾಂಗೆ. ಒಂದೋ ತನ್ನ ಎಲ್ಲಾ ಸಿದ್ಧಾಂತಗಳಿಗೆ ತಿಲಾಂಜಲಿ ಬುಟ್ಟ್ ಅವು ಹೇಳ್ದಾಂಗೆ ಕೇಳೊಕು. ಇಲ್ಲರೆ ಗಂಟ್ ಮೂಟೆ ಕಟ್ಟಿಕೆ ರೆಡಿಯಾಕು. ಆ ಹೆಚ್.ಎಂ. ನ ಭಂಡತನ ಕಂಡ್ ಸಿಟ್ಟ್ ನೆತ್ತಿಗೆ ಏರ್ತ್. 'ಇಂತ ಹೊಲಸು ಕೆಲಸ ನನ್ನಿಂದಾಗುವುದಿಲ್ಲ ಸರ್'ಂತ ಹೇಳಿ ಸೀದಾ ಮನೆಗೆ ನಡ್ದೊ. ಮರ್‌ದಿನ ಬೊಳ್ಪುಗೆ ಕ್ಲಾಸಿಗೆ ಹೊರ್ಡಿಕೆ ರೆಡಿಯಾಕನ ಪಿಯೋನ್ ತಂದ್ ಒಂದು ಕವರ್ನ ಮಾಸ್ಟ್ರಿಗೆ ಕೊಟ್ಟತ್. ಒಡ್ದ್ ನೋಡ್ರೆ 'ನಿಮ್ಮ ರಾಜಿನಾಮೆಯನ್ನು ಅಂಗೀಕರಿಸಲಾಗಿದೆ'ಂತ ಒಂದೇ ವಾಕ್ಯ. ಅದರ ಓದಿ ಗಣಪತಿ ಮಾಸ್ಟ್ರಗೆ ಬೆಗ್‌ರ್ ಬಿಚ್ಚಿತ್. 'ಸಂಜೆ ಕರೆಸ್ಪಾಂಡೆಂಟರನ್ನು ಕಾಣಬೇಕಂತೆ ಸರ್'ಂತ ಹೇಳಿ ಪಿವೋನ್ ಹೋತು.

ಕರೆಸ್ಪಾಂಡೆಂಟ್ರ ಕಾಂಬಕೆ ಏನ್ ಮಾಡ್ದು? ಆ ಮೊನ್ಸನ ಕಾಂಬಕೆ ಒಂಚೂರೂ ಮನ್ಸ್ ಇಲ್ಲೆ. ಆ ಮೊನ್ಸನ ಗತ್ತ್ ಏನ್? ಮಾಸ್ಟ್ರಗ ಎಲ್ಲಾ ಅವನ ಕಾಪಿ ತೋಟದ ರೈಟ್ರ್‌ಗಂತ ಅವನ ಲೆಕ್ಕ. ನೋಡಿಕ್ಕೊ ವಿಲನ್ ವಜ್ರಮುನಿನಾಂಗೆ. ಕೊಂಬ ಮೀಸೆ, ಬೋಳು ತಲೆ, ಮೋರೆಲಿ ನೆಗೆ ಕಾಂಬಕಿಲ್ಲೆ, ಹರಳೆಣ್ಣೆ ಕುಡ್ದವರಾಂಗೆ ಯಾಗೊಳು ಇರ್ದು. ಎಲ್ಲದಕ್ಕೂ ನಾ ಮಾಡ್ದ್, ನಾ ಮಾಡ್ದ್‌ಂತ ಅಹಂಕಾರ. ನಾವೊಂತೇಳುವ ಮಾತ್‌ಬಾಕೇ ಇಲ್ಲೆ. ಊರಿಗೆ ಸಾಲೆ ಆಕೊಂತ ಕನ್‌ಸ್ ಕಂಡವು ಯಾರೊ? ಕಸ್ಟಪಟ್ಟ್ ಕಟ್ಟಿದವು ಯಾರೋ ಏನೋ? ಈಗ ಹೇಂಗೋ ಅಧಿಕಾರ ಸಿಕ್ಕಿತ್‌ಂತ ಪಿತ್ತ ನೆತ್ತಿಗೇರಿಟ್ಟು, ಅಂತೂ ಹೇಳ್ದಕ್ಕೆ ಕಂಡೊಮ್ಮೆ ಪೋಯಿತ ಗ್ರೇಸಿಕಂಡ್ ಕರೆಸ್ಪಾಂಡೆಂಟರ ಮನೆಗೆ ಹೋದೊ. ಮನೆನೊ ದೊಡ್ಡ ಭೂತಬಂಗ್ಲೆ. ಗೇಟ್ ಸದ್ದಾಕನ ಹುಲಿನಂತ ಎರ್ಡ್ ನಾಯಿಗ ಬೊಗುಳಿಕೆ ಸುರು ಮಾಡ್ರೆ ಮಾಸ್ಟ್ರ ಕಾಲ್ ನಡ್‌ಗಿಕೆ ಮುಟ್ಟಿತ್. ಅಲ್ಲಿದ್ದ ಕೆಲ್ಸದಂವ ನಾಯಿನ ಜೋರು ಮಾಡಿ ಬನ್ನೀಂತ ಕರ್ತ್. 'ಬದುಕಿದೆಯಾ ಬಡ ಜೀವಿ'ಂತ ಮಾಸ್ಟ್ರ ಮನೆಗೆ ಹೋದೊ. ಎಲ್ಲಾ ಅನಿರೀಕ್ಷಿತ ನೆಗೇ ಕಾಣದ ಮೊನ್ಸನ ಮೋರೆಲಿ ನೆಗೆ! 'ಬನ್ನಿ ಮಾಸ್ಟ್ರೇಂತ' ಕೈ ಕುಲುಕಿ ಕರ್ದ್ ಕುದ್ರಿಕೆ ಹೇಳ್ದ್ ನೋಡ್ರೆ ಮಾಸ್ಟ್ರಿಗೆ ನಾ ಯಾವ ಲೋಕಲಿ ಒಳೇಂತ ಆತ್. 'ಅಂದ ಹಾಗೆ ನಾಮೊಕ್ಲಿಗೆ ಹೊಸತಾಗಿ ಬಂದ ಆರ್.ಐ. ನಿಮ್ಮ ಶಿಷ್ಯಂತೆ ಅಲ್ಲಾ? ಬೆಳಿಗ್ಗೆ ಏನೋ ಕೆಲ್ಸಕ್ಕೆ ಅವರ ಆಫೀಸಿಗೆ

ಹೋಗಿದ್ದೆ, ಆಗ ಗೊತ್ತಾಯಿತು. ನೀವೇನು ಚಿಂತೆ ಮಾಡ್‌ಬೇಡಿ ನಿಮ್ಮ ರಾಜಿನಾಮೆ ಅಂಗೀಕರಿಸಿಲ್ಲ, ನಾಳೆಯಿಂದ ಯಥಾ ಪ್ರಕಾರ ಶಾಲೆಗೆ ಹೋಗಿ'ಂತ ಹೇಳ್ದರ ಕೇಳಿ ಮಾಸ್ಟ್ರಿಗೆ ನಂಬೊಕು ಬುಡೊಕೊಂತ ಒಂದೂ ಗೊತ್ತಾತ್ಲೆ.

ಆ ಆರ್.ಐ. ಮಂದಣ್ಣ, ಗಣಪತಿ ಮಾಸ್ಟ್ರ ಮೂರ್ನಾಡ್‌ಲಿ ಇರ್ಕನ ಅವರ ಶಿಷ್ಯ ಆಗಿದ್ದಂವ. ಕಲಿಯಕೆ ಸತಾದಡ್ಡ. ಇಂಗ್ಲಿಸ್ ಅಂತೂ ನಾಲಿಗೆನೆ ಮೊಗ್‌ಚ್‌ತಿತ್ಲೆ. ಅವಂಗೆ ಸಾಲೆ ಬುಟ್ಟ ಮೇಲೆ ಹಂಞ ಇಂಗ್ಲಿಸ್ ಹೇಳಿಕೊಡ್‌ತಿದ್ದೊ. ಅವನಾಂಗೆ ಇದ್ದ ಕೆಲವು ಮಕ್ಕಳೂ ಪಾಠಕ್ಕೆ ಬಾತಿದ್ದೊ. ಎಲ್ಲಾ ಕೂಲಿಯವರ ಮಕ್ಕ ಹೇಂಗಾರ್ ಪಾಸಾಗಲಿಂತ ಪುಗಸಟ್ಟೆ ಟಿವಿಸನ್. ಒಮ್ಮೆ ಅಂವಂಗೆ ಪೀಸ್ ಕಟ್ಟಿಕೆ ದುಡ್ಡಿಲ್ಲದೆ ಸಾಲೆಗೆ ಚಕ್ಕರ್ ಹಾಕ್‌ತ್ತಿತ್. ಅದ್ ಮಾಸ್ಟ್ರಿಗೆ ಗೊತ್ತಾಗಿ ಪೀಸುನೂ ಕಟ್ಟಿ ಸಾಲೆಗೆ ಬರುವಾಂಗೆ ಮಾಡ್ದೊ. ಅದರ ನೆಂಪು ಇಸಿಕಂಡ್ ಆ ಆರ್.ಐ. ನಮ್ಮ ಕರೆಸ್ಪಾಂಡೆಂಟ್ರಿಗೆ ಮಾಸ್ಟ್ರ ಬಗ್ಗೆ ಏನೋ ಹೇಳಿರೊಕು. ಈ ಪ್ಲಾಂಟರ್‌ನವುಕೆ ಅವಂದ ಏನೆಲ್ಲಾ ಕೆಲ್ಸ ಆಕಾದ್ದೆ ಅಲ್ಲಾ? ಅದಕ್ಕೆ ಅವರ ರಾಜಿನಾಮೆ ವಾಪಾಸ್ ಆತ್‌ಂತ ಗಣಪತಿ ಮಾಸ್ಟ್ರಗೆ ಮತ್ತೆ ಗೊತ್ತಾತ್. ಆ ಪುಣ್ಯಾತ್ಮ ಮಾಸ್ಟ್ರ ಶಿಷ್ಯ ಏನೋ ಹೌದು. ಆದರೆ ಅವನ ಸಂಗ್ತಿ ಕೇಳ್ರೆ ಮಾಸ್ಟ್ರ ತಲೆ ಅಡಿಗೆ ಹಾಕೊಕೆ. ಹಿಡ್‌ದಕೆ ಮುಟ್ಟಿದಕೆ ದುಡ್ಡು ಕೊಡೊಕಡ. ಕಂತೆ ಕಂತೆ ಕೊಟ್ಟವರ ಕೆಲ್ಸ ಮಾತ್ರ ಆದು ಗಡ. ಯಾರ್ದಾರ್ ಜಾಗೆ ಪಟ್ಟೆ ಮಾಡ್ಲೊಕರೆ, ಅವುಕೆ ಹತ್ತ್ ಕೊಡೊಕೊ, ಇವುಕೆ ಇಪ್ಪತ್ತ್ ಕೊಡೊಕೂಂತ ತಕಂಡ್ ಕೆಲ್ಸನೂ ಮಾಡ್ಸಿಕೊಡದೆ ಕೈ ಮೊಗ್‌ಚುವ ಜನ ಗಡ! 'ಕೊಟ್ಟವ ಕೋಡಂಗಿ ಇಸ್‌ಕಂಡವ ವೀರಭದ್ರ'ಂತ ಹೇಳುವಾಂಗೆನ ಕತೆ. ಅಂತವನ ಸಿಪಾರ್ಸ್‌ಲಿ ರಾಜಿನಾಮೆ ವಾಪಾಸಾತಲೇಂತ ಮಾಸ್ಟ್ರಿಗೆ ಚಿಂತೆ ಬೇರೆ. ಸಾಲೆಲಿ ಇಂತ ಎಸ್ಟೋ ಗಾಣ್‌ಚಾಲಿ ಕೆಲ್ಸಗ, ಅದರ ಕಣ್ಣ್‌ಲಿ ನೋಡಿಕಂಡ್ ಕಣ್ಣ್ ಮುಚ್ಚಿ ಕುದ್ರಿಕೆ ಮಾಸ್ಟ್ರ ಮನ್ಸ್ ಸುತಾರಾಂ ಒಪ್ಪ್‌ತಿತ್ಲೆ. ಇದ್ ನಂಗೆ ಹೇಳ್ದ ಜಾಗ ಅಲ್ಲಾಂತ ಮಾರ್ಚ್ ಆಕೇರಿಗೆ ಆ ಸಾಲೆಗೆ ಗುಡ್ ಬೈ ಹೇಳ್ದೊ.

'ಕೊಂಕಣ ಸುತ್ತಿ ಮೈಲಾರಕ್ಕೆ ಬಂದ'ಂತ ಹೇಳುವಾಂಗೆ ಗಣಪತಿ ಮಾಸ್ಟ್ರ ಸುತ್ತಿ ಸುತ್ತಿ ಚೆಟ್ಟಳ್ಳಿ ಸಾಲೆಗೆ ಸೇರದ್ದೂಂತ ಆತ್. ಮಾಸ್ಟ್ರ ಚೆಟ್ಟಳ್ಳಿಗೆ ಸೇರುವೆಂತಾಕನ ಅವರ ಸೋದರ ಮಾಂವ ನಿಂಗೆ ಯಾವ ಊರಾರು ಆದು ಚೆಟ್ಟಳ್ಳಿ ಮಾತ್ರ ಬೇಡ. ಅಲ್ಲಿ ನಡು ಹಗಲೇ ಮೊನ್ಸರ ಗುಂಡು ಹಾರ್ಸಿ ಕೊಂದವೆಂತ ಹೇಳ್ದೊ. ಮಾಸ್ಟ್ರಿಗೆ ಮಂಡೆ ಬೆಚ್ಚ ಆಗಿ ಏನ್ ಮಾಡ್ದು ಸಾಲೆನಾರ್ ನೋಡಿ

ಬರೊನೋಂತ ಚೆಟ್ಟಳ್ಳಿಗೆ ಹೋದೊ. ಹೋಗಿ ನೋಡ್ರೆ ಎತ್ತರದ ಗುಡ್ಡೆಲಿ ಲಾಯಿಕ್‌ನ ಸಾಲೆ. ಎಲ್ಲವೂ ಪ್ರೀತಿಂದ ಮಾತಾಡ್ಸಿದೊ. ಹೆಚ್.ಎಂ. 'If you are good, people are also good'ಂತ ಹೇಳ್ದೊ. ಸಾಲೆನ ಪರಿಸರ ಕುಸಿಯಾಗಿ ಮಾಸ್ಟ್ರ ಸಾಲೆಗೆ ಸೇರ್ದೊ. ಸಾಲೆಗೆ ಐದ್ ಎಕ್ರೆ ಕಾಪಿ ತೋಟ, ತೋಟಲಿ ಕಿತ್ತುಳಿ, ಮೆಣ್ಸ್ ಎಲ್ಲಾ. ಕಾಪಿ ತೋಟ ದಾಟಿ ಮಾರ್ಗದ ಹಕ್ಕಲೆ ದೊಡ್ಡ ಆಟದ ಮೈದಾನ. ಹಾಕಿ, ಪುಟ್‌ಬಾಲ್ ಆಡುವಂತ ದೊಡ್ಡ ಮೈದಾನ. ಆಗ ಪೂವಯ್ಯನವು ಸಾಲೆನ ಕರೆಸ್ಪಾಂಡೆಂಟ್. ಹೆಸ್ರ್‌ನಾಂಗೆ ಹೂವುನಂತ ಮನ್‌ಸ್‌ನ ಮೊನ್ಸ. ಊರಿಗೆ ಹೈಸ್ಕೂಲ್ ಒಂದು ಆಕೂಂತ ಹೇಳಿ ಪ್ರಯತ್ನ ಪಡ್ಕನ 'ನೀ ಹೈಸ್ಕೂಲ್ ಮಾಡ್ರೆ ನಿನ್ನ ದನ ಮೇಪಿಗೆ ಜನ ಇಲ್ಲೆ'ಂತ ಅಡ್ಡಗಾಲ್ ಹಾಕಿದವರ ಕ್ಯಾರ್ ಮಾಡದೆ ಊರಿಗೆ ಹೈಸ್ಕೂಲ್ ತಂದ ಮೊನ್ಸ. ಎರಡು ಮೂರು ಕಿ.ಮೀ. ದೂರದ ಮನೆಂದ ನಡ್ಕಂಡೇ ಬಂದ್ ಸಾಲೆನ ತೋಟನೆಲ್ಲಾ ಸುತ್ತಿ ಸಾಲೆಗೆ ಬಂದ್ ಎಲ್ಲರ ಪ್ರೀತಿಂದ ಮಾತಾಡ್ಸಿ, ಆಗು ಹೋಗುಗಳ ಬಗ್ಗೆ ವಾರಕ್ಕೆ ಎರಡು ಮೂರು ಸರ್ತಿ ಇಚಾರ್ಸಿ ಕಂಡ್ ಹೋವಂತವು. ಆಡಳಿತ ಮಂಡಳಿನ ಬಾಕಿಯವು ದೊಡ್ಡ ಮೊನ್ಸರೇ. ಮನ್ಸೂ ದೊಡ್ಡದೇ. ಯಾವ ರಾಜಕೀಯನೂ ಇಲ್ಲದ ಒಳ್ಳ ಆಡಳಿತ ಮಂಡಳಿ. ಅಣ್ಣ ತಮ್ಮಂದರಾಂಗೆ ಇರುವ ಮಾಸ್ಟ್ರಗ. ಇಂತ ಸಾಲೆ ನಂಗೆ ಸಿಕ್ಕಿದ್ ನನ್ನ ಹಿರಿಯವು ಮಾಡ್ದ ಪುಣ್ಯಂದಂತ ಗ್ರೇಸಿಕಂಡಿದ್ದೊ ಗಣಪತಿ ಮಾಸ್ಟ್ರ. ಮಕ್ಕಳಿಗೂ ಮಾಸ್ಟ್ರಗಳ ಮೇಲೆ ಗೌರವ ಭಕ್ತಿ. ಕೊಡ್‌ಗ್‌ನ ಒಂದು ಹೆಸರುವಾಸಿ ಸಾಲೆಲಿ ವೃತ್ತಿ ಜೀವನನ ಕುಸೀಲಿ ಕಳ್ದ್ ಪಿಂಚಣಿ ಆದವು ಗಣಪತಿ ಮಾಸ್ಟ್ರ.

ಈಗ, ಭಾಗಮಂಡ್ಲ ಪೊಲೀಸ್ ಸ್ಟೇಸನ್‌ಗೆ ಹೋಕಲೆ, ಹಂಗೆ ಅಲ್ಲಿಗೆ ಹತ್ತ್ ಗಂಟೆಗೆ ಹೋದರೆ ಯಾರೂ ಇಲ್ಲೆ. ಒಬ್ಬ ಪೊಲೀಸ್ ಅಂಗಳಲಿ ಬಿಸ್‌ಲ್ ಕಾಸಿಕಂಡ್ ಉಟ್ಟು. 'ಇನ್ಸ್‌ಪೆಕ್ಟರ್ ಹತ್ತುವರೆಗೆ ಬರ್ತಾರೆ ಕುಳಿತುಕೊಳ್ಳೀ'ಂತ ಬೆಂಚಿನ ತೋರ್ಸಿತ್. ನಾನೂ ಮಗಳು ಕಾದ್‌ಕಂಡ್ ಕುದ್ದೊ. ಗಂಟೆ ಹತ್ತುವರೆ ಕಳ್ತ್, ಹನ್ನೊಂದು ಆದರೂ ಇನ್ಸ್‌ಪೆಕ್ಟರ್ ಕಾಂಬೊದುಲ್ಲೆ. ಏನ್ ಮಾಡಿಕೆ ಆದೆ, ಕಾದ್‌ಕಂಡ್ ಕುದ್ರದೆ ಉಪಾಯ ಇಲ್ಲೆ; ಹೆಣಪಾರ ಕಾದಾಂಗೆ ಕಾದದೇ ಕಾದದ್. ಅಂತೂ ಹನ್ನೆರ್ಡ್ ಗಂಟೆ ಕಳಿಯಕನ ಇನ್ಸ್‌ಪೆಕ್ತ್ರ ಜೀಪು ಬರ್ರನೆ ಬಾತ್. ಬಂದವು ನಮಸ್ಕಾರ ಮಾಡ್ರೂ ನೋಡಿ ನೋಡದಾಂಗೆ ಹೋಗಿ ಆಪೀಸ್‌ನ ಒಳಗೆ ಹೋಗಿ ಅವರ ಕುರ್ಚಿಲಿ ಕುದ್ದಾತ್. ಕೂಡ್ಲೇ ಒಳಗೆ ಹೋಕೆ

ಧೈರ್ಯ ಇಲ್ಲೆ. ಒಂದು ಕಾಲ್ ಗಂಟೆ ಕಳ್ದ್ ಆದ ಮೇಲೆ ಮೆಲ್ಲೆ ಒಳಗೆ ಹೋಗಿ ನಾನೂ ಮಗಳು ಪುನಾ ನಮಸ್ಕಾರ ಮಾಡ್ವೊ. ನಮಸ್ಕಾರಕ್ಕೆ ನಮಸ್ಕಾರ ಬುಡಿ ಕೈನೂ ಎತ್ತದೆ ಏನ್ ಬಂದದ್ದೂಂತ ಪೊಲೀಸ್ ಗತ್ತ್‌ಲಿ ಕೆಂಪು ಕಣ್ಣ್‌ನ ಹೊರ್ಡ್‌ಸಿ ಕೇಳ್ದೊ. 'ಸರ್ ನಾನು ಚೆಟ್ಟಳ್ಳಿ ಶಾಲೆಯ ರಿಟೇರ್ಡ್ ಟೀಚರ್, ನನಗೆ ತಮ್ಮಿಂದ ಒಂದು ಸಹಾಯ ಆಗ್‌ಬೇಕಿತ್ತು'ಂತ ಪೂರ ಹೇಳಿಕೆ ಮುಂದೇ "ನೀವು ಯಾರಾದ್ರೆ ನನಗೇನ್ರಿ, ನಾನಿಲ್ಲಿ ಕುಳಿತಿರೋದು ನಿಮಿಗೆ ಸಹಾಯ ಮಾಡ್ಲಿಕೆ ಅಲ್ಲಾ, ಕಾನೂನು ಪಾಲನೆಗೆ"ಂತ ಮೋರೆಗೆ ಹೊಡ್ದಾಂಗೆ ಹೇಳ್ದೊ. ಅಂತೂ ಬರ್‌ಕಂಡ್ ಬಂದ ಅರ್ಜಿನ ಕೊಟ್ಟ್, ಸುಮ್ಮನೆ ನಿತ್ತೊ. 'ಇವಳು ಎಲ್ಲಿ ಓದೋದು?'ಂತ ಕೇಳ್ಟಕ್ಕೆ 'ಪುತ್ತೂರು ವಿವೇಕಾನಂದ ಕಾಲೇಜಿನಲ್ಲಿ'ಂತ ಮಗಳು ಹೇಳ್ತ್. 'ಓ ಅಲ್ಲಿ ನೀನು ಏನು ಮಾಡಿದ್ದೀಯಾಂತ ಯಾರಿಗೆ ಗೊತ್ತು? ಅಲ್ಲಿಯ ಸ್ಟೇಷನಿಂದ, ಏನೂ ತಕರಾರಿಲ್ಲಾಂತ ಸರ್ಟಿಫಿಕೇಟ್ ತಂದ್ರೆ ನಾನಿಲ್ಲಿ ಸರ್ಟಿಫಿಕೇಟ್ ಕೊಡಬಹುದೂ'ಂತ ಹೇಳ್ಕನ ಇಬ್ಬರೂ ಕಂಗಾಲ್. ಈಗನ ಲೋಕದ ಅವಸ್ಥೆ ಗೊತ್ತಿದ್ದ ಗಣಪತಿ ಮಾಸ್ಟ್ರ ಕಾಣಿಕೆಂತ ಐನೂರರ ಒಂದು ನೋಟ್‌ನ ತೆಗ್ದ್ ಮೆಲ್ಲೆ ಮೇಜಿನ ಮೇಲೆ ಇಸಿದೊ. ಅದರ ನೋಡ್ದ ಮೊನ್ನ ಅದರ ಜೋಬಿಗೆ ಇಳ್ಸಿ, 'ಆಯುತು ನೀವು ನಾಳೆ ಬನ್ನಿ ನಾನು ಪುತ್ತೂರಿಗೆ ಫೋನ್ ಮಾಡಿ ವಿಚಾರಿಸ್ತೀನಿ'ಂತ ಹೇಳ್ದೊ. ಬೇರೆ ದಾರಿ ಕಾಣದೆ ಇನ್ನು ನಾಳೆ ಬಾದು, ನಾಳೆ ಆದರೂ ಕೆಲ್ಸ ಆಗಿದ್ದರೆ ಸಾಕಿತ್ತಂತ ಹೊರ್ಡಿಕೆ ನೋಡ್‌ಕನ, ಒಬ್ಬ ಪೊಲೀಸ್ ಹಕ್ಕಲೆ ಬಂದ್, 'ಸರ್ ನೀವು ಗಣಪತಿ ಮಾಸ್ಟ್ರ ಅಲ್ವೋ'ಂತ ಕೇಳಿ ಕಾಲ್ ಹಿಡ್ತ್. 'ಸರ್ ನಾನು ನಾಣಯ್ಯ ನಾಪೋಕ್ಲಿನಲ್ಲಿ ನಿಮ್ಮ ಸ್ಟೂಡೆಂಟ್'ಂತ ಹೇಳ್ತ್. ನಾವು ಬಂದ ಸಂಗ್ತಿನೆಲ್ಲಾ ಕೇಳಿ, ಇರಿ ಒಂದು ನಿಮಿಷ ಕುಳಿತಿರೀಂತ ಹೇಳಿ ಇನ್ಸ್‌ಪೆಕ್ಟರ್‌ರ ಹಕ್ಕಲೆ ಹೋಗಿ ಏನೋ ಹೇಳ್ತ್ ಕಂಡದೆ. ಕಾಲ್ ಗಂಟೆಲಿ ನಮ್ಮ ಕೆಲ್ಸ ಆತ್!

ಎಸ್.ಐ.ನ ಹಕ್ಕಲೆ ಕೆಲ್ಸ ಆಕರೆ ಹಿಂಗಾತ್, ಇನ್ನು ಎಸ್.ಪಿ.ಯವರ ಕೈಯಿಂದ ಸರ್ಟಿಫಿಕೇಟ್ ಹೆಂಗಪ್ಪಾ ಪಡಿಯೊದೂಂತ ಪೇಚಾಡಿಕಂಡೊ ಗಣಪತಿ ಮಾಸ್ಟ್ರ. ಮರ್ದಿನ ಎಸ್.ಪಿ. ಆಪೀಸಿಗೆ ಮಗಳ ಕರ್ಕಂಡ್ ಹೋಗದೆ ನಿಮ್ಮತ್ತಿ ಇಲ್ಲೆ. ಹೋದು ಹೋಕೆ, ಏನಾದೆ ನೋಡನೋ. ಒಂದು ಸಾವಿರ ರೂಪಾಯಿ ಆರೂ ಪೀಂಕೊಕಾದುಂತ ಗ್ರೇಸಿಕಂಡ್ ಹೋದೊ. ಹೋಕನ ಡಿ.ವೈ.ಎಸ್.ಪಿ. ಇದ್ದೊ. ನಮಸ್ಕಾರಕ್ಕೆ ಪ್ರತಿ ನಮಸ್ಕಾರನೂ ಸಿಕ್ಕಿತ್. ವಿಷಯ ಹೇಳ್ದರ ಕೇಳಿ

ಬೇರೊಂದು ಅರ್ಜಿ ಬರೆದು ಕೊಡೀಂತ ಹೇಳ್ದೊ. ಅರ್ಜಿ ಬರಿಯಕೆ ಹೊರಗೆ ಬಂದ್ ಬೆಂಚ್‌ಲಿ ಕುದ್ದ್‌ಕಂಡ್ ಬರಿಯಕೆ ನೋಡ್ಕನ ಡಿ.ವೈ.ಎಸ್.ಪಿ.ನೇ 'ಸರ್ ಇಲ್ಲಿ ಬನ್ನಿ ಇಲ್ಲಿ ಕುಳಿತುಕೊಂಡು ಆರಾಮವಾಗಿ ಬರೆಯಿರಿ'ಂತ ಹೇಳ್ದರ ಕೇಳಿ ನಂಬಿಕೆನೇ ಆತ್ಲೆ. ದೊಡ್ಡ ಅಧಿಕಾರಲಿ ದೊಡ್ಡ ಮನ್ಸ್‌ನ ಮೊನ್ಸರೂ ಇದ್ದವೆ ಅಲ್ಲಾಂತ ಗ್ರೇಸಿಕಂಡೊ. ಅಷ್ಟೊತ್ತಿಗೆ ಒಬ್ಬ ರೈಟ್ರ್ ಬಂದವ ನನ್ನ ನೋಡಿ 'ನಮಸ್ಕಾರ ಸರ್'ಂತ ಹೇಳಿ ಕಾಲ್ ಹಿಡ್ತ್. ನೋಡ್ರೆ ನನ್ನ ಚೆಟ್ಟಳ್ಳಿನ ಶಿಷ್ಯಾಂತ ಮೋರೆ ನೋಡ್ಕನ ಗೊತ್ತಾತ್. 'ಸರ್ ನಾನು ಚಂಗಪ್ಪ'ಂತ ಹೇಳಿ ಆಪೀಸರಿಗೆ ನನ್ನ ಗುಣಗಾನ ಮಾಡಿಕೆ ಮುಟ್ಟಿತ್. ಚೆಟ್ಟಳ್ಳಿ ಸಾಲೆನೂ ಎಸ್ಟೋ ಹೊಗ್‌ಳ್ತ್. ಹೆದ್ರಿಕಂಡ್ ಎಸ್.ಪಿ. ಆಪೀಸಿಗೆ ಬಂದವುಕೆ ಹೂ ಎತ್ತಿದಾಂಗೆ ಕೆಲ್ಸ ಆತ್. ಮಾಸ್ಟ್ರ ಆದ್ದ್ ಸಾರ್ಥಕಂತ ಗ್ರೇಸಿಕಂಡ್ ಕುಸಿ ಕುಸಿಲಿ ಮನೆಗೆ ಬಂದೊ.

* * * * *

# ಅಪ್ಪನ ಆಸ್ತಿ......ಅಪ್ಪನೇ......!?

ಬಲ್ದ ಪುಡೆಂದ ಎದ್ದ ಸೋಮಯ್ಯ ಮಾಸ್ಟ್ರ ತಮ್ಮ ಎರಡ್ ಅಂಗೈಗಳ ಜೋಡ್ಸಿ ನೋಡಿಕಂಡ್ 'ಕರಾಗ್ರೆ ವಸತೇ ಲಕ್ಷ್ಮೀಕರ ಮಧ್ಯೆ ಸರಸ್ವತೀ'ಂತ ಹೇಳುವ ಸ್ಲೋಕನ ಹೇಳೀ ಕಟ್ಲ್‌ಂದ ಮೆಲ್ಲೆ ಎದ್ದ್, ಅವ್ ಹೊದ್‌ಕಂಡಿದ್ದ ಕಂಬಳಿ, ಒಲ್ಲಿಗಳ ಮಡ್‌ಚಿಕಂಡ್ ಇರ್‌ಕನ ಬಾಡೆಂದ ಸಣ್ಣ ಮಕ್ಕಳ್ ಆಟ ನೆಗೆ, ಮಾತ್‌ಕತೆ ಕೇಳ್‌ತ್. ಆಗ ನೆನ್ನೆ ತಾನೆ ತನ್ನ ಮಕ್ಕ ಪಿಳ್ಳಿಕ ಎಲ್ಲಾ ಬಂದದ್ ಗೇನ ಬಾತ್.

ದೊಡ್ಡ ಬಾಡೆ ಅದಕೆ ಸರಿಯಾದ ಐಮರ, ನಾಲ್ಕ್ ದೊಡ್ಡ ದೊಡ್ಡ ಕೋಂಬರೆನ ಹಳೇ ಮನೆಲಿ ಒಂಟಿ ದೆವ್ವದಾಂಗೆ ಏಳೆಂಟ್ ವರ್ಸಂದ ಇದ್ದ ಸೋಮಯ್ಯ ಮಾಸ್ಟ್ರಿಗೆ ಮನೆ ಇಂದ್ ಪೂರಾ ಎತ್ಯಾಸ ಆದಂಗಾಗಿ ತನ್ನ ಮನೆನೇ ಹೊವ್ದೊ ಅಲ್ಲೋಂತ ಕಾಂಬಾಂಗೆ ಆತ್. ಮುಕ್ಕಾಲ್ ಸೆಂಚುರಿ ಬಾರ್‌ಸಿಕೆ ನಿತ್ತ ಸೋಮಯ್ಯ ಮಾಸ್ಟ್ರಿಗೆ ಈಗ ಮನೇಲಿ ಅತ್ತ ಇತ್ತ ಹೋಕೆ ಮೂರನೇ ಕಾಲ್ ಬೇಕಾದೆ. ಕಣ್ಣ್ ಸರಿ ಕಾಂಬೊಲ್ಲೆ, ತನ್ನ ಮನೆ ಆದರ್‌ಂದ ನೆಂಪುಲಿ ಓಡಾಡುವೆ. ಹಾಂಗೆ ಈಚೆ ಕೋಂಬರೆಗೆ ಬಾಕನ ಕಾಲ್‌ಗೆ ಚೆಂಡೋ ಗೊಂಬೆನೋ ಏನೇನೊ ಮಕ್ಕಳ ಆಟದ ಸಾಮಾನ್‌ಗ ಕಾಲಿಗೆ ಸಿಕ್ಕಿತ್. ಹಾಂಗೂ ಹೀಂಗೂ

ಮೆಲ್ಲೆ ಬಾತ್‌ರೂಮಿಗೆ ಹೋಗಿ ತನ್ನ ಬೊಳ್ಪುನ ಕೆಲ್ಸಗಳ ಮುಗ್ಸಿ ಬಂದ್ ಬಾಡೆಲಿ ತಾನ್ ಯಾಗೊಳು ಕುದ್ರುವ ಬೆತ್ತದ ಕುರ್ಚಿಲಿ ಕುದ್ದದೇ ಗೊತ್ತ್, ದೊಡ್ಡ ಸೊಸೆ ಬಿಸಿ ಬಿಸಿ ಕಾಪಿ ತಂದ್ ಕೊಟ್ಟತ್. ಜೋರು ಚಳಿ ಇರ್‌ಕನ ಮಾತ್ರ ಕಷ್ಟಲಿ ಕಾಪಿ ಕಾಸಿ ಕುಡೀತಿದ್ದ ಮಾಸ್ಟ್ರಿಗೆ ಇಂದ್ ಸೊಸೆ ಕೊಟ್ಟ ಕಾಪಿಲಿ ಹೊಸ ರುಚಿ ಕಂಡತ್. ಹೀಂಗೆ ನಂಗೆ ಯಾಗೊಳು ಸಿಕ್ಕಿರೆ ಎಷ್ಟ್ ಲಾಯಿಕ್ ಇತ್ತ್‌ಂತ ಮಾಸ್ಟ್ರ ಮನ್‌ಸ್‌ಲೇ ಗ್ರೇಸಿಕಂಡೊ. ಯಾಗೊಳಾದರೆ ತನ್ನ ಕಾಪಿ ತಿಂಡಿ ಹೊತಾರೆ ಒಂಬತ್ತುವರೆ– ಹತ್ತ್‌ಗಂಟೆಗೆ ಎಂಟುವರೆ– ಒಂಬತ್ತಕ್ಕೆ ತೋಟ ಕೆಲ್ಸಕ್ಕೆ ಬಾವ ಅಕ್ಕು ಹೆಂಗ್ಸ್ ಉಪ್ಪಿಟ್ಟೊ, ಅವ್‌ಲಕ್ಕಿನೊ ಮಾಡಿಕೊಟ್ಟದೆ. ಕುಸಿಯಾದ್ರೆ ಒಮ್ಮೊಮ್ಮೆ ದೋಸೆನೊ ರೊಟ್ಟಿನೊ ಮಾಡ್ದೊ ಉಟ್ಟು. ಕಾಪಿ ತಿಂಡಿ ಮಾಡಿ, ಮನೇನ ಗುಡ್‌ಸಿ, ಒರ್‌ಸಿ, ಮದ್ಯಾನ್ನದ ಅಡಿಗೆ ಮಾಡ್ದೆ. ಮದ್ಯಾನ್ನ ಉಂಡ್ ಒಳ್‌ದದ್ದ್ ಕತ್ತಲೆಗೆ. ಉಣಕೂಂತ ಕಂಡರೆ ಬಿಸಿ ಮಾಡಿ ಉಂಬೊದು, ಇಲ್ಲರೆ ದಿನಾ ಏಕಾದಸಿ!?

ಅಮೆರಿಕಾ, ಸಿಂಗಾಪುರಲಿ ಇರುವ ಮಂಜಂದರ್ ಮನೆ ಕಡೆ ತಲೆ ಮಡ್‌ಗದೆ ಐದಾರ್ ವರ್ಸ ಕಳ್ತ್. ಇಸ್ಟ್ ವರ್ಸ ಹೆಪ್ಪುಕಟ್ಟಿಕಂಡಿದ್ದ ಮೌನ ಮೆಲ್ಲೆ ಕರ್‌ಗಿದಾಂಗೆ ಕಂಡದೆ. ಓಂಗೆ ಯಾಗೊಳು ಇದ್ದರೆ ಎಸ್ಟ್ ಲಾಯಿಕಿತ್ತ್‌ಂತ ಮಾಸ್ಟ್ರಿಗೆ ಕಂಡದೆ. ಪಿಳ್ಳೆಕಳ ಆಟ ಬೊಬ್ಬೆ ನಗೆನೊಟ್ಟಿಗೆ ಯಾರ್ದೊ ಮಾತ್ ಕೇಳ್ದಾಂಗೆ ಆಗಿ ಮಗೊಳ್ ಬಾತೇನೊಂತ ಕುಸಿಲಿ 'ಪೂವೀ'ಂತ ಕರ್‌ದರೆ ಎರ್‌ಡ್ನೇ ಮಂಜ ಗಪ್ಪು 'ಏನಪ್ಪ ತಂಗೆನ ಕರ್‌ದರೆ ಅವ್‌ಳೆಲ್ಲಿ ಬಂದುಟು'ಂತ ಕೇಳ್ತ್. ಓ ಮಗೊಳು ಬಾತ್‌ಲೇಂತ ಮಾಸ್ಟ್ರ ಮೋರೆ ಚಪ್ಪೆ ಆತ್. ಆದ್ರೆ ಮಂಜನ ಅಮೆರಿಕ ಕಂಪೆನಿ, ಕೆಲ್‌ಸಗಳ ಇಚಾರ ಕೇಳ್ದೊ. ಈ ಪರ್ದೇಸಿ ಕಂಪೆನಿಗ ಕೆಲವರ್ನ ಮನೆಗೆ ಕಳ್‌ಸ್‌ತ್ತಾ ಒಳಗಡ, ನಿಂಗೆ ಏನೂ ತೊಂದರೆ ಇಲ್ಲೇಲಂತ ಕೇಳ್ದೊ. ಅಪ್ಪನ ಪ್ರಸ್ನೆಗೆ ಮಂಜ ನಂಗೇನೂ ಆಕಿಲ್ಲೆಂತ ಕಾಟಾಚಾರಕ್ಕೆ ಉತ್ತರ ಕೊಟ್ಟ್ ಅವನ ಕೋಂಬರೆಗೆ ಹೋತ್. ಮನೇ ತುಂಬ ಪಿಳ್ಳೆಕಳ ಆಟ ಬೊಬ್ಬೆ ನೆಗೆ, ಮಂಜ ಸೊಸೆಕಳ ಮಾತ್‌ಕತೆ ಕೇಳ್‌ತನೇ ಇತ್ತ್.

ತನ್ನ ಒಬ್ಬಳೇ ಒಬ್ಬೊಳು ಮಗೊಳ್ ಪೂವಮ್ಮ ಇನ್ನೂ ಯಾಕೆ ಬಾತ್‌ಲೆಂತೇಳುವ ಪ್ರಸ್ನೆ ಅಜ್ಜನ ಮನ್‌ಸ್‌ಲಿ ಕೊರಿತಾಯಿತ್ತ್. ಏಳ್ ವರ್ಸಗಳ ಹಿಂದೆ ಈ ನನ್ನ ಮಕ್ಕಳ ಅಮ್ಮ ಈ ಲೋಕ ಬುಟ್ಟ್ ಹೋದ ದಿನಗಳ ನೆನ್‌ಪಾತ್. ತನ್ನ ಮಂಜಂದರ ಮೇಲೆ ಮಡ್‌ಗಿರೆ ಕಕ್ಕೆ ಕಚ್ಚಿಕಂಡ್ ಹೋದು,

ಕೆಳ್ಗೆ ಮಡ್‌ಗಿರೆ ಪಿಜಿನ್ ಹೊರುದೂಂತ ಅಸ್ಟ್ ಪ್ರೀತೀಂದ ಮುತ್ತು, ರತ್ನಂತ ತನ್ನ ಪಿರಾಣಕ್ಕಿಂತಲೂ ಹೆಚ್ಚಿನ ಪ್ರೀತಿಲಿ ಸಾಂಕಿ ಸಲಹಿದ ಅಮ್ಮ ಸಾಯಕನ ಇಬ್ಬೊರು ಮಂಜಂದರೂ ಹಕ್ಕಲೆ ಇತ್‌ಲೆ, ಅಮ್ಮ ಇನ್ನ್ ಹೆಚ್ಚ್ ಸಮೆ ಇಲ್ಲೆ, ಒಮ್ಮೆ ಬಂದ್ ನೋಡಿಕಣೀಂತ ಪೋನ್ ಮಾಡ್ರೆ, ಈಗ ಬಂದರೆ ನಾವೇ ನಮ್ಮಕರ್ಚಿ ಹಾಕೊಂಡೊಕಾದೆ, ಬರುವ ವರ್ಸ ಬಂದವೆ, ಆಗ ಕಂಪೆನಿ ಕರ್ಚಿಲೇ ಬರಕ್‌ಂತ ದುಡ್ಡ್‌ನ ಮೋರೆ ನೋಡ್ರೊ. ಮಕ್ಕಳಿಗಾಗಿ ರಾತ್ರಿ ಬೊಳ್ಪು ಜೀವ ಸಮ್‌ದ ಅಮ್ಮನ ಮೋರೆ ನೋಡೊನೋಂತ ಮಂಜಂದರಿಗೆ ಅನ್‌ಸಿತಿಲ್ಲೆ. ಅಮ್ಮ ಹಾಸಿಗೆ ಹಿಡ್‌ದದ್ ಗೊತ್ತಾದಾಂಗೆ ಓಡೋಡಿ ಬಂದದ್ ಮಗಳ್ ಪೂವಿ. ಅಮ್ಮ ಆಸ್ಪತ್ರೆಲಿ ಇರ್‌ಕನ ಮುಟ್ಟ ತಿಂಗಳಗಟ್ಲೆ ಕಾಲೇಜಿಗೆ ರಜೆ ಹಾಕಿ ಸೇವೆ ಮಾಡ್ತ್, ಆದರೇನ್ ಮಾಡ್ದು ಯಾರಿಗೂ ಪುಣ್ಯ ಇತ್ಲೆ. ಆಗ ಮಾಸ್ಟ್ರ ಹಂಞ ಆರೋಗ್ಯಲಿ ಇದ್ದರ್‌ಂದ ಆಕಾದ ಕಾರ್ಯಬಾಗಗಳ ಊರವರ ಸಾಯಂದ ಏನೂ ತೊಡ್‌ಕಿಲ್ಲದೆ ಮಾಡಿ ಮುಗ್ಸಿದೊ. ಆ ಹದಿನಾರ್ ಕೊಲೆಗೆ ಕೂಡ್ಸ್‌ವಲ್ಲಿಗೆ ಮುಟ್ಟನೂ ಮನೆನ ಯಜಮಾನ್ತಿನ ಹಂಗೆ ಓಡಾಡಿ ಆಕಾದ ಕಾರ್ಯಗಳ ಎಲ್ಲಾ ಒಂದೂ ಬುಡದೆ ಮಾಡ್ದ್ ಪೂವಿ. ಅಂತ ಮಗಳ್ ಈ ಸಮೆಲಿ ಯಾಕ್ ಬಾತ್‌ಲೇಂತ ಚಿಂತೆಲಿ ಬಿದ್ದೊ ಅಜ್ಜ.

ಮಕ್ಕಳ ಅಮ್ಮ ಇರ್‌ಕನ ಮುಟ್ಟ ಈ ಮನೆಲಿ ಸುಕ, ಸಂತೋಸ, ಕುಸಿಗಿಸಿ ಎಲ್ಲಾ ಇತ್ತ್. ನಂಗೂ ಹೊತ್ತು ಹೊತ್ತಿಗೆ ಬೇಕಾದ್ದೆಲ್ಲಾ ಬೇಕಾದಂಗೆ ಸಿಕ್ಕ್‌ತಿತ್ತ್. ಉಂಬುಕೆ ತಿಂಬಕೆ ಬಾಯಿಗೆ ರುಚಿಯಾದ್ದದೆಕ್ಕೆಲ್ಲಾ ಯಾವ ತೊಂದ್ರೆನೂ ಇತ್ಲೆ. ತೋಟ, ಗದ್ದೆಂತ ಆಚೀಚೆ ಓಡಾಡಿಕೆ ಮೈಲಿ ತ್ರಾಣನೂ ಇತ್ತ್. ಮೊದುವೆಗಿದುವೆ, ಸಬೆ ಸಮಾರಂಬಗಳಿಗೆ ಹೋಗಿ ಬಾಕು ಆತಿತ್ತ್. ಈಗ ಆ ದೇವ್ರ್‌ಗೇ ಪ್ರೀತಿ. ಏನೋ ಪುಣ್ಯಕ್ಕೆ ಆ ಕೆಲ್ಸದ ಅಕ್ಕು ಇರ್‌ದರ್‌ಂದ ಒಪ್ಪೊತ್ತಾದರೂ ಹೊಟ್ಟೆ ತುಂಬಾ ಉಂಬಕೆ ಆದೆ. ಈ ಮಂಜಂದರ್‌ಂದ ನಾ ಪೊರ್ಲ್‌ಲಿ ಉಂಡಾಂಗೆ!? ಒಂದು ಕಾಗದ ಬರ್‌ದರೂ ಅದಕ್ಕೆ ಉತ್ತರ ಇಲ್ಲೆ. ಯಾಕೊ ಪುರುಸೊತ್ತೇ ಇಲ್ಲೆಗಡ! ಅವು ಆತ್ ಅವರ ಹೆಣ್ಣ್ ಮಕ್ಕ ಆತ್. ಕಳ್ದೊರ್ಸ ನಂಗೆ ಅಲ್ಸರ್ ಆಗಿ ಆಪರ್ಸನ್ ಆಕನೊ ಒಬ್ಬ ಮಂಜನೂ ಬಾತ್‌ಲೆ. ಆ ಸಮಿಲಿ ನಂಗೆ ಇದ್ದ್‌ದ್ ಮಗಳ್ ಪೂವಿ ಮಾತ್ರ. ಕೂಸುನಾಂಗೆ ನನ್ನ ನೋಡಿಕಂಡ್ ಚಾಕ್ರಿ ಮಾಡ್ದ್ ಅದ್. ಕಾಲೇಜ್‌ಲಿ ಸಿ.ಎಲ್. ಮುಕ್ತ್‌ಂತ ಸಂಬಳ ಇಲ್ಲದೆ ರಜೆ ಹಾಕಿ ಆಸ್ಪತ್ರೆ ಮನೇಂತ ನನ್ನ ಅಚ್ಚ್‌ಕಟ್ಟ್‌ಲಿ ನೋಡಿಕಂಡ್, ಮೆಲ್ಲೆ

ಓಡಾಡುವಾಂಗೆ ಆದ ಮೇಲೆ ತಾನೆ ಅವ್ಳು ಗಂಡನ ಮನೆಗೆ ಹೋದ್ದ್. ಹಾಂಗೆ ಹೋಕನ ತನ್ನ ಮನೆಗೆ ಬನ್ನೀಂತ ಎಷ್ಟೋ ಬೊಡ್‌ಕಂತ್. ನಾನೇ ಬೇಡಾಂತ ಕುದ್ದೆ. ಕೊಟ್ಟ ಹೆಣ್ಣ್ ಕುಲಕ್ಕೆ ಹೊರಗೆ, ಮಂಜಂದರ್ ಇಬ್ಬರಿದ್ದ್‌ನೂ ಮಗಳಲ್ಲಿಗೆ ಹೋದರೆ ಅಳಿಯ ಏನ್ ತಿಳ್‌ಕಣರೂ, ಅವ್ಳ ಅತ್ತೆ ಮಾವ, ಊರ್‌ನ ಜನ ಏನ್‌ಂತ ಹೇಳುವಂತ ನಾ ಹೋತ್ಲೆ.

'ಅಪ್ಪ ಬನ್ನಿ ಉಂಬಕೆ'ಂತ ದೊಡ್ಡ ಮಂಜ ರಾಜ ಕರ್‌ತ್ತ್. 'ಪೂವಿ ಬಾದುನೆ ಹಂಞ ನೋಡ್ನೊ'ಂತ ಹೇಳ್ದೊ ಮಾಸ್ತ್ರ "ಅದ್ ಇನ್ನೆಲ್ಲಿ ಬಂದದೆ, ಬಾದಾಗಿದ್ದರೆ ಇಷ್ಟೊತ್ತಿಗೆ ಇಲ್ಲಿ ಇರ್‌ತಿತ್ತ್, ನೀವು ಉಂಬಕೆ ಬನ್ನಿ, ಬಟ್ಲ್ ಇಸಿ ಆವುಟು ಎಲ್ಲವೂ ನೀವುಗೆ ಕಾದ್ ಕುದ್ದೊಳೊ"ಂತ ಹೇಳ್‌ಕನ ಬೇರೆನ್ ಮಾಡ್‌ಲಿಂತ ಉಂಬ ಕೋಂಬರೆಗೆ ಹೋದೊ. ಉಂಬ ಮೇಜದ ಮೇಲೆ ಮಟನ್ ಬಿರಿಯಾನಿ, ರೊಟ್ಟಿ, ಚಪಾತಿ, ಚಿಕನ್ ಕರಿ, ಕಬಾಬ್ ಎಲ್ಲಾ ನೋಡ್ದ ಮಾಸ್ತ್ರಿಗೆ ಆಸ್ಚರ್ಯ. 'ಬಾರಿ ಗಮ್ಮತ್ ಮಾಡ್‌ದಾಂಗೆ ಕಂಡದೆ'ಂತ ಹೇಳ್‌ಕನ ದೊಡ್ಡ ಸೊಸೆ 'ಹೌದ್ ಮಾಂವ ಎಲ್ಲಾ ಅಪೂರ್ಪಕ್ಕೆ ಸೇರಿಯೊಳಲ್ಲಾ'ಂತ ಹೇಳ್ತ್. ಇಬ್ಬರ್ ಸೊಸೆಕ ಬಾರೀ ಕುಸಿಲಿ ಎಲ್ಲವುಕೊ ಇಕ್ಕ್‌ತಾ ಇದ್ದೊ. ಆದ್ರೆ ಮಾಸ್ತ್ರ ಮನ್‌ಸ್ ಮಾತ್ರ ಮಗಳ್ ಪೂವಿನ ಗೇನ ಮಾಡ್ತಾ ಇತ್ತ್. ಹಬ್ಬದ ಅಡಿಗೆನ ಮಕ್ಕ, ಪಿಳ್ಳಿಕ ಎಲ್ಲವೂ ಬಾರಿ ಕುಸಿಲಿ ಉಂಬತ್ತಿದ್ದರೆ, ಇವುಕ್ಕೆ ಊಟನೇ ಸೇರ್‌ತ್ತ್ಲೆ. ಯಾರೇನಾರ್ ಗ್ರೇಸಿಕೆ ಬೊತ್ತಲಾಂತ ಕಣ್ಣ್ ಕಟ್ಟಿಗೆ ಉಂಡಾಂಗೆ ಮಾಡಿ ಕೈ ತೊಳ್ದೊ.

ಬಾಡೆಲಿ ಕುದ್ದಿರ್‌ಕನ ಸಣ್ಣ ಸೊಸೆ ಹಣ್ಣ್‌ಗಳ ತಟ್ಟೆನ ತಂದ್ ಮಡ್‌ಗಿತ್ ಕಿತ್ತುಳಿ, ಆಪ್‌ಲ್, ಚಿಕ್ಕು, ಬಾಳೆ ಏನೋ ಎಲ್ಲಾ ಹಣ್ಣ್‌ಗ. ಎಲ್ಲವೂ ಕುಸಿಲಿ ನೆಗಾಡಿಕಂಡ್ ಅವುಕೆ ಬೇಕಾದರೆ ತಕಂಡ್ ತಿಂಬೊತಿದ್ದೊ. ಮಾಸ್ತ್ರ ಮಾತ್ರ ಕಿತ್ತುಳಿನ ಎರ್ಡ್ ಎಸ್‌ಳ್ ತಕಂಡ್ ಬಾಯಿಗೆ ಹಾಕಿಕಂಡೊ. ಕಿತ್ತುಳಿನ ಹುಳಿ, ಸಿಂಯಿನ ಹೀಂಪಿಕಂಡ್ ನನ್ನ ಮುಂದೆನ ದಿನಗ ಬರೀ ಹುಳಿಯೊನೊಂತ ಚಿಂತೆಲಿದ್ದೊ. ಕಷ್ಟಕಾಕನ ಎಲ್ಲಾ ಬುಟ್ಟ್‌ಓಡೋಡಿ ಬರ್‌ತಿದ್ದ ಪೂವಿಗೆ ಈಗೆಂತ ಅಂತ ತಾಪತ್ರೆಂತ ಚಡಪಡ್‌ಸ್‌ತಿದ್ದೊ.

"ನಾಳೆ ಹೊತಾರೆ ನಾವೆಲ್ಲಾ ಹೊರ್‌ಡೊಕು. ನಾವ್ಗೆ ರಜೆ ಇಲ್ಲೆ. ನಾಳೆ ಕತ್ತಲೆಗೆ ಪ್ಲೈಟ್. ಈಗಳೆ ಗಂಟೆ ಮೂರುವರೆ ಆತ್. ಪಟ್ಟೆದಾರ ತಿಮ್ಮಯ್ಯಜ್ಜನ ಬಾಕೆ ಹೇಳಿಯೊಳೊ. ಆಚೆ ಮನೆ ಚಾಮಿ ಮಾಮ ಹೇಂಗೂ ಬಾದು. ಇನ್ನು

ಬೇರೆವು ಯಾಕೆ ನಮ್ಮ ಆಸ್ತಿನ ಪಾಲು ಪಟ್ಟಿಮಾಡಿಕೆ"ಂತ ಹೇಳ್‌ತ್ ದೊಡ್ಡ ಮಂಜ ರಾಜ.

ಪಟ್ಟೆದಾರ ತಿಮ್ಮಯ್ಯಜ್ಜ ಜಾಗದ ಆರ್.ಟಿ.ಸಿ. ಕಾಪಿ ತೋಟದಸಿ.ಆರ್.ಸಿ. ಎಲ್ಲಾ ತಕಂಡ್ ನೋಡ್‌ತಿತ್ತ್. ಹಾಂಗೆ ಎಲ್ಲಾ ನೋಡಿ ಹತ್ತ್ ಎಕ್ರೆ ಕಾಪಿ ತೋಟ, ಇನ್ನೂರು ಬಟ್ಟಿಗದ್ದೆ, ಬಾಣೆ ಆರ್‌ಎಕ್ರೆ ಇಷ್ಟೆ ತಾನೆ ನಿಮ್ಮ ಅಪ್ಪನ ಆಸ್ತಿ"ಂತ ಕೇಳ್‌ತ್ತ್. "ಈಗ ಇದರ್ಲಿ ಪಾಲೆಷ್ಟ್ ಎರಡೊ? ಮೂರೊ?ಂತ ಕೇಳ್ತ್ ಪಟ್ಟೆದಾರ. ಅಷ್ಟ್ ಕೇಳ್ದೇ ತಡ ಇಬ್ಬೊರು ಮಂಜದರ್ ಒಂದೇ ಉಸ್‌ರಿಗೆ "ಎರಡೇ"ಂತ ಹೇಳ್ದೊ. ಅದಕ್ಕೆ ಮಾಸ್ಟ್ರ ಮೆಲ್ಲೆ "ಮಗಳ್ ಪೂವಿಗೂ ಬರೀ ಎರ್ಡ್ ಎಕ್ರೆ ಕಾಪಿ ತೋಟನಾರ್ ಕೊಟ್ಟರೆ ಒಳ್ಳೆದಿತ್ತ್, ಈಗ ಹೇಂಗೂ ಹೆಣ್ಣ್ ಮಕ್ಕಳಿಗೂ ಹಕ್ಕುಟ್ಟುಗಡಲ್ಲಾ"ಂತ ಹೇಳ್ದೊ. ಅದ್‌ಕ್ಕೆ ದೊಡ್ಡ ಮಂಜ ರಾಜ "ಅದಕ್ಕೆ ಎಂತ ಪಾಲ್ ಹಂದಿ ಮಾಸನಾ? ಮೊದುವೆಲಿ ಕೇಜಿ ಕಟ್ಲೆ ಚಿನ್ನ ಹಾಕೊಳರಿ ಅಲ್ಲಾ, ಆಸ್ತಿಲಿ ಪಾಲ್ ಬೇಕಾರೆ ಕೋರ್ಟಿಗೆ ಹೋಗಲಿ"ಂತ ಹೇಳಿಬುಟ್ಟತ್. ತಮ್ಮ ಗಪ್ಪುನೂ ಅಣ್ಣ ಹೇಳ್ದೇ ಸೆರೀಂತ ತಲೆ ಮುಕ್ಕ್‌ಡ ಹಾಕಿತ್. ಪೇಚಾಟಲಿ ಸಿಕ್ಕಿದ ಮಾಸ್ಟ್ರ ಏನೂ ಹೇಳಿಕಾಗದೆ ಉಸುರು ತೆಗ್‌ತ್‌ಲ್ಲೆ. ಹಾಂಗೂ ಹೀಂಗೂ ಅಪ್ಪನ ಆಸ್ತಿ ಎರ್ಡ್ ಪಾಲಾತ್!?

ಮಾಸ್ಟ್ರ ಅಲ್ಲಿಂದ ಎದ್ದ್ ಮೆಲ್ಲೆ ಮೆಲ್ಲೆ ದೊಣ್ಣೆ ಊರಿಕಂಡ್ ಅಂಗಳಕ್ಕೆ ಇಳ್ದ್ ಕಾಪಿ ಕಣಲಿದ್ದ ಕಲ್ಲ್‌ಬೆಂಚಿನ ಮೇಲೆ ಕುದ್ದ್ ಆಕಾಸನೊಮ್ಮೆ ಮನೆನ ಒಮ್ಮೆ ನೋಡ್ದೊ. ತಾನ್ ಕಟ್ಟಿದ ಮನೆ, ಬಾಳಿ ಬೊದ್‌ಕಿದ ಮನೆ, ಮಕ್ಕೆಲ್ಲಾ ಹುಟ್ಟಿ ಬೆಳ್ದ್ ರೆಂಕೆ ಪುಕ್ಕ ಬಂದ ಮೇಲೆ ಹಾರಿ ಹೋದ ಮನೆ. ನಾಳೆಂದ ಈ ಮನೆ ಕಾಲಿಯೇ ಕಾಲಿ. ಅಪ್‌ರೂಪಕ್ಕೆ ಬಂದ ಮಂಜಂದರ್ ನಾಳೆ ಮನೆನ ಕಾಲಿ ಮಾಡಿ ಹೋದವೆ. ಇನ್ನ್ ನನ್ನ ಮನೆನೂ ಕಾಲಿ, ಮನ್‌ಸೂ ಕಾಲಿ ಕಾಲಿ!

ದಿನಂದ ದಿನಕ್ಕೆ ನನ್ನ ಬಿ.ಪಿ. ಸುಗರ್ ಏರ್‌ತಾ ಉಟ್ಟು, ಇನ್ನ್ ಹೆಚ್ಚಿ ದಿನ ನನ್ನ ಕಾಲ ಇಲ್ಲೆಂತ ಗ್ರೇಸಿದ ಸೋಮಯ್ಯ ಮಾಸ್ಟ್ರ, ಆಸ್ತಿನ ಪಾಲ್ ಮಾಡಿ, ಕಾರ್‌ಬಾರದ ಹೊರೆನ ಮಂಜಂದರ ಹೆಗ್‌ಲಿಗೆ ದಾಟ್‌ಸೊನಾಂತ ಪೋನ್ ಮಾಡಿ ಬಾಕೆ ಹೇಳ್‌ದ್ದೊ. ಯಾಗೊಳು ರಜೆ ಇಲ್ಲೆ ಹಾಂಗೆ ಹೀಂಗೆಂತ ಹೇಳ್‌ತಿದ್ದ ಮಂಜಂದರ್ ತಮ್ಮಗ್ರೇಕೆಗೆ ಮುಂದೆನೆ ಓಡೋಡಿ ಬಂದದರ ಕಂಡ್ ಮಾಸ್ಟ್ರಿಗೆ ಒಂದ್ ಕಡೆಂದ ಕುಸಿನೂ, ಇನ್ನೊಂದು ಕಡೆಂದ ಯೆತೆನೂ ಆತ್!?

ತಮ್ಮ ಮಗಳ್ ಪೂವಿಗೆ ಬರೀ ಎರ್ಡ್ ಎಕ್ರೆ ಕಾಪಿ ತೋಟನಾರ್ ಕೊಡೊಕೂಂತ ಮಾಸ್ತ್ರ ಗೇನ. ಆದರೆ ಅವುಳು ಮಾತ್ರ ಎರ್ಡೆರ್ಡ್ ಸತ್ತಿ ಫೋನ್ ಮಾಡಿ ಬಾಕೆ ಹೇಳಿರೂ ಯಾಕೆ ಬಾತ್ಲೆ? ಅದ್ ಯಾಕೆ ಬಂದದೆ. ಅದ್ಕೆ ಅದರ ಗಂಡ, ಮಕ್ಕಾಂತ ಅದರ್ದೇ ಲೋಕ ಇರ್‌ಕನ ಈ ಮುದಿಯ ಅಪ್ಪನ ಯಾಕೆ ಗೇನ ಆದೆ? ಯಾರಿಗೆ ಯಾರುನೂ ಇಲ್ಲೆ. ಈ ಲೋಕನೇ ಹಾಂಗೆ. ಎಲ್ಲಾ ಬರ್ಮೆ, ನಂಗೆನೂ ಮೊರ್ಲ್, ನಂಗೆ ಯಾರೂನೂ ಇಲ್ಲೇಂತ ಮಾಸ್ತ್ರ ತಲೆ ತೊರ್‌ಸಿಕಂಡ್ ಕುದ್ದೊ.

ಕತ್ತಲೆಗೆ ಮಲ್‌ಗಿರೆ ಮಾಸ್ತ್ರ್‌ಗೆ ಸುತರಾಂ ನಿದ್ದೆ ಬಾತ್ಲೆ. ಮನ್‌ಸ್‌ಲಿ ಎಂತೆಂತೋ ಗೇನಗ. ಕಳ್ದ ಕಾಲದ ನೆಂಪುಗ. ಮುಂದೆ ಹೇಂಗೋ ಏನೋಂತ ಚಿಂತೆ. ಮಂಜಂದರ್ ನನ್ನ ಒಟ್ಟಿಗೆ ಕರ್‌ಕಂಡ್ ಹೋವನೋ? ದೊಡ್ಡ ಮಂಜ ರಾಜ ಸಿಂಗಾಪುರಕ್ಕಾರ್ ಕರ್‌ಕಂಡ್ ಹೋದು. ಹೋದರೂ ನಂಗೆ ಪರ್ದೇಸಲಿ ಹೇಂಗೆ ಆದು? ಅಲ್ಲಿಗೆ ಈ ವಯಸ್ಲಿ ಹೊಂದಿಕಂಬೊದು ಹೇಂಗೆ? ಅಲ್ಲಿನ ಹವೆ, ನೀರ್, ಜನ ಎಲ್ಲ ಬೇರೆನೇ. ಹೋಗಿ ಬುಟ್ರೆ ಹೇಂಗಾರ್ ಹೊಂದಿಕಣಕು. ಕಾಲಕ್ಕೆ ತಕ್ಕ ಕೋಲ ಕಟ್ಟೊಕು. ಬೇರೆ ದಾರೀನೇ ಇಲ್ಲೆ.

ಹೊತಾರೆ ಎದ್ರ್‌ಕನ ಮಂಜದರ್ ಹೊರ್‌ಡುವ ಅಂಬೆರ್ಪುಲಿ ಇದ್ದೊ. ಸೊಸೆಕ ಅವರ ಸೂಟ್‌ಕೇಸ್‌ಗಳ, ಬೇಗ್‌ಗಳ ತುಂಬುಸ್ತ ಇದ್ದೊ. ಪಿಳ್ಳಿಕ ಮಾತ್ರ ಈ ದೊಡ್ಡವರ ಲೋಕನೇ ಮರ್ತ್, ಸಿಕ್ಕಿದಸ್ಟ್ ಹೊತ್ತು ಲಾಯಿಕ್‌ಲಿ ಆಡೊನೋಂತ ಕೊಟೆಗೆ, ಕಾಪಿ ತೋಟಗಳ್ಲಿ ಕಣ್ಣ ಮುಚ್ಚಾಲೆ ಆಡ್‌ತಾ ಇದ್ದೊ. ಆಗ ದೊಡ್ಡ ಮಂಜ ರಾಜ ಅಪ್ಪನ ಹಕ್ಕಲೆ ಬಂದ್ "ಅಪ್ಪಾ ನಾವು ಇನ್ನ್ ಒಂದರ್ದ ಗಂಟೆಲಿ ಹೊರ್ಟವೆ. ನೀವು ಒಬ್ಬನೇ ಇನ್ನ್ ಈ ಮನೇಲಿರ್ದು ಕಸ್ಟ, ಕತ್ತಲೆಗೆ ಒಬ್ಬನೇ ಹೆಂಗೆ ಇದ್ದರೆ. ಏನಾರ್ ಹೆಚ್ಚಿಕಮ್ಮಿ ಆದರೆ ಯಾರ್ ಒಳೊ ಹಕ್ಕಲೆ? ಅದಕೆ ನಾವು ಮೈಸೂರ್‌ಲಿ 'ವಾನಪ್ರಸ್ಥ'ಂತೇಳುವ ನಿಮ್ಮಂತ ಪ್ರಾಯದವರ ಆಸ್ರಮಲಿ ಎಲ್ಲಾ ಇಚಾರ್ಸಿ, ಬೇಕಾದ ಏರ್ಪಾಡ್ ಮಾಡಿ ಹೋದವೆ. ಅಲ್ಲಿ ಅಜ್ಜ ಅಜ್ಜಿಕಳ ಬಾರೀ ಲಾಯಿಕ್ ನೋಡಿಕಂಡವೆಗಡ. ಹಂಞ ಏನಾರ್ ಕಾಯಿಲೆ ಕಸಾಲೆ ಆದರೂ ಕೂಡ್ಲೇ ಡಾಕ್‌ಟ್ರ್ ಬಂದವೆಗಡ. ಉಂಬಕೆ ತಿಂಬಕೆಲ್ಲಾ ಮನೆಂದೂ ಲಾಯಿಕ್‌ಉಟ್ಟುಗಡ. ಈ ನಮ್ಮ ಆಸ್ತಿನೆಲ್ಲಾ ನಾವು ಇನ್ನೊಂದು ಆರ್‌ಮೂರ್ ತಿಂಗಳ್ಲಿ ಒಳ್ಳ ಗಿರಾಕಿ ಸಿಕ್ಕಿರೆ ಮಾರುವೆ. ರೆಸಾರ್ಟೊ, ಹೋಂ ಸ್ಟೇ ನೋ ಮಾಡುವ ಕೇರಳದವ್ಕೋ, ತಮಿಳ್‌ನವ್ಕೋ ಮಾರಿ ಬುಟ್ಟವೆ. ಅವು ಆದರೆ

ಒಳ್ಳ ದುಡ್ಡುನೂ ಕೊಟ್ಟವೆ. ನಮ್ಮ ಚಾಮಿ ಮಾಮ ಎಲ್ಲಾ ಏರ್ಪಾಡ್ ನಾ ಮಾಡ್‌ನೇಂತ ಹೇಳ್ಯುಟ್ಟು" ಅಣ್ಣನ ಮಾತ್ ಆಕನನೇ ಬಂದ್ ಕುದ್ದ ಗಪ್ಪು "ಅಣ್ಣ ಹೇಳ್‌ದಾಂಗೆ ಮಾಡ್ದು ಒಳ್ಳದ್ ಅಪ್ಪ, ನೀವುಗೂ ಯಾವ ತಾಪತ್ರೆ ಇಲ್ಲೆ ನಾವುಗೂ ಒಳ್ಳದ್"ಂತ ಮೆಲ್ಲ ಹೇಳಿ ಅಲ್ಲಿಂದ ಪುಕುಳಿಗೆ ಕಾಲ್‌ಕೊಟ್ಟತ್.

ತನ್ನ ಮಂಜಂದರ್ "ನೀವು ನಮ್ಮೊಟ್ಟಿಗೆ ಬನ್ನಿ ಅಪ್ಪ, ನಾವು ನಿಮ್ಮ ಬುಟ್ಟ್ ಹಾಕಿಕಿಲೆ, ಲಾಯಿಕ್‌ಲಿ ನೋಡಿಂಡವೆ"ಂತಒಂದು ಮಾತಿಗಾರ್ ಹೇಳ್‌ತ್ಲೆಲಾಂತ ಮಾಸ್ಟ್ರಿಗೆ ತುಂಬಾ ಬೇಜಾರ್ ಆತ್. "ನಮ್ಮ ಮಕ್ಕ ಎಲ್ಲರ ಹಾಂಗೆ ಅಲ್ಲ, ನಾವು ಅವ್ಕೆ ಸಣ್ಣದಿರ್‌ಕನ ತೋರ್ಸಿದ ಪ್ರೀತಿ, ಕೊಂಡಾಟ, ಅವರ ದೊಡ್ಡ ದೊಡ್ಡ ಓದಿಗೆ ಪಟ್ಟಪಾಡ್ ಇವೆಲ್ಲಾ ಗೊತ್ತಿದ್ದ ನಮ್ಮ ಮಕ್ಕ ನಮ್ಮ ಅಂತೂ ನಡು ನೀರ್‌ಲಿ ಕೈ ಬುಡಿಕಿಲೆ ನಾವು ಪಿಳ್ಳೆಕಳ ಆಡ್‌ಸ್ತಾ ಸಿಂಗಾಪುರಲೊ, ಅಮೆರಿಕಲೋ ಕುಸಿಲಿ ಇರಕ್‌ತ ಹೇಳ್ತಾ ಇದ್ದ ಹೆಣ್ಣ್‌ನ ಮಾತ್‌ಗ ಗೇನ ಆಗಿ, ಕಟ್ಟಿದ ಗಾಳಿಗೋಪುರಕ್ಕೆ ಬೇಜಾರ್ ಮಾಡಿಕಂಡ್ ಯಾರ್ಗೂ ಕಾಂಬಕೆ ಬೊತ್ತುಂತ ಕಣ್ಣ್ ನೀರ್‌ನ ಪೂಜಿಕಂಡೊ.

ಇದ್ದಕಿದ್ದಾಂಗೆ ಸ್ಕಾರ್ಪಿಯೋ ಕಾರೊಂದು ಅಂಗಳಲಿ ಬಂದ್ ನಿಂತದರ ಕಂಡ್ ಎಲ್ಲವುಕೂ ಆಸ್ಚರ್ಯ. ಮಾಸ್ಟ್ರ ಕಣ್ ಅರೆ ಮುಚ್ಚಿ ಕಾರ್‌ನ ಬಣ್ಣ ನೋಡಿ ಇದ್ ನಮ್ಮ ಪೂವಿದೇ ಇರೊಕೂಂತೇಳ್‌ಕನ ಪೂವಿ ಕಾರ್‌ಂದ ಇಳಿಯೊದು ಕಂಡತ್. ಮಗಳೊಟ್ಟಿಗೆ ಅಳಿಯನೂ. ನೆನ್ನೆ ಬರಕಾದ ಮಗಳ್ ಇಂದ್ಯಾಕೆ ಬಾತ್‌ಂತ ಮಾಸ್ಟ್ರ ಗೇನ ಮಾಡ್ದೊ. ಬಂದವ್ಳ್ ಅಣ್ಣ ಅತ್ತಿಗೆಕಳೊಟ್ಟಿಗೆ ಸುಖ ದುಃಖ ಇಚಾರ್‌ಸಿ, ಮಕ್ಕಳ ಎತ್ತಿ ಆಡ್ಸಿತ್. ಮನೆ ಎಲ್ಲಾ ಓಡಾಡ್ತ್, ಕಾಪಿಗೀಪಿ ಕುಡ್ದ್"ಅಪ್ಪ ನಿಮ್ಮ ಬಟ್ಟೆ ಬರೆಗೆಲ್ಲಾ ಎಲ್ಯುಟ್ಟು ಹೇಳಿ, ತಂದ ಮೊದ್ದು, ಮಾತ್ರೆ ಏನಾರ್ ಉಟ್ಟೋ ಅದೆಲ್ಲಾ ಈ ಬ್ಯಾಗ್‌ಗೆ ತುಂಬುಸೊಕು. ನಿಮ್ಮ ಈಗ ನಮ್ಮ ಮನೆಗೆ ಕರ್ಕಂಡ್ ಹೋಕೆ ಬಂದೊಳೆ. ಈಗ ನಂಗೆ ನನ್ನ ಅಪ್ಪನೇ ಆಸ್ತಿ!?" ಹೀಂಗೆ ಹೇಳ್‌ದ ಮಗಳ ಮೋರೆನೊಮ್ಮೆ ಅಳಿಯನ ಮೋರೆನೊಮ್ಮೆ ಮಾಸ್ಟ್ರ ಕಣ್ ಬಾಯಿ ಬುಟ್ಟ್‌ಕಂಡ್ ನೋಡ್ದೊ!?

* * * * *

## ಸೂರ್ಯ ಪಡುಲಿ ಮೂಡ್ತಾ ?!!!

ನಮ್ಮ ಹೇಮನ ನೋಡಿಕೆ ಇಂದ್ ನೆಂಟ್ರ್ ಬಂದವೆ, ಅವುಕೆ ಲಾಯಿಕ್‌ನ ಕಾಪಿ ತಿಂಡಿನಾರೂ ಕೊಡೊಕಲೆ, ಅದ್ ದೊಡ್ಡ ವಿಸ್ಯ ಅಲ್ಲಾ ನಮ್ಮ ಗೂಡೆ ಹೇಮನ ರೆಡಿ ಮಾಡ್ಸುದೇ ಬಂಗದ ಕೆಲ್ಸ. ಅಯ್ಯೆ ಆಗಿ ಪಾಡ್ ಪಡೊಕಲೆಂತ ಅಕ್ಕಯ್ಯಕ್ಕ ಪೇಚಾಡಿಕಂಡ್ 'ಹೇಮಾ ಬೇಗ ಲಾಯಿಕ್‌ಲಿ ರೆಡಿಯಾಗ್'ಂತ ಹೇಳ್ರೆ 'ಹೋಗಮ್ಮಾ ನಾ ರೆಡಿನೂ ಆದುಲ್ಲೆ ಮೊದುವೆನೂ ಆದುಲ್ಲೆ' 'ಛೆ ಎಂತ ಮಾತ್‌ಂತ ಆಡಿಯಾ ಮೊದುವೆ ಆದುಲ್ಲೇಂತ ಹೆಣ್ಣಾಗಿ ಹುಟ್ಟಿ ಹೇಳಿಕೆ ಆದೆನಾ?' 'ಅದೇ ಅಮ್ಮ ನಾ ಹೇಳ್ದು ಹೆಣ್ಣಾಗಿ ಹುಟ್ಟಿ ಮೊದುವೆ ಆಗದೆನೂ ಇರಕ್‌ಂತ ಜನಕ್ಕೆ ನಾ ತೋರ್ಸಿ ಕೊಟ್ಟನೆ.' 'ಏನ್ ಹುಚ್ಚು ಮಾತ್‌ನೆ ನಿಂದ್, ಯಾರಾರ್ ಕೇಳ್ರೆ ಏನ್ ಹೇಳುವೊ?' 'ಗಂಡ್‌ಬೀರಿ, ಬೀದಿ ಬಸ್‌ವಿ' 'ಎಂತದ್‌ನೆ ಬಾಯಿಗೆ ಬಂದಾಂಗೆ ಮಾತಾಡಿಯಾ? ಗೂಡೆಗಳಿಗೆ ಇಂತ ಹಟ ಇರಿಕೆ ಆಗದ್; ಕಾಲೇಜ್ ಗೀಲೇಜ್ ಓದಿ ಇದೆನೋ ನೀ ಕಲ್‌ತದ್?' 'ಹೌದಮ್ಮ ಕಾಲೇಜ್ ಮೆಟ್ಲ್ ಹತ್ತಿದರ್‌ಂದಲೇ ನಂಗೆ ಲೋಕ ಜ್ಞಾನ ಬಂದದ್, ಈವರೆಗಿನ ಬೊದ್ಕ್ ನಂಗೆ ಪಾಠ ಕಲ್ಸಿಟ್ಟು'. 'ಏನ್ ನಿಂಗೆ ಬೊದ್ಕ್ ಪಾಠ ಕಲ್ಸಿದ್?

ಬಾರಿ ವಯಸಾದವರಂಗೆ ಬೊದ್ಕ್‌ನ ಬಗ್ಗೆ ಮಾತಾಡಿಯಲ್ಲಾ ಲೋಕ ಹೇಂಗೆಂತ ಇನ್ನು ನೋಡೊಕಸ್ಟೆ, ಸಾಕ್ ನಿನ್ನ ತಲೆ ಹರ್ಟೆ. ಎದ್ರ್ ಹೋಗಿ ಲಾಯಿಕ್‌ಲಿ ರೆಡಿಯಾಗ್, ಹಟ ಮಾಡ್ಬಡ. ನಿನ್ನ ಉರಿ ಮುಸುಂಡ್‌ನ ಬುಟ್ಟ್ ಪೊರ್ಲುಲಿ ನೆಗಾಡಿಕಂಡ್ ಇರ್. ನಿನ್ನ ಕೈ ಹಿಡಿಯಂವ ಇದ್ದೇ ಇದ್ದದೆ. ದೇವ್ರ್‌ಗೆ ಕಣ್ಣಿಲ್ಲೆನಾ?'

'ದೇವ್ರ್‌ಗೆ ಕಣ್ಣ್! ಹ......ಹ......ಹ......ಹ...... ದೇವ್ರ್‌ಗೆ ಕಣ್ಣಿದ್ದರೆ ಲೋಕಲಿ ಯಾಕಿಸ್ಟ್ ಕಸ್ಟ? ಏನ್ ಮಾಡ್ದು ಅಮ್ಮನ ಸಮಾಧಾನಕ್ಕಾರೂ ವೇಸ ಕಟ್ಟಿನೆ.' ಕೈ ಕಾಲ್ ಮೋರೆ ತೊಳ್‌ಕಂಡ್ ಬಂದ್ ಮೇಕಪ್ ಮಾಡಿಕೆ ಕನ್ನಡಿ ಮುಂದೆ ನಿತ್ತತ್ ಹೇಮ. 'ಥತ್ ಈ ಕನ್ನಡಿ ನನ್ನ ಮೋರೆನ ಪೊರ್ಲುಲಿ ತೋರ್‌ಸ್ತಾ ಉಟ್ಟಲ್ಲಾ! ನನ್ನ ಮೋರೆ ನಂಗೆ ಮಾತ್ರ ಪೊರ್ಲು ಕಾಂಬೊದು ಹೇಂಗೆ? ನನ್ನಸ್ಟ್ ಪೊರ್ಲು ಸಾಲ್‌ದಾ ಮೊನ್ನರಿಗೆ? ಬಂದವು ಎಲ್ಲಾ ಏನಾರ್ ಸೂನೆ ಹೇಳಿಕಂಡ್ ಹೋದವೆ ಅಲ್ಲಾ? ಇಂದ್ ಒಬ್ಬ ಹೊಸ್ಬ ಬಂದದೆ ಗಡ, ಹತ್ತೊರೊಟ್ಟಿಗೆ ಹನ್ನೊಂದು ಹೂಂ.... ಇಂವ ಹೇಂಗುಟ್ಟೋ ಏನ್ ಹೇಳ್‌ದೆನೊ ನೋಡೊಕು? ಈ ಹೈದಂಗ ನನ್ನ ಪರೀಕ್ಸೆ ಮಾಡಿಕೆ ಬಂದವೆಗಡ, ಇನ್ನು ನಾನೇ ಇವರ ಪರೀಕ್ಸೆ ಮಾಡ್ದು'!?

ಈ ಹಿಂದೆ ಬಂದು ಹೋದವರ ಕತೆಗೆಲ್ಲಾ ಲಾಯಿಕ್‌ಲಿ ನೆನ್ಪುಟ್ಟು. ಒಬ್ಬ ಬಂದಿತ್ತ್ ಗುಜ್ಜಾನೆ ಮೊರಿನಾಂಗೆ ಕುಳ್ಳಂಗೆ ದಪ್ಪಂಗೆ ನನ್ನ ನೋಡಿ ಜೊಲ್ಲು ಸುರ್ಸಿಕಂಡ್ ಇತ್ತ್. ವಯಸ್ಸೋ ನನ್ನ ಡಬ್ಬಲ್! ನಾನೇ ಆಕಿಲ್ಲೇಂತ ತಲೆ ಆಡ್ಸಿದೆ. ಮತ್ತೊಬ್ಬ ಬಂದಿತ್ತ್ ಸಿನಿಮಾ ಹೀರೋಗಳಾಂಗೆ, ತಲೆ ಕುರುಬರಾಂಗೆ ಹರ್‌ಂಡಿಕಂಡ್! ಅರ್ಧಂಬರ್ಧ ಗಡ್ಡ, ಬೋಳು ಮೀಸೆ. ಅವಂಗೆ ಡಾಕ್ಟ್ರ ಓದ್ಸುವ ಮಾಂವ ಬೇಕ್ ಗಡ! ಇನ್ನೊಬ್ಬಂಗೆ ಅಮೆರಿಕಕ್ಕೆ ಓದ್ಸಿಕೆ ಕಳ್ಸೊಕು ಗಡ. ಡೌರಿ ಹತ್ತ್ ಲಕ್ಷ, ಹದ್ನೈದ್ ಲಕ್ಷ ಕೊಡೀಂತ ಕೇಳವು, ಕೇಜಿಗಟ್ಲೆ ಚಿನ್ನನ ಡಿಮಾಂಡ್ ಮಾಡೊವು. ಬೆಂಗಳೂರ್‌ಲಿ ದೊಡ್ಡ ಛತ್ರಲಿ ಗೌಜಿಲಿ ಮೊದುವೆ ಮಾಡಿಕೊಡೀಂತ ಕೇಳೊವು ಏನೇನೊ ಜನಂಗ. ಇನ್ನು ಕೆಲವುಕೆ ಓದಿದ ಗೂಡೆ ನಮ್ಮ ತೋಟ ಗದ್ದೇಲಿ ಕೆಲ್ಸ ಮಾಡಿಕಲ್ಲೆಂತ. ಮತ್ತೊಂದು ಕಡೆವುಕೆ ಗೂಡೆ ಓದಿದ್ ಹೆಚ್ಚಾತ್ ನಮ್ಮಂವ ಎಸ್.ಎಲ್.ಸಿ.ಂತ, ಗೂಡೆ ಬೆಳ್ಳಂಗೆ ಏನೋ ಉಟ್ಟು ನಮ್ಮ ಹೈದನ ಕಲರಿಗೆ ಸಾಲ್ದ್. ಗೂಡೆ ಬರೀ ಸಪೂರಂತ, ದಪ್ಪಾಂತ, ಉದ್ದಾಂತ, ಗುಡ್ಡೂಂತ ಏನೇನೊ ಸೂನೆಗ. ಒಲ್ಲದವುಕೆ ಮೊಸರ್‌ಲಿ

ಕಲ್ಲ್! 'ನಮ್ಮ ಮಗಳಿಗೆ ಹೈದನ ಹುಡ್ಕಿ ಕೊಟ್ಟರೆ ನಿಮ್ಮ ಗೂಡೆನ ತಕಂಡ್ ಹೋದವೆ', 'ನನ್ನ ತಂಗೆಗೆ ಮೊದುವೆ ಆಗದೆ ನಾ ಮೊದುವೆ ಆದುಲ್ಲೆ' 'ನಮ್ಮದ್ ಎದ್‌ರ್ ಎದ್‌ರ್ ಆದರೆ ಆದು'. ನಂಗೆ ಕೆಲ್ಸ ಕೊಡ್ಸಿರೆ ನಾ ಮೊದುವೆ ಆನೆ' 'ನಾವುಗೆ ಕೆಲ್ಸಲಿ ಇರುವ ಗೂಡೆನೇ ಆಕು.' 'ನಾ ಏನೋ ಅಯ್ಯೆ ಅಪ್ಪನ ಒತ್ತಾಯಕ್ಕೆ ಗೂಡೆ ನೋಡಿಕೆ ಬಂದದ್ ನಂಗೀಗ ಮೊದುವೆ ಬೇಡ' 'ಗೂಡೆನ ಕಡೆವು ನಮ್ಮ ಸ್ಟೇಂಡರ್ಡ್‌ಗೆ ಸಾಲ್ದ್' 'ನಮ್ಮ ಮನೆತನಕೆ ಹೇಳ್ದ ನೆಂಟ್ರ್ ಅಲ್ಲಾ' ಹೀಂಗೆ ಏನೋ ಎಲ್ಲಾ ಸಬೂಬುಗ. ಕೆಲವುಕೆ ಇರ್ಲ್ ಹುಟ್ಟಿದ್ ಆಗದ್, ಹಗಲ್ ಹುಟ್ಟಿದೂ ಆಗದ್. ಜಾತಕ ಸೆರಿ ಬಾತ್ಲೆ, ಗಣಕೂಟ ಸೆರಿ ಇಲ್ಲೆ ಏನೇನೊ, ಕೆಲವು ಹೈದಂಗಳಿಗೆ ಗೂಡೆಗಳ ನೋಡ್ದು ಒಂದು ಚಟ, ನೋಡಿ ನಾಳೆ ಹೇಳ್ನೆ ನಾಡ್ದ್ ಹೇಳ್ನೇಂತ ಹೇಳಿ ಹೋದವರ್ದ್ ಸುದ್ದಿನೇ ಇರ್ದುಲೆ. ಅಂತೂ ನಾಟಕನೆ ನಾಟಕ!?

'ಹೇಮಾ ರೆಡಿ ಆಗ್ತಾ ಒಳನಾ' 'ಹಾಂ ಅಮ್ಮ ಇನ್ನು ತಲೆ ಬಾಚಿ ಕಂಡರೆ ಆತ್' ಮತ್ತೆ ಒಂದು ಸೀರೆ ಉಡುದು ಮಾತ್ರ,' ಹಂಜ ಹೊತ್ತಮ್ಮ ನಾ ರೆಡಿನೇ'

ಯಾವ ಸೀರೆ ಉಡಲಿ? ಸೀರೆನೇ ಯಾಕೆ ಉಡೋಕು ಬಟ್ಟೆ ಅಂಗಡಿನ ಬೊಂಬೆಗಳಾಂಗೆ? ಚೂಡಿದಾರ ಹಾಕಿರೆ ಏನಾದೆ? ಆದರೆ ಅಮ್ಮ ನನ್ನ ಬ್ಯೊದ್ ಇಸಿಕಿಲ್ಲೆ. ಯಾದಾರ್ ಸೀರೆನೆ ಉಡೊನೊ. ಯಾವೊದೊ ಹೈದಂಗೆ ನಾ ಈಗ ಸೀರೆನ ಸಿಲೆಕ್ಟ್ ಮಾಡೊಕು. ಬಾಕಿ ಬಂದ್ ಹೋದ ಹೈದಗಳಾಂಗೆ ಇವನೂ ಒಬ್ಬ! ಕೈಗೆ ಸಿಕ್ಕಿದ ಸೀರೆನ ಉಟ್ಟ್‌ಕಂಡರೆ ಈ ಅಮ್ಮ ಉಟ್ಟಲ್ಲಾ, ಬಂದ್ ಬೊಂಬ್ಡಿ ಹೊಡ್ದ್ ಆ ಸೀರೆ ಇಲ್ಲೆನಾ, ಈ ಸೀರೆ ಇಲ್ಲೆನಾ, ಈ ಹಾಳ್ ಸೀರೆ ಯಾಕೆ ಉಟ್ಟುಕಂದ್‌ಂತ ರಾದ್ಧಾಂತ ಮಾಡ್ದು. ಈ ಗೂಡೆ ನೋಡುವ ನಾಟಕಕ್ಕೆ ನನ್ನ ಪಾರ್ಟ್ ಲಾಯಿಕ್‌ಲಿ ಆಕೊಲೆ!? ಓ. . . ಸಿಕ್ಕಿತ್ ಈ ಮೊರೂನ್ ಸಿಲ್ಕ್ ಸೀರೆ. ಕಳ್ದ ವರ್ಸ ಅಪ್ಪ ಮೈಸೂರ್‌ಂದ ತಂದದ್. ಇದೇ ಆದು. ಅಂದ್ ತಂದ ಸುರೂಲಿ ಈ ಸೀರೆನ ಉಟ್ಟ್‌ಕಂಡ್ ಯಾರ್‍ದೊ ಮೊದುವೆಗೆ ಹೋದರೆ ಎಲ್ಲವೂ ನನ್ನ ತಿರ್‍ಗಿ ತಿರ್‍ಗಿ ನೋಡೊವೆ. ಹೆಂಗಸ್‌ಗಳೊ ಹೊಟ್ಟೆಕಿಚ್ಚಿಲಿ ಬಾಯಿಗೆ ಬಂದಾಂಗೆ ಮಾತಾಡ್‌ತ್ತಿದ್ದೊ. 'ಒಳ್ಳ ಕುದುರೆನಾಂಗೆ ಬೆಳ್‌ದುಟ್ಟು ನೋಡಿ, ಇನ್ನೂ ಮೊದುವೆ ಆತ್ಲೆ'. 'ಇದ್ ಪ್ರಾಯಕೆ ಬಂದ್ ನಾಲ್ಕೋ ಐದ್ ವರ್ಸ ಆತ್, ಇನ್ನೂ ಗಂಡ್ ಹುಡ್‌ಕ್‌ತನೇ ಒಳೊ'. ಇದರ ಪ್ರಾಯಲಿ ನಂಗೆ ಎರ್ಡ್ ಮಕ್ಕ ಹುಟ್ಟಿಯೊಳೊ.' 'ಈ ಲೋಕಲಿ ಇದರ ಮೊದುವೆ ಆವ ಹೈದ ಹುಟ್ಟಿತನೇ

ಇಲ್ಲೆನೋ.' 'ಈ ಗೂಡೆಗೆ ನಾನೊಂದು ಸುರಸುಂದರೀಂತ ಹೆಮ್ಮೆ. ಮೊನ್ನೆ ಯಾವುದೋ ಒಂದು ಹೈದ ನೋಡಿಕೆ ಬಂದಿತ್ತ್‌ಗಡ, ಈ ಗೂಡೆನೆ ಅಂವ ಲಾಯಿಕಿಲ್ಲೆ, ಬೇಡಾಂತ ಹೇಳ್ತ್ ಗಡ!' 'ಇದಕ್ಕೆ ಮುಂಡಾಸ್‌ನವ ಬಾದೊಲ್ಲೆ, ಮೊಡ್ಪಳೆನವ ಬೇಡ'ಂತ ಹೇಳುವಾಂಗೆ ಆಗುಟ್ಟು. 'ಯಾರೋ ಫ್ರೆಂಡ್ ಗಡ, ಅವನೊಟ್ಟಿಗೆ ಆಗಾಗ ಸಿನೆಮಾಕ್ಕೆ ಹೋದೆಗಡ' 'ಒಂದು ದಿನ ಮನೆಲಿ ಚೀಟಿ ಬರ್ದ್ ಇಸಿ ರಾತೋ ರಾತ್ರಿ ಯಾರೊಟ್ಟಿಗಾರ್ ಪದ್ರಾಡ್ ಹಾಕದ್ದರೆ ಸಾಕ್' ಇನ್ನು ಏನೇನೋ ಎಲು ಇಲ್ಲದ ನಾಲಿಗೆ ಹೇಂಗೆ ಹೇಂಗೋ ಉರ್ಳ್ಯಾಡ್‌ತ್ತಿತ್ತ್. 'ಪೇಟೆ ಬಾಮಿಗೆ ಹುಲಿ ಬಿದ್ದರೆ ಆಳಿಗೊಂದು ಕಲ್ಲ್'!?

'ಹೇಮಾ ಇನ್ನೂ ಆತ್ಲೇನೆ ಹೊರ್ಪ್, ಹೈದನ ಕಡೆವು ಬಾಕೆ ಆತ್'

'ಎಂತಮ್ಮ ನಿಂದ್ ಅರ್ಜೆಂಟ್, ಆತ್, ಆತ್, ಸೀರೆ ಉಟ್ಟು ಎಲ್ಲ ಆತ್. ಮೋರೆಗೆ ಒಂದು ಫೈನಲ್ ಟಚ್ ಕೊಟ್ರೆ ನಾ ರೆಡಿ'

'ಆತ್ ಬೇಗ ರೆಡಿಯಾಗ್, ನಂಗೆ ಅಡಿಗೆ ಕೋಣೆಲಿ ಹಂಞ ಕೆಲ್ಸ ಉಟ್ಟು ನೀ ಬೇಕೋ ಬೇಡೊಂತ ಹೊತ್ತು ಮಾಡ್‌ಬಡ. ಸದ್ಯ ಈ ಸತ್ತಿ ಬಾವ ನೆಂಟ್ರಾದರ್ ಒಪ್ಪಿಕಂಡ್ರೆ ಸಾಕ್. ದೇವ್ರ್ ಒಮ್ಮೆ ಕಣ್ಣ್ ಬುಡಲಿಯಪ್ಪಾ'

'ಓ ಒಪ್ಪುದು, ನಾ ಅಂಗ್ಡಿ ಸಾಮಾನ್, ಅಂವ ಗಿರಾಕಿ. ನನ್ನ ಅಪ್ಪ ಅಮ್ಮ ಅಂಗ್ಡಿ ಇಸಿದೊವು. ಹೂಂ ನಡೆಯಲಿ ಯಾಪಾರ, ಈ ಗಿರಾಕಿನೂ ಬಂದ್ ಸಾಮಾನ್‌ನ ನೋಡಿಕಂಡ್ ಹೋಗಲಿ. ಕರೆಕನ ಕಾಪಿ ಟ್ರೇ ಹಿಡ್ಕಂಡ್ ಹೋದು. ಅವರ ಮುಂದೆ ಪ್ರದರ್ಸನಕ್ಕೆ ಕದುರ್ದು. ಮತ್ತೆ ಇಂಟ್ರೆವ್ಯೂ, ಕೇಳ್ದ ಪ್ರಸ್ನೆಗೆ ಉತ್ತರ ಕೊಡೊಕು, ಮಾಲ್ ಸಾದಾರಣ ಅಕ್ಕ್‌ತಾದರೆ ಮತ್ತೆ ಚೌಕಾಸಿ ಸುರು'.

ಅಕ್ಕಯ್ಯಕ್ಕನ ಮನ್‌ಸ್‌ಲಿ ಪೇಚಾಟವೇ ಪೇಚಾಟ. ಇಂದ್ ಬಾವ ಹೈದ ಆದರೂ ಒಮ್ಮೆ ಒಪ್ಪಿದ್ದರೆ ಸಾಕಪ್ಪಾ. ಅವು ಕೇಳ್ದಸ್ಟ್ ಡೌರಿನ ಸಾಲ ಸೋಲ ಮಾಡಿಯಾರ್ ಕೊಡ್ದು. ಬೇರೆ ದಾರಿ ಇಲ್ಲೆ, ಹೆಂಗಾರ್ ಮಾಡಿ ಇದರ ದಾಟ್ಸೊಕೆ. ಜನ ಎಲ್ಲಾ ಒಬ್ಬೊಬ್ಬ ಒಂದೊಂದು ಬಾಯಿಗೆ ಬಂದಾಂಗೆ ಮಾತಾಡುವೆ. ಈಗ ಇರ್ದು ಹೈದ ಒಪ್ಪಿರೂ ಈ ಹೇಮನ ಒಪ್ಪುಸೊಕಲೆ. ನಂಗೆ ಮೊದುವೆನೇ ಬೇಡ, ಹಂಗೆ ಇದ್ದನೆ. ಮೊದುವೆ ಆಗದ ಹೈದಂಗ ಇದ್ದವೆ ಗಡ, ಗೂಡೆಗ ಹಂಗೆ ಇರಿಕೆ ಬೊತ್ತೂಂತ ಕೆಳಿಕೆ ಸುರು ಮಾಡಿಟ್ಟು. ಒಟ್ಟ್‌ಲಿ ನಮ್ಮ ಗ್ರಾಚಾರ ಎಸ್ಟೋ ಜನ ಹೈದಂಗ ಬಂದ್ ಏನೋ ಎಲ್ಲಾ ಇದ್ದದ್ ಇಲ್ಲದ್ ಎಲ್ಲಾ ಸೂನೆ ಹೇಳಿಕಂಡ್ ಹೋದವೆ. ಅದರ್‌ಂದ ಗೂಡೆಗೆ ಬೇಜಾರ್ ಆಗಿ ಹೋಗುಟ್ಟು.

ಅದಕ್ಕೇ ಮೊದುವೆನೇ ಬೇಡಾಂತ ಮೊಂಡುತನ ಮಾಡ್ತಾ ಉಟ್ಟು. ಇಂದ್ ಅದರ ಹೊರ್‌ಡ್‌ಸಿಕೆ ನಂಗೆ ಸಾಕ್ ಬೇಕಾಗುಟ್ಟು. ಒಲೆಲಿ ಇಸಿದ ಹುಗ್ಗೆ ಕೊದಿವಾಂಗೆ ಅಕ್ಕಯ್ಯಕ್ಕನ ಮನ್‌ಸ್ ತಳ ಮಳ ಆಗ್‌ತ್ತಾ ಇತ್ತ್.

'ಹೇಮಾ ನೆಂಟ್ರ್ ಬಂದೊನೇ, ನೀ ರೆಡಿನಾ'

'ನಾ ರೆಡಿ ಅಮ್ಮಾ, ಎಲ್ಲ ಆತ್, ನೀ ಕರಿಯಕನ ಹಾಜರ್' ಸಾಕಪ್ಪಾ ಸಾಕ್, ಇದೇ ಆಕೇರಿ ಇಂಟ್ರ್ಯೂ, ಇನ್ನು ಖಂಡಿತಾ ಈ ಪ್ರದರ್ಶನಕೆ ಹೋದೇ ಇಲ್ಲೆ. ಇನ್ನು ಇವನ ಡಿಮಾಂಡ್ ಏನೋ ನೋಡ್ನೊ. ಎಸ್ಟ್ ಲಕ್ಷನೋ. ಚಿನ್ನ ಎಸ್ಟ್ ಬೇಕೋ? ಫಾರಿನ್‌ಲಿ ಓದ್‌ಸೊಕೊ? ಗೂಡೆ ಸಪೂರಾತ್. ಕಲರ್ ಹಂಞ ಕಮ್ಮಿ! ಇನ್ನು ಏನೇನೋ ಗೊತ್ಲೆ!

ಜ್ಯೂಸ್ ತಕಂಡ್ ಬಾಮ್ಮ, ಸುರು ಅವುಕೆ ಕೊಡು, ನಾಚಿಕೆ ಪಡ್ಬಡ'

(ನಾಚಿಕೆ, ನಾಚಿಕೆನ ಯಾಗೊಳೋ ಹೊಡ್ದ್ ಓಡ್‌ಸಿಯೊಳೆ, ಆದರೂ ಒಂಚೂರಾರ್ ತಲೆ ಬೊಗ್ಗಿಕಂಡ್ ಇರೊಕಲೆ)

'ತಲೆ ಹಂಞ ಎತ್ತಮ್ಮ; ಹೈದ ಲಾಯಿಕ್ ನೋಡಲಿ ನಿನ್ನ'

(ಹೈದ ಮಾತ್ರ ಯಾಕೆ, ಎಲ್ಲವೂ ನೋಡಲಿ. ಲೋಕಲಿರುವ ಹೈದಂಗೆಲ್ಲಾ ನೋಡಲಿ)

(ಅರೆ ನನ್ನ ನೋಡಕಾಂದವನೇ ತಲೆ ಅಡಿಗೆ ಹಾಕಿ ಕುದ್ದುಟಲ್ಲಾ? ಇದೊಂದು ವಿಚಿತ್ರ ಪ್ರಾಣಿ ಇರೊಕು. ಬಾಕಿ ಇದ್ದೊವೆಲ್ಲಾ ನನ್ನ ತಿಂಬ ಹಾಂಗೆ ನೋಡ್ತಾ ಒಳೊ. ಅಡಿಂದ ಮುಡಿವರೆಗೂ ಪರೀಕ್ಷೆ ಮಾಡ್ತಾ ಒಳೊ. ಈ ಬೋದಾಳ ಯಾಕೆ ತಲೆ ಎತ್ತುಲೆ. ಹಿಮಾಲಯಂದ ಇಳ್ದ್ ಬಂದವನಾ ಹೆಂಗೆ? ಒಮ್ಮೆ ನೋಡಿಕ ಮಾರಾಯ ಬಿಟ್ಟಿ ಪ್ರದರ್ಶನ. ಇಲ್ಲಿ ನೀನೆ ವಿ.ಐ.ಪಿ. ಉದ್ಘಾಟನೆಗೆ ಬಂದ ಮಂತ್ರಿಗಳಾಂಗೆ)

'ನಿಮ್ಮ ಹೈದಂಗೆ ನಮ್ಮ ಗೂಡೆ ಒಪ್ಪಿಗೆನಾ'

'ನಾ ಒಂದು ಗಳಿಗೆ ಗೂಡೆನೊಟ್ಟಿಗೆ ಪ್ರೈವೇಟ್ ಆಗಿ ಮಾತಾಡೊಕಲ್ಲಾ'

(ಓ ಹೈದಂಗೆ ಬಾಯಿ ಬಂದದೆ! ಪ್ರೈವೇಟ್! ವಿಚಿತ್ರ ಪ್ರಾಣಿ, ಇವಂದ್ ಎಂತಾ ಪ್ರೈವೇಟ್. ಅಪ್ಪ ಅಮ್ಮ, ಸಂದಾನ ಮಾಡ್ದೊವು ಎಲ್ಲ ಬಾಯಿ ಬುಟ್ಟ್‌ಕಂಡ್ ನೋಡುವೆ. ಮೊದುವೆಗೆ ಮುಂದೆ, ಇವನ ತಲೆ, ಎಂತಾ ಪ್ರೈವೇಟ್. ಆಮೇಲಾರ್ ಪ್ರೈವೇಟ್ ಇರೊಕಾದೆ. ನೋಡ್ನೊ ಈ ವಿಚಿತ್ರ ಪ್ರಾಣಿದೆಂತ ಪ್ರೈವೇಟ್‌ಂತ!)

ಉಪಾಯ ಇಲ್ಲದೆ, 'ಹೋಗಿ ಮೇಲೆ ಬಾಲ್ಕನಿಗೆ'ಂತ ಅಪ್ಪ ಹೇಳ್ದೊ;

ನಂಗೂ ಹೋಗೂಂತ ಕಣ್ ಸನ್ನೆ ಮಾಡ್ದೊ.

'ಕುದ್ದ್‌ಕಣಿ ಆ ಚೇರ್ ಮೇಲೆ'

(ಆಂ! ನಂಗೆ ನಮ್ಮ ಮನೇಲಿ ಉಪಚಾರ, ಅದೂ ಹೊರಗೆನವಂದ; ಹೂಂ ಆಗಲಿ ನೋಡ್ನೋ! ಏನ್ ಹೇಳ್ದೆನೊ, ಏನ್ ಕೇಳ್ದೆನೊ)

'ಅಲ್ಲಿ ಎಲ್ಲರ ಎದ್ರ್ ನೀವುಗೆ ನಿಮ್ಮ ಅಭಿಪ್ರಾಯನ ಹೇಳಿಕೆ ಆಕಿಲ್ಲೆಂತ ಇಲ್ಲಿ ಕೆಳ್ತಾ ಒಳೊ ನೀವುಗೆ ಒಪ್ಪಿಗೆನಾ?'

(ಅರೆ, ನನ್ನ ಒಪ್ಪಿಗೆ-ಗೂಡೆನ ಒಪ್ಪಿಗೆ ಈ ಕಾಲಲಿ ಹೈದ ಕೇಳ್ದು)

'ಮೊದುವೆ ಆದರೆ ನಾವಿಬ್ಬೊರು ಜೊತೆಲಿ, ಬೊದ್ಕಕಾದವು, ಹಂಗಾಗಿ ನಿಮ್ಮ ಇಸ್ಟ ತಿಳ್‌ಕಂಬಕೆ ಕೇಳ್ದೆ; ತೊಪ್ಪು ತಿಳಿಬೇಡಿ'

(ನನ್ನ ಇಸ್ಟಕ್ಕೆ ಪ್ರಾಮುಖ್ಯತೆ! ಖಂಡಿತ ಈ ಮೊನ್ಸ ಈ ಲೋಕದಂವ ಅಲ್ಲ! . . . ಅರೆ ನಂಗೆ ಮಾತಾಡಿಕೆ ಆದುಲ್ಲೆ ಅಲ್ಲಾ! ನಾ ಸುಮ್ಮನೆ ಕುದ್ದುಬುಟ್ಟೊಳೆ ಅಲ್ಲಾ)

'ನೀವು ನನ್ನ ಪ್ರಸ್ನೆಗೆ ಉತ್ತರ ಕೊಡದೆ ಕಣ್ಣ್ ಬಾಯಿ ಬುಟ್ಟ್ ನೋಡ್ತಾ ಸುಮ್ಮನೆ ಒಳರಿ ಅಲ್ಲಾ? ಬೇಗ ನಿಮ್ಮ ಅಭಿಪ್ರಾಯ ಹೇಳಿ. ಹೆಚ್ಚಿ ಹೊತ್ತು ಮಾಡ್ರೆ ಕಾಗಡೆ ಇದ್ದೊವು ಏನಾರ್ ತೊಪ್ಪು ತಿಳಿಯೊಕು ಸಾಕ್'

(ಹೌದು, ಏನಾರ್ ತೊಪ್ಪು ತಿಳ್‌ಕಂಬೊ; ಆದರೂ ನಂಗೆ ಏನ್ ಹೇಳೊಕೂಂತನೇ ಗೊತ್ತಾದುಲ್ಲೆ ಅಲ್ಲಾ; ಏನಾರ್ ಆಗಲಿ ಕೇಳಿಯೆ ಬುಟ್ಟನೆ)

'ನೀವುಗೆ ಹತ್ತ್ ಹದಿನೈದ್ ಲಕ್ಷ ಡೌರಿ ಬೇಡನಾ?'

" . . . . . . . . . . . . "

'ಫಾರಿನ್‌ಲಿ ಓದಿಸ್‌ಕೆ ನಮ್ಮ ಅಪ್ಪ ನಿಮ್ಮನ ಕಳ್ಸುದು ಬೇಡನಾ?'

' . . . . . . . . . . . . '

' ಎರ್ಡ್ ಕಡೆನ ಕರ್ಚ್ ಹಾಕಿ ಗೌಜಿಲಿ ಮೊದುವೆ ಮಾಡಿ ಕೊಡ್ಬಡನಾ'

' . . . . . . . . . . . . '

'ನಮ್ಮ ಊರೊವು ನನ್ನ ಬಗೆ ಏನೂ ಚಾಡಿ ಹೇಳ್ತ್‌ಲೆನಾ?'

(ಅರೆ ಇದೇನ್ ಮಾತಾಡಿಕೆ ಆಗದಾಂಗೆ ದೊಂಡೆ ಕಟ್ಟಿದೆ ಅಲ್ಲಾ! ಕಣ್ಣ್‌ಂದ ತಟ ಪಟ ನೀರ್ ಹನಿತಾ ಉಟ್ಟಲ್ಲಾ! ಯಾಕೆ? ಇಂದ್ ಯಾಕೆ ಹಿಂಗಾದೆ?)

'ಊರೊವೊ, ನೆರೆಕರೆವೊ ಆ ವಿಸಯ ನಂಗೆ ಬೇಡ, ನಂಗೆ ನನ್ನದೇ ಆದ ಬೊದುಕು ಕಟ್ಟಿಕಣೊಕೂಂತ ಒಳೆ. ನನ್ನ ಕಾಲ್ ಮೇಲೆ ನಿಂತ್ ಕಂಡೇ

ನನ್ನ ಬೊದುಕು ಸಾಗೊಕು. ಅವರಿವರ ಮಾತ್ ಕೇಳಿ ಬಾಳಿಕೆ ಆದುಲೆ, ಯಾರ್ ಏನಾರ್ ಹೇಳಲಿ. ನಿಮ್ಮ ನೋಡ್‌ದಾಂಗೆ ನನ್ನ ಮನ್‌ಸ್‌ಗೆ ಹಿಡ್‌ಸಿತ್; ನನ್ನ ಒಪ್ಪಿಗೆನಾಂಗೆ ನಂಗೆ ನಿಮ್ಮ ಒಪ್ಪಿಗೆನೂ ಬೇಕು – ನಾವಿಬ್ಬೊರು ಒಪ್ಪಿರೆ ಮಾತ್ರ ಈ ಸಮ್ಮಂದ' ನಿಮ್ಮ ಅಭಿಪ್ರಾಯ ಹೇಳಿ?'

(ಓ ಏನ್ ಕನ್‌ಸೊ. ನನ್ನ ಒಪ್ಪಿಗೆ, ನಾ ಹೈದನ ಪಾಸ್ ಮಾಡ್ದು! ಇದ್ ನಿಜ ಅಲ್ಲಾ, ಖಂಡಿತಾ ನಿಜ ಅಲ್ಲಾ! ಆಂ.... ಹೌದು ನಿಜ.... ನಿಜ.... ಕನ್‌ಸಲ್ಲ...... ಅವು ನನ್ನ ಎದ್‌ರ್ ಇರ್ದೂ ನಿಜ; ಅವರ ಮಾತೂ ನಿಜ..... ಅಯ್ಯೋ ಕಣ್ಣ್ ಕತ್ತಲೆ ಬಂದಾಂಗೆ ಆದೆ ಅಲಾ, ಬೀಸರ ಬಂದಾಗೆ ಆದೆ, ಅಯ್ಯೋ......) ಬೀಸರ ಬಂದ್ ಬೀಳ್‌ತ್ತಿದ್ದ ನನ್ನ ತೊಬ್ಬಿ ಹಿಡ್ಕಂಡೊ. ನನ್ನ ಮುಗುಳು ನೆಗೆ ಮೋರೆ ಅವುಕೆ ನನ್ನ ಒಪ್ಪಿಗೆನ ಸೂಚಿಸಿತ್. ಇಬ್ಬೊರ್ ಕುಸಿ ಕುಸಿಂದ ಬಾಲ್‌ಕನಿಂದ ಇಳ್‌ದ್ ಬಾದೊರ ಕಂಡ್ ಅಮ್ಮನ ಮೋರೆ ಮೊರದಗಲ ಆತ್, ಅಪ್ಪ ದೊಡ್ಡ ಹೊರೆ ಇಳ್‌ಸಿದಾಂಗೆ ಉಸುರು ಬುಟ್ಟೊ!

* * * * *

## ಚಾಂಪನ ಪೇಚಾಟ

'ಹುಲ್ಲಾಗು ಬೆಟ್ಟದಡಿ ಮನೆಗೆ ಮಲ್ಲಿಗೆಯಾಗು'ಂತ ಹೇಳ್‌ತ್ತಿದ್ದ ನಮ್ಮ ರಾಮಯ್ಯ ಮಾಸ್ಟ್ರ, ಅವರ ಹೆಣ್ಣ್ ಮುತ್ತಮ್ಮ ಟೀಚರ್ ಈ ಲೋಕ ಬುಟ್ಟ್ ಹೋದ ಮೇಲೆ 'ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೇ'ಂತ ಮನ್ಸನಗಟ್ಟಿ ಮಾಡಿಕಂಡೊ. ನಂಗೆ ಬಾರೊಕಾದ ಬಿ.ಪಿ., ಸುಗರ್ ಕಾಯಿಲೆನೆಲ್ಲಾ ಅದಕ್ಕೆ ಕೊಟ್ಟ್ ಅದರ ಆಯಿಸನ ದೇವ್ರು ನಂಗೆ ಕೊಟ್ಟಾಂತ ಮಾಸ್ಟ್ರ ತಮಾಸೆ ಮಾಡ್‌ತ್ತಿದ್ದೊ. ಮಾಸ್ಟ್ರ ಈಗ ಊರ್‌ಲಿ ಒಂಟಿ, ಮಗ ಸಿಂಗಾಪುರಲಿ, ಮಂಜ ಬೆಂಗಳೂರ್‌ಲಿ. ಹಂಞ ದಿನ ಹಾಂಗೂ ಹೀಂಗೂ ಊರ್‌ಲೇ ಇದ್ದವು ಮಂಜನ ಒತ್ತಾಯಕ್ಕೆ ಇನ್ನ್ ನಂಗೆ ಮಕ್ಕಳ ಏಳಿಗೆನೇ ಬೇಕಾದ್ದ್, ನಂಗೆ ಏನಾಕುಂತ ಊರ್‌ನ ತೋಟ ತೊಡಿಗೆ, ದನಕರ್‌ಗಳ, ಬಂಧುಗಳ ಸ್ನೇಹಿತರ ಎಲ್ಲಾ ಬುಟ್ಟ್ ಬೆಂಗಳೂರ್ ಸೇರ್‍ದೊ. ಬೆಂಗಳೂರ್‌ಲಿಯೋ ಮಂಜನ ಮನೆ ದೊಡ್ಡ ಅಪಾರ್ಟ್‌ಮೆಂಟ್‌ಲಿ, ಒಂದು ಬಿಲ್ಡಿಂಗ್‌ಲಿ ಮುನ್ನೂರಿಪ್ಪತ್ತ್ ಮನೆಗ!? ಇವಂದ್ ಹದಿನೈದನೇ ಮಹಡಿ, ತ್ರಿಶಂಕುನ ಹಾಂಗೆ ಕಾಗಡೆನೂ ಅಲ್ಲಾ, ಮೇಲೆನೂ ಅಲ್ಲ! ಇಪ್ಪತ್ತೈದನೇ ಮಹಡಿಯವುಕೆ ಮೇಲೆ ಹೋಕೆ ಬಾರಿ ಹಕ್ಕಲೆ, ಸ್ವರ್ಗಕ್ಕೆ ಮೂರೇ ಗೇಣ್!?

ಇಲ್ಲಿ ಎಲ್ಲರ್ದೂ ಯಾಂತ್ರಿಕ ಜೀವನ. ಪಕ್ಕದ ಮನೆವು ಯಾರ್‌ಂತನೂ ಸೆರಿ ಗೊತ್ತ್ಲೆ. ದಿನಾ ಕಾಂಬೊವೂ ಕೂಡಾ ಕಂಡರೆ ಒಂದು ಗುರ್ತದ ನೆಗೆ ಇಲ್ಲೆ. ಮಾತಾಡಿಕೆ ದುಡ್ಡೇ ಕೊಡೊಕು.

ರಾಮಯ್ಯ ಮಾಸ್ಟ್ರ ಮಂಜ ಸುಪ್ರೀತ್, ಸೊಸೆ ಸ್ಮಿತಾ. ಅವುಕೆ ಇಬ್ಬೊರು ಮಕ್ಕ. ಸುರುದ್ ಹೆಣ್ಣ್, ಎರ್ಡ್ನೇದ್ ಗಂಡ್ ಕೂಸು. ಆರತಿಗೆ, ಕೀರ್ತಿಗೆ ಸರಿಯಾಗುಟ್ಟು. ಗಂಡ ಹೆಣ್ಣ್ ಹೊಂದಿಕಂಡ್ ತಕ್ಕಮಟ್ಟಿಗೆ ಸುಖ ಸಂತೋಸಲಿ ಇರುವ ಸಂಸಾರ. ಮಂಜಂಗೆ ಹೇಂಗೂ ಅಪ್ಪನ ಮೇಲೆ ಪ್ರೀತಿ ಗೌರವ ಇರ್ದೇ ತಾನೇ? ಸೊಸೆನೂ ತೊಂದರೆ ಇಲ್ಲೆ, ಒಳ್ಳ ಹರ್ದಯದ ಗೂಡೆ. ಪ್ರೀತಿ, ಭಕ್ತಿ ಉಟ್ಟು, ಬಾಯಿ ತುಂಬಾ ಮಾಂವಾಂತ ಕರ್‌ದದೆ. ಟಿ.ವಿ. ಸೀರಿಯಲ್‌ನವರಾಂಗೆ ಮಾಂವನ ಅಪ್ಪಂತ, ಅತ್ತೆನ ಅಮ್ಮಂತ ಕರೆವ ಚಾಳಿ ಇಲ್ಲೆ. ರಾಮಯ್ಯ ಮಾಸ್ಟ್ರ ಕೂಂಟೆಗೆಲಿ ಮುಚ್ಚಿ ಹಾಕಿದ ಕೋಳಿನಾಂಗೆ ಇದ್ದರೂ ಆದಸ್ಟ್ ಕುಸೀಲೇ ಇರ್‌ತ್ತಿದ್ದೊ. 'ಗೊಗ್ಗರೆ ಕೂಳಿತಾಯೆ ಸೈತ್‌ಂಟಲಾ ಗೊತ್ತಾವಂದ್'ಂತ ತುಳೂಲಿ ಹೆಳ್ವಾಂಗೆ ಅವರ ನೆಗೆ ಮೋರೆ ಅವರ ದುಃಖ ದುಗುಡನ ಮರೆ ಮಾಚ್‌ತ್ತಿತ್ತ್. ಆದಸ್ಟ್ ಪಿಳ್ಳಿಕಳೊಟ್ಟಿಗೆ ಆಡಿಕಂಡ್, ನೋಡಿಕಂಡ್ ಬೇಜಾರ್‍ನ ಕಳೀತಿದ್ದೊ. ಹೇಂಗೂ ತಾತಾಂತೇಳ್ರೆ (ಈಗ ಯಾರೂ ಚಾಂಪ, ಉಗ್ಗಪ್ಪಾಂತ ಕರ್‍ವೊವು ಇಲ್ಲೆ) ಪಿಳ್ಳಿಕಳಿಗೆ ಬಾರಿ ಕುಸಿ ತಾನೆ. ಮಕ್ಕಳೊಟ್ಟಿಗೆ ಆಡಿಕೆ ಅಯ್ಯೆ ಅಪ್ಪಂಗೆ ಎಲ್ಲಿ ಪುರುಸೊತ್ತು ಉಟ್ಟು? ತಾತ ಪಿಳ್ಳಿಕಳೊಟ್ಟಿಗೆ 'ಅವಲಕ್ಕಿ ಪವಲಕ್ಕಿ ಕಾಂಚಣ ಮಿಣಿ ಮಿಣಿ' ನೋ, 'ಒಂದಲಕಿ ತಂದಲಕ್ಕಿ'ನೋ ಆಡಿಕಂಡ್, ಕೂಸುಮರಿ ಮಾಡಿಕಂಡ್ ಉಪ್ಪುಮೂಟೆ ಹೊತ್ತ್‌ಕಂಡ್ ಮಕ್ಕಳ ಕುಸಿ ಪಡ್ಸ್‌ತಾ ಇದ್ದೊ. ಹೆಣ್ಣ್ ಕೂಸುಗೆ ಡಾಕ್ಟ್ರ ಆಟ, ಅಮ್ಮ ಕ್ಲಿನಿಕ್‌ಲಿ ಕಾಯಿಲೆನವರ ಪರೀಕ್ಷೆ ಮಾಡ್‌ದರ ನೋಡಿ, ಆಟದ ಡಾಕ್ಟ್ರ ಕಿಟ್ ತಕಂಡ್ ತಾತನ ಮಲ್‌ಗ್‌ಸಿ ಸ್ಟೆತೆಸ್ಕೋಪ್ ಇಸಿ ಪರೀಕ್ಸೆ ಮಾಡುದೇನ್, ಗಂಟ್‌ಗಂಟ್‌ಗಳ ಕುಟ್ಟಿ ಬೇನೆ ಉಟ್ಟೋಂತ ಕೇಳ್‌ದೇನ್. ಇಂಜಕ್ಷನ್ ಕುತ್ತುದು, ಮಾತ್ರೆ ಕೊಡ್ದು ಏನೋ ಎಲ್ಲಾ. ಮಾಸ್ಟ್ರ ಮಾತ್ರ ಪಿಳ್ಳೀ ಹೇಳ್ಕನ ಮುಟ್ಟ ತೆಪ್ಪಗೆ ಬಿದ್‌ಕಣೊಕು. ಗಂಡ್ ಕೂಸಿಗೆ ಕಾರ್, ಬೈಕ್, ಸ್ಪೈಡರ್‌ಮೇನ್‌ಂತ ಅವನ ಆಟ ಬೇರೆನೆ. ಸ್ಪೈಡರ್ ಮೇನ್‌ನಾಂಗೇಂತ ಮಂಚಂದ ಹಾರುದೇನ್, ಪಲ್ಟಿ ಹೊಡಿಯೊದೇನ್, ಏನೋ ಎಲ್ಲ ಆಟವೇ ಆಟ. ತಾತ ಮಾತ್ರ ಅವನ ಕಣ್ಣ್ ತೊಪ್ಪಿಕೆ ಬೊತ್ತ್. ಅವನ ಆಟ ಕೀಟಲೆಗಳ ನೋಡಿಕಂಡೇ ಇರೊಕು. ಊರಿಗೋ, ಬೇರೆ ಎಲ್ಯಾರೋ ಹೋಕುತಾದರೆ 'ನಾ ಆಪೀಸಿಗೆ

ಹೋಗಿ ಬನ್ನೆ ಚಾಮಿಕಂದ'ಂತೇಳಿ ಮುತ್ತು ಕೊಟ್ಟ್ ಹೊರ್‌ಟರೆ ರಗಳೆ ಇಲ್ಲೆ. ಮುದ್ದುಕೂಸಿಗೆ ಪಿಂಚಣಿ ಆದ ಮಾಸ್ಟ್ರಗೆ ಆಪೀಸ್ ಗೀಪೀಸ್ ಇಲ್ಲೆಂತೇಳ್ದು ಗೊತ್ಲೆ. ಅಪ್ಪನಾಂಗೆ ತಾತನೂ ಆಪೀಸ್‌ಗೆ ಹೋದೂಂತ ಗ್ರೇಸಿದೆ. ಮನೆಗೆ ಬಾಕನ ಒಂದೆರ್ಡ್ ದಿನ ಆದರೆ 'ತಾತ ನೀವು ಆಪೀಸ್‌ಲೇ ಚಾಚಿದ್ದೊ, ಎಲ್ಲಿ ಜೋಜಿ ಮಾಡೋದು, ಆಪೀಸ್‌ನಲ್ಲಿ ಮಾಮು (ಊಟ) ಉಂಟೋ ಹೀಂಗೆ ಏನೋ ಎಲ್ಲಾ ಮೊದ್ದು ಮೊದ್ದಾದ ನೂರೆಂಟ್ ಪ್ರಸ್ನೆಗ. ಅವನ ಪ್ರಸ್ನೆಗಳಿಗೆಲ್ಲಾ ಅವಂಗೆ ಸಮದಾನ ಆಗುವಂಗೆ ಉತ್ತರ ಹೇಳೊಕಾರೆ ಮಾಸ್ಟ್ರ ಬೇರೆ ಟ್ರೈನಿಂಗ್ ಮಾಡೊಕು!? ಪಿಳ್ಳಿನ ಸಾಲೆಗೆ ಹೊರ್ಡುಸುದು ಮಾತ್ರ ಭಂಗದ ಕೆಲ್ಸ. 'ತಾತ ಸ್ವಲ್ಪ ಆಟ ಆಡ್‌ತ್ತೀನಿ, ನಾನು ಇವತ್ತು ಆಡಲೇ ಇಲ್ಲಂತ' ರಗಳೆ. ಹೊತ್ತಾತ್ ಬಾ ಹೊರ್‌ಡಿಸಿನೇಂತ ಎಲ್ಯಾರ್ ಜೋರ್‌ಲಿ ಹೇಳ್ರೆ ಮುಗ್ತ್ 'ತಾತ ನೀವೂ ಬೈಯುತ್ತೀರಾ'ಂತ ತುಟಿನ ದೂಂಚಿ ಮಾಡಿ ಮರ್ಡಿಕೆ ರೆಡಿ, ಆಗ ಹೊಟ್ಟೆ ಬೆಂದದೆ. ಮಂಜ, ಸೊಸೆಗೆ ಆಪೀಸ್ ಕ್ಲಿನಿಕ್‌ಂತ ಮಕುಳಿ ತೊರ್ಸಿಕಣಿಕೂ ಪುರ್‌ಸೊತ್ತು ಇಲ್ಲೆ. ಸೊಸೆ ಪಾಡ್ ಅಂತೂ ನೋಡಿಕೆ ಬೊತ್ತು. ಹೊತ್ತು ಹೊತ್ತಿಗೆ ಊಟ ತಿಂಡಿ ಆಕು, ಗುಡ್ಸುದು, ಒರ್ಸುದು ಮಾಡೊಕು. ಬಟ್ಟೆ ಒಕ್ಕಣೊಕು, ಏನೋ ಎಲ್ಲಾ ಕೆಲ್ಸಗಳೇ ಕೆಲ್ಸಗ. ಮಂಜ ಇದ್ದರೆ ಹೆಣ್ಣಿಗೆ ಹಂಞ ಸಾಯ ಏನೋ ಮಾಡ್ದೆ. ಆದರೆ ಅಂವ ಬಾಕನ ಯಾಗೊಳು ರಾತ್ರೆ ಒಂಬತ್ತ್ ಗಂಟೆ. ಸೊಸೆ ಮಕ್ಕಳ ಪುಂಡಾಟ ರಂಪಾಟಕ್ಕೆ ಎಲ್ಯಾರ್ ಪರ್‌ಂಚ್‌ಕನ, ಸಿಡ್‌ಕ್‌ಕನ 'ಸ್ಮಿತವಿರಲಿ ವದನದಲಿ'ಂತ ನಾ ಹೇಳ್ರೆ ನನ್ನ ಓರೆ ಕಣ್ಣ್‌ಲಿ ನೋಡಿ ಹುಸಿ ಕೋಪ ಮಾಡಿಕಂಡ್ ಮಕ್ಕಳ ಪೂಸಿ ಮಾಡ್ದೆ. ಅಡಿಗೆ ಮನೆಲಿ ಏನೋ ಕೆಲ್ಸದ ಅಂಬೆರ್ಪುಲಿ ಇರ್ಕನ ನಾ ಕರ್ದದ್ ಕೇಳದೆ, ಅದರ ಪಾಡಿಗೆ ಇರ್ಕನ 'ಅಕ್ಕ, ಮಂದ ಸ್ಮಿತಾ'ಂತ ಕರ್ದ್ ತಮಾಸೆ ಮಾಡ್ಕನ 'ಹೋಗಿ ಮಾಂವ ನೀವುಗೆ ಯಾಗೊಳು ತಮಾಸನೆ'ಂತ ಹೇಳ್ದೆ. ಅಂತೂ ಮಂಜನ ಪುಣ್ಯ, ಸೊಸೆ ಒಮ್ಮೆನೂ ಹರಳೆಣ್ಣೆ ಕುಡ್ಡವರಾಂಗೆ ಮೋರೆನ ಸಿಂಡ್‌ರ್ಸಿಕಂಡ್ ಇದ್ದದರ ನಾ ಕಂಡತ್ಲೆ.

ಸುರುಸುರುಲಿ ಬೆಂಗಳೂರ್‌ಲಿ ಅತ್ತಿತ್ತ ಓಡ್ಯಾಡಿಕೆ ಮಾಸ್ಟ್ರಿಗೆ ತುಂಬಾ ಕಸ್ಟ ಆತಿತ್ತ್. ಮಾರ್ಗಲಿ ಓಡ್ಯಾಡಿಕೇ ಬೊತ್ತು. ಅತ್ತಂದ, ಇತ್ತಂದ ಗಾಡಿಗಳೇ ಗಾಡಿಗ (ಎತ್ತ್‌ದ್ ಅಲ್ಲ, ವಾಹನಗ) ಎಸ್ಟ್‌ಕರೆಗೆ ಹೋದರೂ ಮೈನ ಒರ್ಸಿಕಂಡೇ ಹೋಗುವಾಂಗೆ ಹೋದವೆ. ಬಸ್ಸ್‌ಂದ ಇಳಿಯೊಕಾರೂ ಬಾರಿಜಾಗ್‌ರ್ತೆ ಬೇಕು. ಎತ್ತಂದ ಬೈಕ್‌ಗ ಶರವೇಗಲಿ ಬಂದವೇಂತ ಹೇಳಿಕೆ ಬೊತ್ತು. ಇಲ್ಲಿನವುಕೆ ರಸ್ತೆ

ನಿಯಮಗ ಒಂದೂ ಲೆಕ್ಕಕ್ಕೇ ಇಲ್ಲೆ!? ಹಿಂಬೊತು ಮನಿ ಮೆಜೆಸ್ಟಿಕ್‌ಂದ ಬಸ್ಸ್ ಹತ್ತಿದೋ ಹೋತು, ಹತ್ತ್ ಹದಿನೈದ್ ಕಿ.ಮೀ. ಬಾಕೆ ಒಂದೂವರೆ ಎರ್ಡ್ ಗಂಟೆ ಬೇಕಾದು, ಅಸ್ಟೂ ಟ್ರಾಫಿಕ್ ಜಾಮ್‌ಗ!?

ರಾಮಯ್ಯ ಮಾಸ್ಟ್ರಿಗೆ ಪ್ಲಾಟ್‌ನ ಎರ್ಡ್ ಬೆಡ್‌ರೂಂನ ಮನೆಲಿ ಹೊತ್ತು ಹೋದು ಬಾರಿ ಕಸ್ಟ ಆತಿತ್ತ್. ಸೆರಿಯಾಗಿ ಕಾಲಾಡ್ಸಿಕೇ ಜಾಗ ಸಾಲ್ದ್. ಊರ್‌ಲಿ ಬೊಳ್ಳಿ ತೆಗ್ದ್‌ಬುಟ್ಟ ಎತ್ತ್‌ನಾಂಗೆ ಇದ್ದವುಕೆ, ಇಲ್ಲಿ ಕಾಲ್ ಕಟ್ಟಿದಾಂಗೆ ಆತಿತ್ತ್. ಅದ್ಕೆ ಬೊಳ್ಪುಗೆ, ಹಿಂಬೊತ್‌ಗೆ ವಾಕಿಂಗ್ ಮಾಡಿಕೆ ಸುರು ಮಾಡ್ದೊ. ಪುಣ್ಯಕ್ಕೆ ಮನೆ ಹಕ್ಕಲೆ ಜೆ.ಪಿ. (ಲೋಕ ನಾಯಕ ಜಯಪ್ರಕಾಶ್ ನಾರಾಯಣ) ಪಾರ್ಕ್ ಇರುದರ್‌ಂದ ಬಾರಿ ಒಳ್ಳದಾಗಿತ್ತ್. ರಾಮಕೃಷ್ಣ ಹೆಗ್ಡೆ ಮುಖ್ಯಮಂತ್ರಿ ಆಗಿರ್ಕನ ಇಲ್ಲಿ ನೂರು ಎಕ್ರೆ ಜಾಗೆನ ಪಾರ್ಕ್ ಮಾಡ್ಸಿದೊಗಡ!

ಜೆ.ಪಿ. ಪಾರ್ಕ್‌ನ ಒಳಗೆ ಸುತ್ತಾಡುದೇ ಒಂದು ಉಲ್ಲಾಸದ, ಕುಸಿನ ಸಂಗ್ತಿ. ದೊಡ್ಡ ವಾಕಿಂಗ್ ಟ್ರೇಕ್‌ಲಿ ಒಂದು ಸುತ್ತು ಬರೊಕಾರೆ ಹೆಚ್ಚಿ ಕಮ್ಮಿ ಅರ್ಧ ಗಂಟೆನೇ ಬೇಕು. ವಾಕಿಂಗ್ ಮಾಡಿಕೆ ಲಾಯಿಕ್‌ನ ಇಂಟರ್‌ಲಾಕ್ ಹಾಕಿದ ಮಾರ್ಗ ಉಟ್ಟು, ಅದರ್ಲಿ ಎರ್ಡ್ ಸುತ್ತು ಬಂದರೆ ಧಾರಾಳ ಸಾಕ್. ಸಣ್ಣ ಸಣ್ಣ ವಾಕಿಂಗ್ ಟ್ರೇಕ್‌ಗಳೂ ಉಟ್ಟು, ನಡ್ದ್ ಬೊಚ್ಚಿರೆ ಕುದ್ರಿಕೆ ಅಲ್ಲಲ್ಲಿ ಕಲ್ಲ್‌ಬೆಂಚಿಗಳು ಬೇಕಾದಸ್ಟ್ ಉಟ್ಟು, ಕುಡಿಯಕೆ ನೀರ್, ಒಂದು, ಎರ್ಡ್ ಬಂದರೆ ಅದಕ್ಕೆ ಮೂರು ನಾಲ್ಕ್ ಕಡೆ ಪಾಯಿಕಾನೆಗ. ಯಾವ ತೊಂದರೆನೂ ಇಲ್ಲದೆ ಸುತ್ತಕ್. ಮಳೆಗಿಳೆ ಬಂದರೆ ನಿಲ್ಲಿಕೆ, ಕುದ್ರಿಕೆ ತಂಗುದಾಣಗಳೂ ಒಳೊ. ಇನ್ನ್ ಹೊರಾಂಗಣ ವ್ಯಾಯಾಮ ಶಾಲೆಂತ ಗಂಡ್ಸ್‌ಗಳಿಗೆ, ಹೆಂಗ್ಸ್‌ಗಳಿಗೆ ಎರ್ಡೆರ್ಡ್ ಬೇರೆ ಬೇರೆ ವ್ಯಾಯಾಮ ಶಾಲೆಗ. ಮುಖ್ಯ ದ್ವಾರಂದ ನುಗ್ಗಿ ಮುಂದೆ ಹೋಕನ ಬೇರೆ ಬೇರೆ ನಮೂನೆನ ಬೊಂಬೆಗ–ಎತ್ತ್‌ಗಳ್ಲಿ ಗದ್ದೆ ಹೂಡ್ದು, ಸಂತೃಪ್ತ ರೈತ ಕುಟುಂಬ, ಅರೆ–ಬೆತ್ತಲೆ ಮಕ್ಕ, ಕುರಿಕಾಯಂವ, ಎಲ್ಲಕ್ಕಿಂತ ಲಾಯಿಕ್ ದನ ಮೇಸುವ ಅಜ್ಜ, ಹೊತ್ತೆಷ್ಟಾಂತ್‌ಂತ ಕಣ್ಣ್ ಮೇಲೆ ಕೈ ಹಿಡ್ದ್ ಸೂರ್ಯನ ನೋಡ್ದು! ಇನ್ನು ಹುಲಿ, ಸಿಂಹ, ಆನೆ, ಘೇಂಡಾಮೃಗ ಹೀಂಗೆ ಬೇರೆ ಬೇರೆ ಪ್ರಾಣಿಗ. ಅದರ ನೋಡಿಕಂತನೇ ಎಸ್ಟೋ ಮಕ್ಕ ಬಂದವೆ. ಆದರೆ ಹಕ್ಕಲೆ ಹೋಗಿ ಮುಟ್ಟಿ ನೋಡುವ ಹಾಂಗೆ ಇಲ್ಲೆ. ಒಂದು ವೇಳೆ ಯಾರಾರ್‌ತಡೆ ಬೇಲಿ ದಾಟಿದ್ ಕಂಡರೆ ಅಲ್ಲಲ್ಲಿ ಇರುವ ಸೆಕ್ಯೂರಿಟಿಗಳ ಬಿಗಿಲ್ ಕೇಳ್ದೆ. ಪಾರ್ಕ್‌ನ ಒಳಗೆ ನೋಡುವಂತದ್ ಏನೇನೋ ಉಟ್ಟು, ಶಿಲಾವನ, ಸಂಜೀವಿನಿವನ, ರಾಜ್‌ಕುಮಾರ್

ಬಯಲ ರಂಗಮಂದಿರ, ಸಂಗೀತ ನೃತ್ಯಕಾರಂಜಿ, ರಾಮಕೃಷ್ಣ ಹೆಗ್ಡೆ ಈಜುಕೊಳ, ಸಣ್ಣ ಮಕ್ಕಳ ಆಟದ ಪಾರ್ಕ್‌ಗ ಹೀಂಗೆ ಏನೇನೋ. ವಯಸ್ಸಾದವರ, ಕಾಯಿಲೆಯವರ ಆಕರ್ಷಿಸುದು ಅಲ್ಲಿನ ರಾಶಿವನ/ನವಗ್ರಹವನ/ನಕ್ಷತ್ರವನ!? ಅದರ ಒಳಗೆ ಹೋವು ಜೋಡು, ಸೂ ಬಿಚ್ಚಿ ಹೋಕು. ನಡಿವದಾರಿಗೆ ಸಣ್ಣ ಸಣ್ಣ ಹಳ್ಳಲಿ ಸಿಕ್ಕುವ ಕಲ್ಲ್‌ಗಳ ಹಾಕೊಳೊ. ನಡೆಕನ ಆಕ್ಯುಪಂಚರ್‌ನಾಂಗೆ ಆದೆ. ಅಬ್ಬೆಸ ಇಲ್ಲರೆ ಅದರ್ಲಿ ಒಂದು ಸುತ್ತು ಸುತ್ತಿಕೆ ಕಸ್ಟ!? ಪಂಚಾಂಗದಾಂಗೆ ನಿಮ್ಮ ನಕ್ಷತ್ರ, ರಾಶಿ, ಅದಕ್ಕೆ ಸೆರಿಯಾಗುವ ವೃಕ್ಷ, ಮೃಗ, ಪಕ್ಷಿ ಹೀಂಗೆ ಏನೋ ಎಲ್ಲಾ ಕಲ್ಲ್‌ಲಿ ಕೆತ್ತಿಕಂಡ್‌ಉಟ್ಟು!? ಇನ್ನು ಸಣ್ಣದೊಡ್ಡಕೆರೆಗೆ, ಅದರ್‌ಲಿ ದೇವ್ರ ಮೀನ್‌ಗಳ ಹಾಂಗೆ ದೊಡ್ಡ ದೊಡ್ಡ ಮೀನ್‌ಗ! ಅದರ ನೋಡಿಕೆ ಬೊತ್ತದಾಂಗೆ ಜನವೋ ಜನ. ಆ ಮೀನ್‌ಗಳ ಹಿಡಿಯಕೆ ಮಾತ್ರ ಬೊತ್ತು! ಆದರೆ ಒಳ್ಳ ಮಳೆ ಬಾಕನ ಕೆರೆ ನೀರ್‌ತುಂಬಿ ಹರಿಯಕನ ಉಬರ್ ಹತ್ತಿದಾಂಗೆ ಮೀನ್‌ಗ ಈಚೆ ಬಂದವೆ. ಅದರ ಮಾತ್ರ ಗೊತ್ತಿರವು ಹಿಡ್‌ಕಂಡ್ ಮೆಲ್ಲೆ ಚೀಲಕ್ಕೆ ಹಾಕಂಡ್ ಹೋದವೆ. ಮುಖ್ಯ ವಾಕಿಂಗ್ ಟ್ರೇಕ್‌ನ ಎರ್ಡೂ ಪುಡೆಲಿ ನಮ್ಮ ಕುವೆಂಪು, ಕಾರಂತ, ಬೇಂದ್ರೆ ಹೀಂಗೆ ಜ್ಞಾನಪೀಠ ಪ್ರಶಸ್ತಿ ಪಡ್ದವರ, ವಿಶ್ವೇಶ್ವರಯ್ಯ, ಕಿತ್ತೂರು ರಾಣಿ ಚೆನ್ನಮ್ಮ, ಝೂನ್ಸಿರಾಣಿ ಲಕ್ಷ್ಮೀ ಬಾಯಿ ಮುಂತಾದ ವೀರ ವನಿತೆಯರ ಪುತ್ಥಳೀಂತ ಉಟ್ಟು! ಆದರೆ ಅವರ ಯಾರ ಪುತ್ಥಳಿ ಮಾತ್ರ ಇಲ್ಲೆ, ಪೀಠ ಮಾತ್ರ! 'ಶ್ರೀ........ ಶಾಸಕರು, ಇವರ ಶಾಸಕರ ನಿಧಿಯ ಅನುದಾನದಿಂದ ಸ್ಥಾಪಿಸಲಾಗಿದೆ'ಂತ ಪೀಠಲಿ ಉಟ್ಟು. ಮುಂದೆಯಾಗಾರ್ ಪುತ್ಥಳಿ ಬಂದ್ ಕುದುರ್ದೂಂತ ಹೇಳೊನ! ಮಾಸ್ಟ್ರಿಗೆ ಅದರ ನೋಡ್ರೆ ದಿನಕರ ದೇಸಾಯಿಯವರ 'ಗಾಂಧಿ ಸ್ಮಾರಕ' ಪದ್ಯ ನೆನ್ಪಾತ್. 'ನನ್ನ ಪ್ರತಿಮೆಯ ನಿಲಿಸಿ ನೀವು ಮೆರೆವುದು ವ್ಯರ್ಥ. ನಿಮ್ಮ ಹೃದಯದಲಿರಲಿ ನನ್ನ ಮರಣದ ಅರ್ಥ'ಂತ!!?!

ಮಾಸ್ಟ್ರ ಬೊಳ್ಪಿಗೆ ಒಂದು ರೌಂಡ್ ನಡ್ದ್, ಬೊಚ್ಚಿಕನ ಕಲ್ಲ್ ಬೆಂಚ್‌ಲಿ ಒಂದು ಕಡೆ ಕುದ್ದುಕಂಡವೆ. ಆಗ ಮಾಸ್ಟ್ರಗೆ ಪುಕ್ಕಟೆ ಮನರಂಜನೆಗ. ಅಲ್ಲಿಗೆ ಬಂದ ಕೆಲವು ಮಾಡುವ ಕಸ್ರತ್ತ್‌ಗಳ ನೋಡೊಕು. ಹಿಂದೆನ ರಿಸಿಗ ತಪಸ್ ಮಾಡ್‌ತ್ತಿದ್ದಾಂಗೆ ಒಂಟಿಕಾಲ್‌ಲಿ ಎರ್ಡ್ ಕೈ ಮೇಲೆತ್ತಿ ನಿಲ್ಲುದು, ತಲೆಕಾಗಡೆ ಇಸಿ ಕಾಲ್ ಮೇಲೆ ಮಾಡ್ದು, ಕಣ್ಣ್ ಮೂಕು ಮುಚಿಕಂಡ್ ಏನೇನೋ ಮಾಡ್ದು. ಉಸ್ರ್‌ನ ಬುಸ್ ಬುಸ್‌ಂತ ಹೆಬ್ಬಾವುನಾಂಗೆ ಬುಡ್ದು. ಎಲಿನ ನುಂಗಿದ ಕೇರೆನಾಂಗೆ ಕುತ್ತಿಗೆನ ತಿರ್ಗ್‌ಸುದು, ದೆವ್ವ ಕಟ್ಟಿದಂವ ಗಗ್ಗರನ ಆಡ್ಸಿದಾಂಗೆ ಕಾಲ್‌ನ ಆಡ್ಸುದು

ಇನ್ನೂ ಏನೇನೊ. ಇನ್ನು ಹೊರಾಂಗಣ ವ್ಯಾಯಾಮ ಶಾಲೆಲಿ ನೋಡೊಕು. ಏನೋ ಏನೋ ಕೊಂತಣಗ ಅಲ್ಲಿ ಉಟ್ಟು. ಸೈಕಲ್ ಮೆಟ್ಟಿದಾಂಗೆ ಮೆಟ್ಟಿಕೆ, ಸೊಂಟನ ತಿರ್ಗಿಸಿಕೆ, ಕೈನ, ಕಾಲ್‌ನ ತಿರ್‌ಗ್‌ಸಿಕೆ, ದೋಣಿಲಿ ಹುಟ್ಟು ಹಾಕಿದಾಂಗೆ ಕೈನ ಮಾಡಿಕೆ. ನೇಲಿಕೆ, ಉಯ್ಯಾಲೆ ಆಡ್‌ದಾಂಗೆ ಮಾಡಿಕೆ ಹೀಂಗೆ ಎಂತೆಂತೆದೊ. ಎದ್ರಿಕೆ ಬೊತ್ತದ ಗಂಡ್ಸ್, ಹೆಂಗ್ಸ್‌ಗ ಬಂದ್ ಅದರ್ಲಿ ಹೊಡ್ದಾಡ್ದು ನೋಡೊಕು. ಕೆಲವರ ನೋಡ್ಕನ ಅಯ್ಯೋ ಪಾಪನೆಂತ ಕಂಡದೆ!?

ಒಂದು ದಿನ ಮಾಸ್ಟ್ರ ಬಾಲ್ಕನಿಲಿ ನಿತ್ತ್‌ಕಂಡ್‌ಇರ್ಕನ ಬೇಂಡ್ ವಾದ್ಯ ಕೇಳ್ತ್, ಮಾಲೆ ಪಟಾಕಿಗಳ ಬಡಬಡಾಂತ ಹೊಡಿದು, ಜನ ಮಾರ್ಗಲಿ ಕೊಣ್‌ಕಂಡ್ ಬಂದೊ, ಸಿಂಗಾರ ಮಾಡ್ದ ಪಲ್ಲಕ್ಕಿ ಕಂಡತ್. ಗಣೇಶ ವಿಸರ್ಜನೆನಾಂಗೆ ಯಾವ್ದೋ ದೇವ್ರ ಮೆರವಣಿಗೆ ಇರೊಕೂಂತ ಗ್ರೇಸಿ ನೋಡ್ರೆ, ಸವದ ಮೆರವಣಿಗೆ ಸುಡ್ಕುಳಿಗೆ ತಕಂಡ್ ಹೋಗುವ ಗೌಜಿ. ದಾರಿ ಇಡೀ ಹೂವು ಹರ್‌ಂಡಿಕಂಡ್ ಹೋದವೆ, ಸತ್ತ ಪುಣ್ಯಾತ್ಮ ಜೀವ ಇರ್ಕನ ಇಂತದರ ಅನುಭವಿಸಿ ಇರಿಕ್ಕಿಲ್ಲೆ. ಬೆಂಗಳೂರ್‌ನವ್‌ಕೆ ದೇವ್ರ ಮೇಲೆ ಭಕ್ತಿಯೋ ಭಕ್ತಿ, ವಾರಲಿ ಮೂರು ದಿನ ಮಾಸ ತಿಂಬಕ್ಕಿಲ್ಲೆ. ಸೋಮವಾರ ಶಿವಂಗಾಗಿ, ಗುರುವಾರ ರಾಘವೇಂದ್ರ ಸ್ವಾಮಿಗೆ, ಶನಿವಾರ ತಿರುಪತಿ ವೆಂಕಟ್ರಮಣಂಗಾಗಿ. ಗಂಡ್ಸ್‌ಗ ಕದ್ದ್‌ಮುಚ್ಚಿ ತಿಂದರೂ ಹೆಂಗ್ಸ್‌ಗಂತೂ ತಿಂಬಕೇ ಇಲ್ಲೆ. ಇಲ್ಲಿಯ ಹೆಂಗ್ಸ್‌ಗಳ ಭಕ್ತಿಯಿಂದನೋ ಏನೋ ಬೀದಿ ಬೀದಿಗಳ್ಲಿ ಹೊಸ ಹೊಸ ನಾವು ಕೇಳದ ಕಾಣದ ದೇವಿಗ. ಸರ್ಕಲ್ ಮಾರಮ್ಮ, ಮುತ್ತು ಮಾರಿಯಮ್ಮ, ಏಳಮಂದೆಮ್ಮ, ಮುಳ್ಳುಕಟ್ಟು ಹುಚ್ಚಮ್ಮ ಹೀಂಗೆ. ದಾರಿಲಿ ಹೋವು ಬಾವು ಹೇಂಗೂ ಕೈಮುಕ್ಕಂಡೇ ಹೋದು. ಬಸ್ ಕಾರ್‌ಲಿ ಹೋವು ಗಾಡಿಂದಲೇ ಕೈ ಮುಗ್ದವೆ. ಅಂತೂ ಭಕ್ತಿಯೇ ಭಕ್ತಿ. ಜನಗ ಮಾಡುವ ಅನ್ಯಾಯ ಹೆಚ್ಚಾದಾಂಗೆ ಭಕ್ತಿಯೂ ಹೆಚ್ಚಾದೆನೋಂತ ರಾಮಯ್ಯ ಮಾಸ್ಟ್ರ ಗ್ರೇಸಿ ಕಂಡವೆ.

ರಾಮಯ್ಯ ಮಾಸ್ಟ್ರ‌ಗೆ ಮಂಜನ ಮನೇಲಿ ಪಾಯಿಕಾನೆದೇ ತೊಂದರೆ. ಮೀಯಕ್ಕೂ ತೂರಿಕ್ಕೂ ಒಂದೇ ಕೋಣೆಲಿ. ಒಬ್ಬ ಮೀಕಂಡ್ ಇರ್ಕನ ಯಾರಿಗಾರು ಉಚ್ಚೆ ಬಂದರೆ ಏನೂ ಮಾಡಿಕೆ ಉಪಾಯ ಇಲ್ಲೆ! ಇನ್ನು ಹೇಲಿಕೆ ಕುದ್ರಿಕೆ ಅದೆಂತದೋ ಪರ್ದೇಸಿ 'ಕೊಮೊಡೊ' ಗಡ! ಸುರುಸುರುಲಿ ಅದರ್ಲಿ ಕುದ್ದು ಬಂದದರ ತೀರ್ಸಿಕೆ ಬಾರಿಕಸ್ಟ ಆತಿತ್ತ್. ಆಕೇರಿ ಆಕೇರಿ ಅಭ್ಯಾಸ ಆತ್. ಸೊಂಟ ಬೇನೆ ಸುರು ಆದ್ದರ್‌ಂದ ಬೊಗ್ಗಿ ಕುದ್ರೊಕಾದ್ ಇಲ್ಲೆ, ಲಾಯಿಕ್ ಕಾಂಬೊತ್ತಿತ್ತ್.

ಮಾಸ್ತ್ರಗೆ ಇತ್ತೀಚೆಗೆ ಪೈಲ್ಸ್ ಬೇರೆ ಸುರಾಗಿತ್. ಹೊರ್ಕಡೆ ಹೋಕೆ ಕಸ್ಟ, ಬಾರೀಟೈಟ್. ಎರ್ಡ್‌ದಿನ ಮೂರು ದಿನಕ್ಕೊಮ್ಮೆ ಸೆರಿಯಾಗಿ ಆದು. ಸೊಸೆ ಡಾಕ್ಟ್ರ ಅಲ್ಲಾ ಅದ್ 'ಮಾಂವ ನೀವು ಸೆರಿಯಾಗಿ ನೀರು ಕುಡಿಯೊಕು. ಬಾಳೆಹಣ್ಣ್ ತಿನೊಕು, ಹಂಗೆ ಮಾಡೊಕು, ಹಿಂಗೆ ಮಾಡೊಕೂಂತ ಹೇಳ್‌ತ್ತಿತ್. ನೀವುಗೆ ಇಂಗ್ಲಿಸ್ ಮೊದ್ದು ಹಿಡ್ಸಿಕಿಲ್ಲೆ, ಆಯುರ್ವೇದ ಒಳ್ಳೆದ್‌ಂತ'ಂತ 'ತ್ರಿಫಲ ಚೂರ್ಣ' 'ದಡಿಮಡಿ ಗೃಥಾ' ಎಲ್ಲಾ ತಂದ್ ಕೊಡ್‌ತ್ತಿತ್.

ಒಂದು ದಿನ ಮಂಜ ಆಫೀಸ್‌ಗೆ, ಸೊಸೆ ಕ್ಲಿನಿಕ್‌ಗೆ, ಮಕ್ಕ ಸಾಲೆಗೆ ಹೋಗೊಳೊ. ಮಧ್ಯಾಹ್ನ ಮಾಸ್ತ್ರಗೆ ಹೊಟ್ಟೆ ಯಾಕೊ ಗುಡಗುಡು! ಒಂದೆರ್ಡ್ ಹೂಂಸು ಹೋತು, ಪಾಯಿಕಾನೆಗೆ ಹೋಕೂಂತ ಆದು, ಅಲ್ಲಿ ಹೋಗಿ ಕುದ್ದರೆ ಬರಟ ಇಲ್ಲೆ. ಛೆ! ಇಂದೇನೂ ಹೆಚ್ಚಿಗೆ ತಿಂದತ್ಲೆ, ಊಟನೂ ಹಂಞನೇ ಮಾಡ್ದ್, ಆದರೂ ಯಾಕೆ ಹಿಂಗಾತ್‌ಂತ ಗ್ರೇಸಿಕಂಡ್ ಒಂದು ಚೂರು ಮಲ್‌ಗಿನೆಂತ ಮಂಚಲಿ ಹೋಗಿ ಮಲ್ಗಿದೊ. ಹಾಂಗೆ ಅರೆ ನಿದ್ರೆ ಬಾತ್‌ಂತೇಳ್ಕನ ಹೊಟ್ಟೆಲಿ ಹೆಗ್ಗಣ ಓಡಾಡ್‌ದಂಗೆ ಆತ್. ಒಮ್ಮೆ ಎದ್ರೋನೋಂತ ಗ್ರೇಸುದು, ಮತ್ತೆ ಬೇಡಾಂತ ಕಾಂಬೊದು, ಅಂತೂ ಆಚೆ ಈಚೆ ಹೊಣ್ಕಿಕಂಡ್ ಇದ್ದೊ.

ಒಮ್ಮೇ ಎರ್ಡ್ ಬಂದಾಂಗೆ ಆತ್! ಪಕ್ಕನೆ ದಡಬಡಾಂತ ಎದ್ದ್ ಮಂಚ ಇಳ್‌ದ್ ಪಾಯಿಕಾನೆಗೆ ಓಡ್‌ದೊ ಮಾಸ್ತ್ರ. ಯಾಕೆ ಯಾಗೊಳು ಇಲ್ಲದ್ದ್ ಇಂದ್ ಎಂತ ಆತಪ್ಪಾ, ಪಾಯಿಕಾನೆಗೆ ಹೋಗಿ ಮುಟ್ಟಿತ್ ಪೂರಾ ಇಲ್ಲೆ, ಅಲ್ಲೇ ಅಲ್ಲೇ ಬಂದೇ ಬುಟ್ಟತ್, ತಡ್‌ಕಣಿಕೆ ಅತೇ ಇಲ್ಲೆ. ಛೆ! ಎಂಥ ವಾಕರಿಕೆ, ಎಸ್ಟ್ ಹೀಂಕರಿಕೆ, ಅಬ್ಬಬ್ಬಾ ಎಂತಾ ನಾತ, ಮೂಕು ಬುಡಿಕೇ ಬೊತ್ತು. ನನ್ದ್ ನಂಗೇ ಗಲೀಜ್, ಪಾಪ ಈ ನಾತ ಬಂದರೆ ಪಿಳ್ಳೆಕಳಿಗೆ ಹೆಂಗಾದು, ಸೊಸೆ, ಮಂಜ ಏನ್ ಹೇಳುವೊ. ಛೆ ಛೆ ಏನ್ ಆಗಿ ಹೋತು. ಈಗ ಏನ್ ಮಾಡ್ದು. ಅವು ಬಾಕೆ ಮುಂದೆ ಎಲ್ಲಾ ಕ್ಲೀನ್ ಮಾಡಿ, ನಾ ಮೀಯ್ದ್ ಬುಡೊಕುಂತ ಗ್ರೇಸಿದೊ.

ಈ ಒಂದು ವಿಸಯ ಉಟ್ಟಲ್ಲಾ ಯಾರಿಗೂ ಗೊತ್ತಾಕೆ ಆಗದ್. ಯಾರಿಗೂ ಅದರ ಸೂಕ್ಷಮನೂ ಆಕೆ ಬೊತ್ತು. ಎಲ್ಲಾ ನನ್ನದ್ ನಾನೇ ಅದರ ಪಾಡ್ ಪಟ್ಟ್‌ಕಣೊಕು. ಬೇಡ ಬೇಡ ಯಾರಿಗೂ ಗೊತ್ತಾಕೆ ಆಗದ್. ಎಲ್ಯಾರ್ ಗೊತ್ತಾಗಿ ಬುಡುದೋ, ಗೊತ್ತಾಗಿಬುಟ್ಟರೆ ದೇವ್ರೇ ಗೆತಿ! ಎಲ್ಲಿ ಸೊಸೆಗೆ ಪುಳ್ಳಿಕಳಿಗೆ ಗೊತ್ತಾಗಿ ಹೇಸಿಗೆ ಪಟ್ಟ್‌ಕಂಡವೆನೊ. ಮಂಜಂಗೆ ಗೊತ್ತಾಗಿ ಜೋರು ಮಾಡ್ದೊ. ಅವು

ಬಾಕೆ ಇನ್ನೂ ಒಂದು ಗಂಟೆ ಉಟ್ಟು, ಅದಕ್ಕೆ ಮುಂದೆ ಚೆಡ್ಡಿ, ಲುಂಗಿ, ಅಂಗಿಯೆಲ್ಲಾ ಒಗ್ದ್, ಮೀಯ್ದ್, ಏನೂ ಆಗದಾಂಗೆ ಇರಕೂಂತ ಬಾತ್‌ರೂಮಿಗೆ ಅಲ್ಲಿಂದ ರೂಂಗೆ ಗಡಿಬಿಡಿಲಿ ಆಚೆಂದ ಈಚೆ, ಈಚೆಂದ ಆಚೆ ಓಡಿಯಾಡ್ದೇ ಓಡಿಯಾಡ್ದು. ಮುಂದೆ ಹಾಕಿದ ಲುಂಗಿ ಇಲ್ಲೇ ಬಿಚ್ಚಿ ಹಾಕಿ ಲಾಯಿಕ್‌ಲಿ ಮೀಕಣಕು. ಅದಕ್ಕೆ ಮುಂದೆ ರೂಮ್‌ಂದ ಓಡಿ ಬಾಕನ ದಾರಿಲಿ ಏನಾರ್ ಉದ್ರಿ ಹೋಗುಟ್ಟೋ ನೋಡಿಕಂಡನೆಂತ ನೋಡಿಕೆ ಹೋದೊ. ಮಾಸ್ಟ್ರಿಗೆ ಈಗೀಗ ಸೆರಿ ಕಣ್ಣ್ ಕಾಂಬೊಲೆ. ಅಂತೂ ಕಂಡದ್ದೆಲ್ಲಾ ಎತ್ತಿ, ಬೊಳ್ದ್, ಪಿನೈಲ್ ಹಾಕಿ ಒರ್ಸಿದೊ. ಸೊಸೆ ಸ್ಮಿತಾ ಬಾರಿ ಕ್ಲೀನ್, ಒಂದು ಕಾಡ್, ಒಂಚೂರು ದೂಳು ಕಂಡರೂ ಗುಡ್ಸೊಕು, ಒರ್ಸೊಕು. ತಿಕ್ಕಿದರ್ನೇ ತಿಕ್ಕಿ ತಿಕ್ಕಿ, ಒರ್ಸಿದರ್ನೇ ಒರ್ಸಿ ಒರ್ಸಿಕಂಡ್ ಇದ್ದದೆ. ಅದ್ ಬಾರಿ ಸೂಕ್ಷ್ಮ. ಒಂದು ಚೂರು ವಾಸನೆ ಬಂದರೂ ಗೊತ್ತಾಗಿ ಬುಡ್ದು. ಅದ್ ಬಾಕೆ ಮುಂದೆ ಎಲ್ಲಾ ಕ್ಲೀನ್ ಆಕು. ಅಂತೂ ಮುಂದೆ ಮೀಕಣೆಂತ ಮೀಯಕೆ ಸುರು ಮಾಡ್ದೊ. ಎಸ್ಟ್ ಒರ್ಸಿರೂ, ಎಸ್ಟ್ ಸಾಬಾನ್ ಹಾಕಿರೂ ಮತ್ತೆ ಮತ್ತೆ ವಾಸನೆ ಬಂದಾಂಗೆ ಆದೆ, ಅಂತೂ ಎರ್ಡ್ ಮೂರು ಸೆತ್ತಿ ಸಾಬಾನ್ ಹಾಕಿ ಲಾಯಿಕ್ ಆಕೂಂತ ಒಂದು ಗಂಟೆ ಜಳಕ ಆತ್! ಬೇರೆ ಬಟ್ಟೆ ಹಾಕಿಕಂಡ್, ಗಲೀಜ್ ಆದ ಬಟ್ಟೆಗಳ್ನೆಲ್ಲಾ ಸರ್ಫ್ ಹಾಕಿ ಲಾಯಿಕ್ ಒಗಿಯೊಕು ಬೇಗಂತ ಗ್ರೇಸಿದೊ.

ಹೊರಗೆ ಕಾಲಿಂಗ್ ಬೆಲ್ ಆದ ಸದ್ದ್. ಛೆ ಯಾರಪ್ಪಾ ಇಸ್ಟೊತ್ತಿಗೆ ರಗಳೆ. ಬೇಗ ಬೇಗ ಕೆಲ್ಸ ಮುಗ್ಸಿ ಏನೂ ಆಗದಾಂಗೆ ಇರೊಕೂಂತೇಳ್ರೆಂತ ಬಂದ್ ನೋಡ್ರೆ ಕೇಬಲ್‌ನವ ದುಡ್ಡು ವಸೂಲಿಗೆ ಬಂದದ್. ಮಂಜ ಕೊಟ್ಟ್ ಇಸಿದ ದುಡ್ಡುನ ಕೊಟ್ಟ್ ಮೊನ್ನನ ಬೇಗ ಸಾಗ ಹಾಕಿದೊ ಮಾಸ್ಟ್ರ. ಬೇಗ ಹೋಗಿ ನನ್ನ ಬಟ್ಟೆಗಳ್ನೆಲ್ಲಾ ಒಗ್ದ್ ಹಾಕಿಬುಡೊಕು, ಸೊಸೆ ಮಂಜ ಬಾಕೆ ಮುಂದೆ ಏನೂ ಆಗದಾಂಗೆ ಇರೊಕೂಂತ ಒಗಿಯಕೆ ಸುರು ಮಾಡ್ಸೊ. ಚೆಡ್ಡಿಗೆ ಸಾಬಾನ್ ಹಾಕಿ ಬ್ರೆಸ್‌ಲಿ ಉಜ್ಜಿಕೆ ಸುರು ಮಾಡ್ದೊ, ಎಸ್ಟ್ ಉಜ್ಜಿರೂ ಲಾಯಿಕ್ ಹೋದುಲ್ಲೆ. ಅಸ್ಟೊ ಅಂಟಿ ಹೋಗುಟ್ಟು, ಅಸ್ಟೊತ್ತಿಗೆ ಪುನಃ ಬೆಲ್ಲ್‌ನ ಸದ್ದ್, ಇವರ ಪಡೆ ಮುತ್ತಿಕೆ, ಯಾಕೆ ಎಲ್ಲವೂ ಇಂದೇ ಬಾದುಂತ ಗ್ರೇಸಿಕಂಡ್ ಬಾತ್ ರೂಂದ ಹೊರ್ಡಿಕೆ ಪುರುಸೊತ್ತು ಇಲ್ಲೆ, ಜೋರು ಜೋರು ಬೆಲ್ಲ್. ಬೀಸ ಬೀಸ ಹೋಗಿ ನೋಡ್ರೆ ಕೊರಿಯರ್‌ನಂವ! 'ಸುಪ್ರೀತ್ ಇದ್ದಾರೋ?' 'ಇಲ್ಲಾ ಆಫೀಸಿಗೆ ಹೋಗಿದ್ದಾರೆ' 'ನೀವು ಅವ್ರಿಗೆ ಏನಾಗ್ಬೇಕು?' ಅವನು ನನ್ನ ಮಗ, ತಂದೆ

ನಾನು' ನಿಮ್ಮೆ ಹೆಸ್ರೇನು, ಇಲ್ಲಿ ಸೈನ್ ಮಾಡಿ' ಹಂಗೆ ಹೀಂಗೆಂತ ಇಚಾರ್ಸಿ ತಂದದರ ಕೊಡಿಕೆ ಏಸೋ ಹೊತ್ತು ಮಾಡ್ತ್. ಈ ಸುಟ್ಟೊವುಕೆ ಎಲ್ಲಾ ಎಸ್ಪ್‌ಸತ್ತಿ ಬಂದರೂ ನೆಂಪು ಇರಿಕಿಲ್ಲೆಂತ ಅವನ ಕಳ್ಸಿ, ಬಾಗ್‌ಲ್ ಹಾಕಿ ಗಂಟೆ ನೋಡ್ರೆ ನಾಲ್ಕ್‌ಮುಕ್ಕಾಲ್, ಐದಕ್ಕೆಲ್ಲಾ ಬಂದ್ ಬುಟ್ಟವೆ. ಬೇಗ ಬೇಗ ಒಗಿಯೊಕೂಂತ ಬಾತ್ ರೂಂಗೆ ಓಡ್ದೊ!?

ಮಾಸ್ತ್ರ ಚೆಡ್ಡಿ ಒಗಿಯಕೆ ಸುರು ಮಾಡ್ದೊವುಕೆ ಏನೆಲ್ಲಾ ಗೇನಗ. ಇಂತ ಹೇಸಿಗೆನ ಈ ಓಂದೆ ಮಾಡಿಕಣದ್ರೊ, ಬಾಕಿಯೊವು ಮಾಡ್ದರ ಕೇಳ್ದ ನೆನ್ಪಾತ್. ಯಾರೋ ಅಜ್ಜಿ ಬೇಕಾದ್ದೊ ಬೇಡದ್ದೊ ಏನೆಲ್ಲಾ ತಿಂದ್ ಉರ್ಚಾಟ ಸುರಾಗಿ ಸಿಕ್ಕಿದಲ್ಲೆಲ್ಲಾ ಗಲೀಜ್ ಮಾಡಿ ಮಂಜ ಸೊಸೆನ ಕೈಲಿ ಪೊರ್ಲುಲಿ ಆರತಿ ಎತ್ತಿಸಿಕಂತ್ ಗಡ! ಇನ್ನೊಬ್ಬ ನನ್ನಂತ ಅಜ್ಜ ಪೇಟೆಗೆ ಮಂಜನ ಮನೆಗೆ ಹೋದವಂಗೆ ಅಡ್ಗೆ ಮನೆ ಹಕ್ಕಲೆ ಇರುವ ಪಾಯಿಕಾನೆಲಿ ಯಾಗೊಳು ಹೊರ್ನ್ಸಿ ಹಾಕಂಡ್,, ಗಲೀಜ್ ಮಾಡಿಕಂಡ್ ಇದ್ದದೇಂತ ಅವನ ವೃದ್ಧಾಸ್ರಮಕ್ಕೆ ಸೇರ್ಸಿದೊ ಗಡ. ನಮ್ಮ ಸೋಮಣ್ಣ ಮಂಜನ ಮನೆಗೇಂತ ಪೂನಾಕ್ಕೆ ಹೋದಂವ ವಾರಲೇ ವಾಪಾಸ್ ಓಡಿ ಬಂದದಕ್ಕೆ ಯಾಕೆ ಇಸ್ಟ್ ಬೇಗ ಬಂದೇಂತ ಕೇಳ್ರೆ, ಎಂಥ ಮಾಸ್ತ್ರೇ ಅಲ್ಲಿ ಉಂಡದ್ ತಿಂದದರ ಸೆರಿಯಾಗಿ ಹೇಲುವಾಂಗೆನೂ ಇಲ್ಲೇಂತ ಹೇಳ್ತ್! ನೋಡ್ರೆ ನನ್ನ ಪರಿಸ್ಥಿತಿನೂ ಹಾಂಗೆ ಆಗುಟ್ಟು. ಯಾರ್ಯಾರಿಗೆ ಎಂತೆಂತ ಕಾಲವೋ? ನಮ್ಮ ಬಾವನ ಹೆಣ್ಣ್ ತಿಮ್ಮಕ್ಕ ಅಕ್ಕಂಗೆ ಅವರ ಸೊಸೆ ಎಲ್ಲಿಂದಲೋ ಕುರಿದ್ದೋ ಆಡ್‌ದ್ದೋ ಪಿಟ್ಟೆನ ಹಾಂಗೆ ಇರ್ದರ ಕಾಗದಲಿ ಒರ್ಸಿ ತಂದ್, 'ಇದ್ ನೀವ ಪಾಯಿಕಾನೆಗೆ ಹೋವಲ್ಲಿ ಬಿದ್ದಿತ್ತ್ ನೋಡಿ, ಪೂರ್ತಿ ಬಂದ್ ತಡಿಯಕೆ ಬೊತ್ತಾಕನ ಓಡ್ದು ಯಾಕೆ ನೀವು? ಹಂಞಾ ಮುಂದೆನೆ ಹೋಕೆ ಬೊತ್ತತಾ?'ಂತ ಹೀಯಾಳ್ಸಿತ್ತ್ ಗಡ! ನನ್ನದಲ್ಲ ಅದ್, ನಂಗೆ ಪಿಟ್ಟೆನಾಂಗೆ ಯಾಗೊಳು ಹೋದುಲ್ಲೆಂತ ಹೇಳ್ದಕ್ಕೆ, ಮತ್ಯಾರ್ದ್ ಅದ್, ನಾ ಮಾಡ್ನೆನಾ ಹಾಂಗೆ ದಾರಿಲಿ, ಅಥ್ವಾ ನಿಮ್ಮ ಮಂಜ ಮಾಡ್ವೆನಾ"ಂತ ದೊಡ್ಡ ರಂಪಾಟನೇ ಮಾಡ್ತ್ ಗಡ! ಅತ್ತೆ, ಮಾವ ಒಟ್ಟಿಗೆ ಇರ್ದು ಕುಸಿ ಇಲ್ಲರೆ ಸೊಸೆಕಳಿಗೆ ಇದೆಲ್ಲಾ ಒಂದು ನೆಪ ಅಸ್ಟೆ, ಅವರ ದೂರಿಕೆ ಒಂದು ಕಾರಣ. ಛೇ ನಂಗೆ ಇಂದ್ ಇಂತದೇ ಕತೆಗ ನೆನ್ಪಾದವೆ ಅಲ್ಲಾ? ಥೂ ಥೂ!

ಇಂದ್ ನಂಗೆ ಅವರಾಂಗೆ ಸತ್ವ ಪರೀಕ್ಷೆ ಎದ್‌ರಾಗುಟ್ಟು. ಏನ್ ಮಾಡ್ದು ನನ್ನ ಕರ್ಮ. ಬಂದದರ ಎದುರ್ಸೊಕೆ! ಅವರೆಲ್ಲರ ಸೊಸೆಕಳಾಂಗೆ ನನ್ನ ಸೊಸೆ

ಸ್ಮಿತಾ ಕಂಡಿತಾ ಮಾಡಿಕಿಲ್ಲೆ ನೋಡೊನಾ; ಮತ್ತೆ ಯಾರ ಮನ್ಸ್ ಯಾಗ ಹೇಂಗೆ ತಿರ್ಗಿದೆ ಯಾರಿಗೆ ಗೊತ್ತು! ಮತ್ತೆ ಹೊರಗೆ ಸದ್ದ್ ಆದಾಂಗೆ ಆತ್. ಮಾಸ್ಟ್ರ ಬಟ್ಟೆ ತೊಳಿವ ಕೆಲ್ಸ ಇನ್ನೂ ಪೂರಾ ಆತೇ ಇಲ್ಲೆ. ಬೊಗ್ಗಿ ಬೊಗ್ಗಿ ಸೊಂಟ ಸೋಬಾನೆ ಹೇಳ್‌ತ್ತಿತ್ತ್. ಬೇಗ ಎದ್ರಿಕೂ ಆತ್ಲೆ, ಯಾರಾರ್ ಬಂದರೆ ಹೋಗಿ ಬಾಗ್ಲ್ ತೆಗಿಯೊಕೆ ಅಲಾ? ಸೊಸೆನೋ ಮಂಜನೋ ಬಂದೋ ಏನೋ? ಆಗನ ಕಂಟ್ ವಾಸನೆ ಈಗ ಇಲ್ಲೆ. ಹಂಞ ಕಮ್ಮಿ ಆಗಿರೊಕು. ಹಾಂಗಾಗಿ ಯಾರಿಗೂ ಗೊತ್ತಾಕಿಲ್ಲೆಂತ ತನ್‌ಗೆ ತಾನೆ ಧೈರ್ಯ ತಂದ್‌ಕಂಡ್, ಹೊರಗೆ ಹೋಗಿ ನೋಡ್ನೋಂತ ಹೋಕರೆ ಅರೆ ಸ್ಮಿತಾ! ಆಗಲೇ ಅದ್ ನಡುಕೋಣೆಗೆ ಬಂದಾಗಿತ್ತ್. ಆಗ ಕೊರಿಯರ್‌ನಂವನ ಕೈಯಿಂದ ಅದೆಂತೊದು ತಕಂಡ್ ಬಾಗ್ಲ್ ಸೆರಿ ಹಾಕಿತ್ಲೆನಾ? ಎಂತಾ ಮರು, ಒಮ್ಮೆಲೆ ಸೊಸೆನ ನೋಡಿ ಗಾಬ್ರಿ ಆತ್ ಮಾಸ್ಟ್ರಿಗೆ.

'ಇಂದೇನ್ ಮಾಂವ ಮಲ್‌ಗಿತ್ಲೆನೋ?ಂತ ಸೊಸೆ ಕೇಳ್ದಾಂಗೆ ಆತ್. ಮಾಸ್ಟ್ರಿಗೆ ಅದಕ್ಕೆ ಉತ್ತರ ಕೊಡಿಕೆ ಆತ್ಲೆ. 'ನಾ ಬಾಗ್ಲ್ ಹಾಕಿತ್ಲೆನಾ'? ಒಂದು ಬೆಪ್ಪು ಪ್ರಸ್ನೆ ಬಾಯಿಂದ ಅವುಕೆ ಗೊತ್ತಾಗದಾಂಗೆ ಬಾತ್. ಈಗ ಏನ್ ಮಾಡ್ದು. ಬಾತ್‌ರೂಂಗೆ ಹೋಗಿ ಒಳ್ದ ಲುಂಗಿ ಸರ್ಟ್‌ಗಳ ಒಗಿಯೊದೋ? ಹಂಞ ನಂಗೆ ಉಸಾರಿಲ್ಲೆಂತ ಹೋಗಿ ಮಲ್‌ಗುದೋಂತೇಳುವ ಪೇಚಾಟಲಿ ಸೊಸೆ ಎದ್ರ್ ಸಣ್ಣ ಮಕ್ಕಳಾಂಗೆ ಕಣ್ಣ್ ಬಾಯಿ ಬುಟ್ಟ್ ಕಂಗಾಲಾಗಿ ನಿಂತಿದ್ದೊ ರಾಮಯ್ಯ ಮಾಸ್ಟ್ರ!!! ಒಮ್ಮೆ ಆ ಕಡೆ ಈ ಕಡೆ ನೋಡ್ದ ಸ್ಮಿತಾಂಗೆ ಹೇಳದೇ ಎಲ್ಲಾ ಗೊತ್ತಾಗಿ ಬುಡ್ತ್! ವಾಸನೆಗೆ ಮೂಕು ಮುಚ್ಚಿಕಂಡರೆ ಮಾಂವಗೆಲ್ಲಿ ಬೇಜಾರಾದೂಂತ ಹೇಂಗೋ ಸಯಿಸಿಕಂಡ್, 'ಯಾಕೆ ಮಾಂವ ಹೊಟ್ಟೆ ಸರಿ ಇಲ್ಲೆನಾ?ಂತ ಕೇಳಿಯೇ ಬುಟ್ಟತ್. ಸೊಸೆ ಕೇಳ್ದ ಪ್ರಸ್ನೆಗೆ ಮಾಸ್ಟ್ರಿಗೆ ಎಲ್ಲಿತ್ತೋ ಇಸ್ಟ್ ದಿನಾಂತ ಹೇಳುವಾಂಗೆ ದುಃಖ ಉಕ್ಕಿ ಬಾತ್. 'ಅದ್ ... ಅದ್ ನಂಗೆ . . . ಸಾಯ್ಲಿ . . . ನಂಗೆ ಒಂದೂ ಗೊತ್ತೇ ಆತ್ಲೆ ನೋಡು, ಹೇಂಗೆ ಬಾತೊ ಏನ್ ಆತೊ ಒಂದೂ ಗೊತ್ತೇ ಆತ್ಲೆ ಸಾಯ್ಲಿ ಅದ್'ಂತ ಹೇಳಿಕಂಡ್, ಸೊಸೆನ ನೋಡಿಕಾಗದೆ ಮಾಸ್ಟ್ರ ಸೀದಾ ಬಾತ್ ರೂಂಗೆ ಬೀಸ ಬೀಸ ಹೋಗಿಯೋ ಬುಟ್ಟೊ. ಎಂದೂ ಕಣ್ಣೀರ್ ಹಾಕದ ಗಟ್ಟಿಗ ಮಾಂವನ ಅವವಸ್ತೆ ನೋಡಿ ಸ್ಮಿತಾಂಗೆ ಕರ್‌ಳ್ ಚುರುಕ್‌ಂತ ಹೇಳ್ತ್. ಕೈಲಿದ್ದ ಬೇಗ್‌ನ ಅಲ್ಲೇ ಮೇಜದ ಮೇಲೆ ಕುಕ್ಕಿ ಸ್ಮಿತಾ ಮಾಂವನ ಹಿಂದೆ ಬಾತ್ ರೂಮಿಗೆ ಓಡ್ತ್. 'ಮಾಂವ ನೀವು ಹೋಗಿ ಹಂಞ ಮಲ್ಕಣಿ, ಮತ್ತೆ

ನಾ ನೀವುಗೊಂದು ಮೊದ್ದು ಕೊಟ್ನೆ. ಎಲ್ಲಾ ಸೆರಿಯಾದೆ'ಂತ ಹೇಳ್ಕನ, ಅದೊಂದು ಕೆಬಿಗೆ ಹಾಕಣದೆ, ಆವೇಸಲಿ ಲುಂಗಿನ ತೆಗ್ದ್ ಒಗಿಯಕೆ ಸುರು ಮಾಡ್ದ ಮಾಂವನ ರಟ್ಟೆ ಹಿಡ್ದ್ 'ಹೋಗಿ ಮಲ್ಕಣಿ, ಯಾಕೆ ಹಿಂಗೆಲ್ಲಾ ಬಂಗ ಬಂದರೆ, ಸೇಂಕಿಯಂಡ್, ಬುಕ್ಕಿಕಂಡ್ ಇಸ್ಟೆಲ್ಲಾ ಮಾಡಕೊ'ಂತ ಹೊರಗೆ ಹೊರ್ಡಿಸಕಂಡ್ ಬಾಕನ ಪಿಳ್ಳಿಕ ಇಬ್ಬರೂ ಸಾಲೆಂದ ಬಂದೊ, ಒಟ್ಟಿಗೆ ಮಂಜನೂ.

ಒಳಗೆ ಬಂದಾಂಗೆ ಹೆಣ್ಣ್‌ಕೂಸು 'ಎಂತದೋ ವಾಸನೆ ಅಲ್ಲಾ ಅಮ್ಮಾ'ಂತ ಕೆಳ್ದಕ್ಕೆ 'ಎಂತ ವಾಸನೆ ನಿಂಗೆ ಬಾದು, ಒಂದೂ ಇಲ್ಲೆ'ಂತ ಬಾಯಿಲಿ ಹೇಳ್ರೂ, ಕಣ್ಣ್ ಸನ್ನೆಲೇ ಮಗಳ ಬಾಯಿ ಮುಚ್ಚಿಸಿದ್ದ್ ಮಾಸ್ಟ್ರಿಗೆ ಗೊತ್ತಾತ್. 'ನೋಡಿ ಮಾಂವ ಸುಮ್ಮನೆ ಬಂಗ ಬಂದವೆ, ನೀವಾರ್ ಹಂಞ ಹೇಳಿ'ಂತ ಗಂಡಂಗೆ ಹೇಳ್ತ್. ಹಂಗೆ ಮಾಂವನ ರೂಂಗೆ ಬಂದ್, ಮಾವಂಗೆ ಮಲ್‌ಗಿಕೆ ಎಲ್ಲಾ ಸೆರಿ ಮಾಡಿಕೊಡೊನೋಂತ ಬಂದದಕ್ಕೆ ಮಾಂವನ ಹಾಸಿಗೆನೂ ಹೇಸಿಗೆ ಆದ್ದ್ ಕಂಡತ್. ಮಾಂವ ಹಾಸಿಗೆಲಿ ಕುದ್ರಿಕೆ ಮುಂದೆನೆ ಹಳೆ ಬೆಡ್ ಸ್ಪ್ರೆಡ್ ತೆಗ್ದ್ ಮುದ್ದೆ ಮಾಡಿ ಮೂಲೆಲಿ ಹಾಕಿ, ಕಪಾಟ್‌ಂದ ಹೊಸ್ತ್ ತೆಗ್‌ದ್ ಹಾಸಿ, 'ಮಾಂವ ಹಂಞ ಮಲ್‌ಕಂಡ್, ವಿಸ್ರಾಂತಿ ತಕಣಿ'ಂತ ಹೇಳ್ತ್. ಅಯ್ಯೋ ಹಾಸಿಗೆಗೂ ಆಗುಟ್ಟಾ ಸುಟ್ಟದ್ ನಂಗೆ ಏನಾತ್‌ಂತಳೇ ಗೊತ್ತಾತ್ಲೆ, ಕನ್ಸ್, ಕನ್‌ಸ್ ಬಿದ್ದಾಂಗೆ ಆತ್'ಂತ ಬೆಪ್ಪು ಬೆಪ್ಪಾಗಿ ಬೇಜಾರ್‌ಂದ ಹೇಳ್‌ತ್ತಿದ್ದ ಮಾಂವನ ಮಲ್‌ಗ್‌ಸಿ, ಮುದ್ದೆ ಮಾಡಿ ಹಾಕಿದ ಹೇಸಿಗೆ ಆದ ಬಟ್ಟೆನೆಲ್ಲಾ ತಕಂಡ್ ಬಾತ್‌ರೂಂಗೆ ಒಗಿಯಕೆ ಹೋತು. ಇತ್ತ ಕಣ್ಣೀರ್ ತುಂಬ್‌ಸಿಂಡ್ ಮಲ್‌ಗಿದ್ದ ಮಾಸ್ಟ್ರ್‌ಗೆ ಒಮ್ಮಲೇ ಆನೆ ಬಲ ಬಂದಾಂಗೆ, ಬಡ್ಕನೆ ಎದ್ದ್ ನಾನೇ ಎಲ್ಲಾ ಒಗ್ದನೆಂತ ಬಾತ್‌ರೂಂಗೆ ಬೀಸ ಬೀಸ ಹೋಗಿ ನೋಡ್ರೆ ಸೊಸೆ ಸ್ಮಿತಾ ನನ್ನ ಗಲೀಜ್‌ನೆಲ್ಲಾ ಉಜ್ಜಿ ಉಜ್ಜಿ ತೊಳಿತಾ ಉಟ್ಟು. 'ಅಯ್ಯೋ ಸ್ಮಿತಾ ನೀ ತೊಳಿಬಡ, ನನ್ನ ಹೇಸಿಗೆ ನಾನೇ ತೊಳ್ದನೆ'ಂತ ಒಗೆತ್ತಿದ್ದ ಲುಂಗಿನ ಎಳಿಯಕೆ ಹೋದೊ. ಅಪ್ಪನ ಗಾಬರಿ, ಅವಮಾನ, ಸಂಕಟಗಳೆಲ್ಲಾ ನೋಡ್ದ ಮಂಜಂಗೆ ಕರ್‌ಳ್ ಹಿಂಡಿದಾಂಗೆ ಆತ್. ಆಗ ಸ್ಮಿತಾ ಒಂದು ಮಾತ್ ಹೆಳ್ತ್ 'ಬುಡಿ ನೀವು, ನನ್ನ ಅಪ್ಪಂಗೆ ಹೀಂಗೆ ಆಗಿದ್ದರೆ ನಾ ಸುಮ್ಮನೆ ನೋಡಿಕಂಡ್ ಕುದುರ್‌ತ್ತಾ ಇರ್‌ತ್ತಿದ್ದೆನಾ'??

ಸೊಸೆನ ಈ ಮಾತ್ ಕೇಳ್ದ ಮಾಸ್ಟ್ರ ಇನ್ನೇನ್ ಹೇಳಲೀಂತ ಬಾಯಿ ಮುಚ್ಚಿಕಂಡ್ ಈಚೆ ಬಂದ್ ರೂಂಗೆ ಹೋಗಿ ಒಲ್ಲಿ ಹೊದ್ದ್ ಮಲ್‌ಗಿದೊ. ಹಂಞಾ ಹೊತ್ತ್‌ಲಿ ಬಟ್ಟೆನಲ್ಲಾ ಒಗ್ದ ಸೊಸೆ, ಸಾಂಬ್ರಾಣಿ, ಗಂಧ ದೂಪ ಹಾಕಿ ಹೊಗೆನ ಎಲ್ಲಾ ಕೋಣೆಲಿ ಹಿಡ್‌ಕಂಡ್ ಬಾದು ಕಂಡತ್. ಅಸ್ಟ್ ಹೊತ್ತಿಗೆ ಮಾಸ್ಟ್ರ ಮನ್‌ಸ್‌ಲಿ ಇದ್ದ ಆತಂಕ, ತಲ್ಲಣ, ಸಂಕೋಚ ಎಲ್ಲಾ ಹೋಗಿ ಸೊಸೆನ ಕೈಲಿರುವ ಗಂಧ ದೂಪದ ಪೊರಿಮಳದೊಟ್ಟಿಗೆ ಮನ್‌ಸಿಗೂ ಉಲ್ಲಾಸ ಬಾತ್. ಆಗ ಕತ್ತಲೆ ಆಕಂಡ್ ಬಾತ್‌ಂತ ಮಂಜ ಲೈಟ್ ಹಾಕಿತ್. ಆ ಲೈಟ್‌ನ ಬೊಳ್ಪುಲಿ ಮಾಸ್ಟ್ರ ಸಂಬಂಧಗಳ ಬೊಳ್ಪುನ ಕಾಂಬತಾ ಮಾತಾಡದೆ ಮನ್‌ಸ್‌ಲೇ ಕುಸಿ ಪಟ್ಟ್‌ಕಂಡ್ ಮಲ್‌ಗಿದೊ.

* * * * *

# ಎಂತಾ ಪ್ರೀತಿ ನಿಂದ್

'ಮಲೆನಾಡು ಪ್ರವಾಸಕ್ಕೆ ವಾಸಕ್ಕಲ್ಲ'ಂತ ಹೇಳುವ ಕುವೆಂಪು ಮಾತ್ ನೆನ್ಪಾಕನ ಕಾಲ ಮಿಂಚಿ ಹೋಗಿತ್ತ್. ಸಾಕಸ್ಟ್ ವ್ಯವಹಾರ ಜ್ಞಾನ ಇಲ್ಲದ ಪೆಮ್ಮಯ್ಯ ಮಾಸ್ಟ್ರ ನಮ್ಮವು ನಂಬಿಕಸ್ತರ್‌ಂತ ಕೆಲವರ ಮಾತ್‌ನ ಕೇಳಿ ದೊಡ್ಡ ಹೊಂಡಕ್ಕೆ ಬಿದ್ದೊ. ಮನೆ ಬೇಕು, ಗದ್ದೆ-ತೋಟ ಎಲ್ಲಾ ಬೇಕೂಂತ ಹೇಳುವ ಹೆಣ್ಣ್‌ನ ಆಸೆಗೆ ಮಳೆಯ ತೌರ್ ಆದ ಗಾಳಿಬೀಡ್‌ನ ಹಕ್ಕಲೆ ಆಸ್ತಿ ತೆಗ್ದ್ ಪೇಚಾಡುವಾಂಗೆ ಆತ್. ಅಬ್ಬಾ ಎಂತಾ ಮಳೆ, ತಿಂಗಳಗಟ್ಟಲೆ ಹನಿಕಡಿಯದೆ ಒಂದೇ ಸಮನೆ ಜೋಜೋಂತ ಸುರಿವ ಮಳೆ. ಹೆಸ್ರಿಗೆ ತಕ್ಕ ಹಾಂಗೆ ಮಳೆನೊಟ್ಟಿಗೆ ಸುಂಯ್ಯಿತ ಬೀಸುವ ಗಾಳಿ ಬೇರೆ. ಅಂತಾ ಒಂದು ಮಳೆಗಾಲ ಪೆಮ್ಮಯ್ಯ ಮಾಸ್ಟ್ರ ಬನಿಯನ್ ಅಂಗಿ ಅದರ ಮೇಲೆ ದಪ್ಪದ ಸೆಟ್ಟರ್ ಹಾಕಿ ಒಲ್ಲಿ ಕಂಬ್ಳಿ ಎರ್ಡ್‌ರ್ಡ್ ಹೊದ್ದು ಮಲ್‌ಗಿಯೊಳೊ. ಆದರೂ ಹಲ್ಲ್ ಕಟಕಟಂತ ಹೇಳುವಾಂಗೆ ಚೆಳಿ. ಹೊರಗೆ ಆ ಜಡಿಮಳೆಗೆ ಕಪ್ಪೆಗಳ ವಟ ವಟ, ಜೀರುಂಡೆಗಳ ಜಿರಿಜಿರಿ, ಸುಂಯ್ಯಿತ ಬೀಸುವ ಗಾಳಿ, ಕಿಟ್‌ಕಿ ಬಾಗ್ಲ್ ಹಾಕಿದ್ದರೂ ಅದರ ಸೆರೆಂದ ಬರುವ ಚೆಳಿಗಾಳಿಲಿ ಒಬ್ಬನೆ ಕೇರೆಟೆನಾಂಗೆ ಸುರುಂಟಿ ಮಲ್‌ಗಿಯೊಳೊ. ಜಪ್ಪಯ್ಯಾಂತ್ಯೇಳ್ರೊ ಸರ್ವತಾ

ನಿದ್ದೆ ಹಕ್ಕಲೆ ಸುಳೀಲ್ಲೆ. ನಿದ್ದೆ ಬಾರದ್ದಕ್ಕೆ ಆ ಪುಡೆಗೊಮ್ಮೆ ಈ ಪುಡೆಗೊಮ್ಮೆ ಹೊಣ್ಕಿ ಹೊಣ್ಕಿಯಂಡ್ ಇರ್ಕನ ಅವರ ಯೌವನದ ದಿನಗಳ್ಲಿ ಮಾಡ್ದ ಎ.ಎ.ಸ್.ಮೂರ್ತಿಯವರ 'ಹುಚ್ಚ' ನಾಟಕ ನೆನ್ಪಾತ್. ಆ ನಾಟಕಲಿ ಶ್ಯಾಮಣ್ಣ 'ಅಮ್ಮ ಹೋದ್ಲು, ಮಗ ಹೋದ, ಈಗ ನೀನೂ ಹೋದೆ ಇನ್ನು ನಾನು ಒಂಟಿ.... ಒಂಟಿ'ಂತ ಗೋಳಾಡುವ ಮಾತ್ ನೆನ್ಪಾಗಿ, ಈಗ ನಾನೂ ಒಂಟಿ... ಒಂಟಿಂತಾ ಗ್ರೇಸಿಕಂಡೊ. ಹೊದ್ದ ಕಂಬ್ಳಿ ಒಳಗೆ ನಡ್‌ಗಿದೊ.

ಚಿನ್ನಮ್ಮ ಟೀಚರ್ ನೊಡು ಪ್ರಾಯಲೆ ಪೆಮ್ಮಯ್ಯ ಮಾಸ್ಟ್ರ ಒಂಟಿಯಾಗಿ ಮಾಡಿ ಬಾರದ ಲೋಕಕ್ಕೆ ಹೋಗಿಯೇ ಬುಟ್ಟೊ. ಬೊದುಕೊಕು, ಮಕ್ಕಳಿಗೆ ಮೊದುವೆ ಲಾಯ್‌ಕ್‌ಲಿ ಮಾಡ್ಲೊಕು, ಪಿಳ್ಳಿಕಳ ಬಾಲಲೀಲೆಗಳ ನೋಡಿಕಂಡ್ ಕುಸೀಲಿ ವೃದ್ಧಾಪ್ಯನ ಕಳಿಯೊಕೂಂತ ಏನೋ ಆಸೆ ಇಸಿಕಂಡಿದ್ದ ಟೀಚರ್‌ನ ದೇವ್ರ್ ಬೇಗ ಕರ್ಸಿಕಂಡೊ! 'ಹೌದು ಬೊದ್‌ಕೊಕೂಂತ ಗ್ರೇಸಿದವುಕೆ ಬೊದುಕು ಇಲ್ಲೆ. ಸಾಕ್ ಈ ಬೊದುಕು ದೇವ್ರೆ ಬೇಗ ಕರ್ಸಿಕಂತ ಗ್ರೇಸವುಕೆ ಸಾವೆ ಬಾದುಲ್ಲೆ. ಇದಕ್ಕೇ ವಿಧಿ ಆಟಂತ ಹೇಳ್ದೂ'ಂತ ಪೆಮ್ಮಯ್ಯ ಮಾಸ್ಟ್ರ ಹೇಳಿಕಂಡವೆ. ಇವರಿಬ್ಬರ್ದ್ ಅಪ್ರೂಪದ ಜೋಡಿಯಾಗಿತ್ತ್. 'ಇದ್ ಗೋಣಿಕೊಪ್ಪಂದ ತಂದ ಜೋಡಿ'ಂತ ಕೆಲವು ಜನ ಹಿಂದೆಂದ ತಮಾಸೆ ಮಾಡ್ತಿದ್ದೊ! ಆದರೆ ಮೊದುವೆ ಆದ ಸುರುಲಿ ಸಾನ್ ಮಾಸ್ಟ್ರ ಹೆಣ್ಣ್‌ನ ಬುಟ್ಟು, ಆ ನಾಟಕ ಅಭ್ಯಾಸ, ಅಲ್ಲಿ ಭಾಷಣ, ಕವಿಗೋಷ್ಠಿ, ಬಳಗ, ಸಂಘಂತ ಸುತ್ತಿಕಂಡೇ ಇರ್‌ತ್ತಿದ್ದೊ. ಹೆಣ್ಣ್ ಪಾಪ ಕಣ್ಣ್ ಹೋದ ಕೋಳೀನಾಂಗೆ ಗಂಡ ಯಾಗ ಬಂದವೇಂತ ಕಾದ್‌ಕಂಡ್ ಕುದ್ರುತ್ತಿದ್ದೊ. ಹೊಸ ಜಾಗ, ಗುರ್ತದವು ಇಲ್ಲೆ, ಮಾಡೊಕಾದ ಕೆಲ್ಸಗಳ ಮುಗ್ಸಿ ಕತೆ, ಕಾದಂಬರಿಗಳ ಓದಿಕಂಡ್ ಕುದ್ರುತ್ತಿದ್ದೊ. ಗಂಡಂಗೆ ಎಲ್ಲಾ ಅಚ್ಚ್‌ಕಟ್ಟ್ ಆಕು, ಇಸಿದ ಪುಸ್ತಕ, ವಸ್ತುಗ ಎಲ್ಲಾ ಇದ್ದ್ ಇದ್ದಾಂಗೇ ಇರೊಕು. ಒಂದು ಚೂರು ಆಚೀಚೆ ಆದರೂ ಸಿಡ್‌ಕ್, ಮೂಕುನ ಕೊಡಿಲೇ ಸಿಟ್ಟ್, ಭಗ್‌ಂತ ಒಮ್ಮೆ ಎದ್ದ್, ಗಳಿಗೆಗೆ ತಣ್ಣಂಗೆ ಆವ ಮೊನ್ಸ್. ಗಂಡನ ಈ ಎಲ್ಲಾ ಸ್ವಭಾವನ ಹೊಟ್ಟೆಲಿ ಹಾಕಂಡ್, ಏನಾರೂ ನನ್ನ ಗಂಡ ಕುಡ್ಕ ಅಲ್ಲ, ಪೋಲಿ ಪೊರ್ಕಿ ಅಲ್ಲಾಂತ ಚಿನ್ನಮ್ಮ ಟೀಚರ್ ಸಮಾಧಾನ ಪಟ್ಟ್‌ಕಂಡ್ ಇದ್ದೊ.

ಮೊದುವೆ ಆದ ಸುರುಲಿ ಒಂದು ಕಾಡ್ ಗುಡ್ಡೆ ಸಾಲೆಗೆ ಚಿನ್ನಮ್ಮ ಟೀಚರ್‌ಗೆ ವರ್ಗ ಆತ್. ಮನೆಂದ ಮೂರು ನಾಲ್ಕ್ ಕಿ.ಮೀ. ಬಸ್ ಗಿಸ್ ಇಲ್ಲೆ, ನಟರಾಜ ಮೋಟರೇ ಗತಿ. ಒಮ್ಮೊಮ್ಮೆ ಯಾರಾರ್ ದೊಡ್ಡ ಮನ್ಸ್‌ನ ಪ್ಲಾಂಟರ್‌ಗ 'ಬನ್ನಿ

ಟೀಚರ್ ನಾನು ಆ ಕಡೆ ಹೋಗ್ತ್ತೀನಿ'ಂತ ಜೀಪುಲಿಯೋ, ಕಾರ್‌ಲಿಯೋ ಹತ್ತಿಸಿಕಂತಿದ್ದೊ, ಅದು ಸಿಕ್ಕುದು ಅಮಾಸೆಗೊಮ್ಮೆ ಹುಣ್ಣಿಮೆಗೊಮ್ಮೆ! ಕಾಪಿ ತೋಟಗಳ ನೋಡಿಕಂಡ್, ಗುಡ್ಡೆನ ಹತ್ತಿ ಇಳ್ದ್, ಪ್ರಕೃತಿ ಸೌಂದರ್ಯ ಸವಿತಾ ಸಾಲೆನ ದಾರಿ ಸಾಗ್ತ್ತಿತ್ತ್. ಸಾಲೆ ಮಕ್ಕ ಟೀಚರ್ ಬಾದರ ದೂರಂದ ಕಂಡ ಕೂಡ್ಲೇ ಓಡಿ ಬಂದ್ ಟೀಚರ್ ಕೈಯಿಂದ ಬೇಗ್, ಕೊಡೆನೆಲ್ಲಾ ತಕಂಡ್ ಓಡ್ತ್ತಿದ್ದೊ. ಮೂರು ಕ್ಲಾಸಿಗೆ ಹದಿನೈದ್–ಇಪ್ಪತ್ತ್ ಮಕ್ಕ ಇದ್ದ ಏಕೋಪಾಧ್ಯಾಯ ಸಾಲೆ, ದಿನಾ ಸಾಲೆಗೆ ಬರೋವು ಬರೇ ಹತ್ತ್ ಹನ್ನೆರ್ಡ್ ಮಕ್ಕ. ಈ ಮಕ್ಕಳಿಗೆ ಏಕ ಉಪಾಧ್ಯಾಯ!? ಅಂತೂ ಈ ಟೀಚರ್ ಸಾಲೆಗೆ ಬಂದ ಮೇಲೆ ಟೀಚರ್‌ನ ಕಾಲ್‌ಗುಣನೊ, ಬಾಯಿಗುಣನೊ ಗೊತ್ಲೆ, ಮಕ್ಕಳ ಸಂಕೆ ಹೆಚ್ಚಾಗ್ತಾ ಹೋತು. ಕಾಪಿ ತೋಟಕ್ಕೆ ಅಯ್ಯೆ, ಅಪ್ಪ ಕೆಲ್ಸಕ್ಕೆ ಹೋಕನ ಮನೇಲಿದ್ದ ತಮ್ಮ ತಂಗೆನೋ ನೋಡಿ ಕಂಡಿದ್ದ ಮಕ್ಕಳ ಪೂಸಿ ಮಾಡಿ, ಅಯ್ಯೆ, ಅಪ್ಪಂಗೆ ಬುದ್ಧಿ ಹೇಳಿ ಅವು ಸಾಲೆಗೆ ಬರುವ ಹಾಂಗೆ ಮಾಡ್ದೊ ಟೀಚರ್. ಸಾಲೆಗೆ ಸೇರದೆ ಧನಿಗಳ ದನ ಮೇಸಿಕಂಡಿದ್ದ ಹತ್ತ್ ವರ್ಸದ ಹೈದನ ಲೈನ್ ಮನೆಗೆ ಹೋಗಿ ಈಗನ ಕಾಲಲಿ ಓದಿಕೂ ಬರಿಯಕೂ ಗೊತ್ತಿಲ್ಲರೆ ಏನೂ ಪ್ರೋಜನ ಇಲ್ಲೆ, ಮೊನ್ನ ಆದವಂಗೆ ಅವನ ದಸ್ಕತ್ ಹಾಕಿಕಾರು ಗೊತ್ತಿರೊಕು ಹಾಂಗೆ ಹಿಂಗೆಂತ ಹೈದಂಗೂ ಮನೆವುಕೂ ಗಂಟೆಕಟ್ಲೆ ಉಪದೇಸ ಮಾಡಿ ಹೈದನ ಸಾಲೆ ಮೆಟ್ಲ್ ಹತ್ತುವಾಂಗೆ ಮಾಡ್ದ ಟೀಚರ್ ಮೇಲೆ ಅಯ್ಯೆ ಅಪ್ಪಂಗೆ ಏನೋ ಭಕ್ತಿ, ಗೌರವ!

ಪೆಮ್ಮಯ್ಯ ಮಾಸ್ಟ್ರ ಸಂಸಾರಿ ಆದ ಮೇಲೆ ಅವರ ಮನೆಗೆ ಬಂದು ಹೋವ ನೆಂಟರಿಸ್ಟರ್, ಬಂಧು ಬಳಗ ಹೆಚ್ಚಾತ್. ಇದಕ್ಕೆ ಮುಖ್ಯ ಚಿನ್ನಮ್ಮ ಟೀಚರ್‌ನ ಚಿನ್ನದಂತ ಮನ್ಸ್. ನಮ್ಮ ನೆಂಟರಿಸ್ಟರ್ ನಮ್ಮ ಮನೆಗೆ ಬಾರದೆ ಇನ್ನಾರ ಮನೆಗೆ ಹೋದೂಂತೇಳುವ ದೊಡ್ಡ ಮನ್ಸ್. 'ನಮ್ಮ ಮನೆ ಸಣ್ಣದಾದರೂ ಮನ ದೊಡ್ಡದ್'ಂತ ಮಾಸ್ಟ್ರ ಹೆಣ್ಣ್‌ನ ನೋಡಿಕಂಡ್ ಹೇಳ್ತ್ತಿದ್ದೊ. ಎಸ್.ಎಸ್.ಎಲ್.ಸಿ. ಪಿ.ಯು.ಸಿ. ಪರೀಕ್ಷೆ ಬರಿಯಕೆ ಬಾವ ನೆಂಟ್ರ ಮಕ್ಕ, ಅವರ ನೆರೆಕರೆವುಕ್ಕೆಲ್ಲಾ ಆಸ್ರಯ ತಾಣ. ಇನ್ನು ಮಾಸ್ತ್ರ ದೋಸ್ತಿಗ, ಹಳೆ ವಿದ್ಯಾರ್ಥಿಗಂತ ಬಂದು ಹೋವರ ಸಂಖ್ಯೆ ಯಾಗೊಳು ಕಮ್ಮಿ ಆತಿತ್ಲೆ. ಇನ್ನು ಕೆಲವು ಜನ ಆ ಪುಸ್ತಕ ಮಾಡೊನೊ, ಈ ಪತ್ರಿಕೆ ಹೊರ್ಡ್‌ಸೊನೋಂತ ಬಂದ್ ಮಾಸ್ತ್ರ ಚಂದಾ ವಸೂಲಿಗೆ ಕರ್ಕಂಡ್ ಹೋತಿದ್ದೊ. ಅಂತವು ಅವರ ತಿರ್‍ಗಾಟ ಮುಗ್ಸಿ, ಕತ್ತಲೆಗೆ ಬಾತಿದ್ದದ್ ಇವರ ಮನೆಗೇ. ತುಂಬಿದ ಬೊಸ್ರಿ ಆಕಂಡ್

ಇರ್ಕನೂ ಬಂದವುಕೆ ಊಟ ತಿಂಡಿ ಮಾಡಿ ನೆಗೆ ಮೋರೆಲಿ ಊಟ ಇಕ್ಕ್‌ತ್ತಿದ್ದ ಚಿನ್ನಮ್ಮ ಟೀಚರ್ ಕಂಡರೆ ಎಲ್ಲವುಕೂ ಅಭಿಮಾನ. ಒಬ್ಬ ದೊಡ್ಡ ಸಂಪಾದಕ ಇತ್ತ್. ವಾರಕ್ಕೆ ಎರ್ಡ್ ಮೂರು ಸತ್ತಿ ಬಂದ್ ಒಳಕಂಡ್ ಹೋತಿದ್ದ ಮೊನ್ನೆ, ಟೀಚರ್‌ಗೆ ಹೆರಿಗೆ ಆಗಿ ಬಾಣಂತೀಂತ ಗೊತ್ತಾದ ಮೇಲೆ ಇತ್ತ ತಲೆನೇ ಇಸಿತ್ಲೆ!? ಆದರೂ ಟೀಚರ್ ಮಾತ್ರ ಅವನ ಪತ್ರಿಕೆ ಪ್ರಕಟ ಆತ, ಹೇಂಗುಟ್ಟು? ಅವನ ಕೆಲ್ಸನ ಎಲ್ಲವೂ ಮೆಚ್ಚೊಕಾದ್ದೆಂತ ಬಾಯಿ ತುಂಬಾ ಹೊಗ್‌ಳ್‌ತ್ತಿದ್ದೊ.

ಚಿನ್ನಮ್ಮ ಟೀಚರ್ ಒಂದು ದಿನ ನೆರ್ಮನೆ ಬೊಳ್ಳಮ್ಮನವರ ಮನೆಗೆ ತರಂಗ ಪುಸ್ತಕ ಕೊಡೊನಾಂತ ಹೋಕನ ಬೊಳ್ಳಮ್ಮ ಅವರ ಸಣ್ಣ ಕೂಸುನ ಕಾಲ್‌ಲಿ ಮಲ್ಗ್‌ಸಿಕಂಡ ಮೀಸ್ತಾ ಇದ್ದೊ. ಟೀಚರ್‌ಗೆ ಕೂಸುನ ನೋಡ್ಕನೆ ಏನೋ ಎತ್ಯಾಸ ಕಂಡಾಂಗೆ ಆತ್, ಬೆಳ್ಳಂಗೆ, ಪುಡ್ಯನೆ ಇದ್ದ ಕೂಸುನ ಕಾಲ್‌ಲಿ ಹೆಚ್ಚ್‌ಕಮ್ಮಿ ಕಂಡಾಂಗೆ ಆಗಿ ನೀವು ನಾಳೆನೆ ಮಡಿಕೇರಿ ಮಕ್ಕಳ ಡಾಕ್ಟ್ರ ಅನಿಲ್ ಬೋಪಯ್ಯನವರ ಹಕ್ಕಲೆ ತೋರ್ಸಿಕಂಡ್ ಬನ್ನೀಂತ ಹೇಳ್ದೊ. ಟೀಚರ್ ಸುಮ್ಮನೆ ಸುಮ್ಮನೆ ಏನಾರ್ ಸೂನೆ ಹೇಳುವ ಜನ ಅಲ್ಲಾ, ಅಂತೂ ತೋರ್ಸಿಕಂಡ್ ಬರೋನಾಂತ ಹೋದರೆ ಡಾಕ್ಟ್ರ ಪರೀಕ್ಷೆ ಮಾಡಿ ಕೂಸುನ ಎಡ್ಡ ಕಾಲ್ ಬಲ್ದ ಕಾಲ್‌ಂದ ಹಂಞ ಗುಡ್ಡು ಅದಕ್ಕೆ ಒಂದು ವರ್ಸ ಒಂದು ಬೆಲ್ಟ್ ಹಾಕೊಕು, ಹಂಗೆ ಹಾಕಿರೆ ಎಲ್ಲಾ ಸೆರಿಯಾದೇಂತ ಹೇಳ್ದೊ. ಆ ಮೇಲೆ ಕೂಸು ಎಲ್ಲಾ ಮಕ್ಕಾಳಂಗೆ ಆಗಿ ಆಟ ಓಟಗಲ್ಲಿ ಸೇರಿಕಂಬಕನ ಬೊಳ್ಳಮ್ಮ ಮತ್ತೆ ಗಂಡ ಕಾಳಪ್ಪ ಯಾಗೊಳು ಚಿನ್ನಮ್ಮ ಟೀಚರ್ನ ನೆನ್ಸಿಕಂಬೊತ್ತಿದ್ದೊಗಡ!

ಒಂದು ದಿನ ಪೆಮ್ಮಯ್ಯ ಮಾಸ್ಟ್ರಿಗೆ ತಮ್ಮನ ಕಾಗದ, ನನ್ನ ಹೆಣ್ಣ್‌ಗೆ ಒಂಬತ್ತ್ ತಿಂಗ ತುಂಬಿತ್. ಇಲ್ಲಿ ನಾವಿರುವ ಕಾಡು ಗುಡ್ಡೆ ಹಕ್ಕಲೆ ದೊಡ್ಡ ಆಸ್ಪತ್ರೆ ಇಲ್ಲೆ, ಹೆರಿಗೆ ಆಕನ ಮುಟ್ಟ ನಿಮ್ಮಲ್ಲಿ ಹಾಕಣಕಾಂತ. ಕಾಗದ ನೋಡಿ ಏನ್ ಮಾಡ್ದೂಂತ ಮಾಸ್ಟ್ರ ಗ್ರೇಸಿಕಂಡ್ ಇರ್ಕನ, ಕಾಗದ ನೋಡ್ದ ಚಿನ್ನಮ್ಮ ಟೀಚರ್ ಇಂತಾ ಸಮೆಲಿ ನಾವು ಸಾಯ ಮಾಡದೆ ಇನ್ಯಾರ್ ಮಾಡ್ದು, ತಂಗೆನ ಕರ್ಕಂಡ್ ಬರ್ಲಿ, ಇಂದೇ ಕಾಗದ ಬರಿಯನಿ. ಹೇಂಗಾರ್ ಸುದಾರ್ಸಿರೆ ಆತ್‌ಂತ ಹೇಳ್ದೊ. 'ಅಂದ್ ನೀ ನಿನ್ನ ನಾದಿನಿ ಯಾವುದೋ ಟ್ರೈನಿಂಗ್‌ಗೆ ಬಂದದರ ತಿಂಗಳ ಗಟ್ಲೆ ಹಾಕಂಡ' ಈಗ ನನ್ನ ನಾದಿನಿ, ಬೆಡ್‌ರೂಂ ನೀವುಗೇ ನಂಗೆ ಹೊರಗೆ ಜಗಲಿಯೇ ಗೆತಿ'ಂತ ಪರಂಚಿಕಂಡೊ. ಆಗ ಟೀಚರ್ 'ಕಸ್ಟಕಾಲಲಿ ಒಬ್ಬಂದೊಬ್ಬ ಸಾಯ ಮಾಡದೆ ಇದ್ದರೆ ಬಂಧು ಬಳಗಾಂತ ಇದ್ದ್ ಏನ್ ಸುಖ'ಂತ ಕೇಳ್ದೊ. 'ಹೌದಪ್ಪಾ

ನಿಂಗೆ ಮುಂದೆ ಕಸ್ಟ ಬಂದರೆ ಸಾಯಕ್ಕೆ ಕೈಗೊಬ್ಬ, ಕಾಲಿಗೊಬ್ಬ ಬರುವೊ'ಂತ ತಮಾಸೆ ಮಾಡ್ದೊ. ಅಂತೂ ಇಂತೂ ಕುಂತಿ ಮಕ್ಕಳಿಗೆ ವನವಾಸಾಂತ ಹೇಳ್ವಾಂಗೆ ನಂಗೂ ಒಂದು ರೀತಿಯ ಮನೆಲಿ ವನವಾಸನೇಂತ ಮಾಸ್ಟ್ರ ಗ್ರೇಸಿಕಂಡ್, ಮಕ್ಕಳ ಟೆಸ್ಟ್ ಪುಸ್ತಕ ತಿದ್ದುದರ ಮುಂದುವರ್ಸಿದೊ.

ಲೋಕಲಿ ಬೀಡಿ ಸಿಗ್ರೇಟ್ ಸೇದೊವುಕೆ, ಹೆಂಡ ಸರಾಯಿಲೇ ಮೀಕಂಡ್ ಇರೊವುಕೆ ಯಾವ ಕಾಯಿಲೆನೂ ಹಕ್ಕಲೆ ಸುಳೀಲ್ಲೆ. ಯಾವ ದುಶ್ಚಟಗಳೂ ಇಲ್ಲದವುಕೆ ಏನೋ ಎಲ್ಲಾ ಕಾಯಿಲೆಗ! ಒಂದು ಎಲೆ ಅಡಿಕೆನೂ ತಿನದ ಚಿನ್ನಮ್ಮ ಟೀಚರ್‌ಗೆ ಏನೋ ಕಾಯಿಲೆ ಬಾತ್. ಉಸ್‌ರಾಡ್‌ಕನ ಏನೋ ಗೊರೊ ಗೊರೊ, ಎದೆ ಬೇನೆ, ಮನೆ ಮೆಟ್ಟ್ ಹತ್ತಿಕೂ ಕಸ್ಟಪಡುವಾಂಗೆ ಆತ್. ಮಡಿಕೇರಿಲಿ ಡಾಕ್ಟ್ರಗೆ ತೋರ್ಸ್‌ಕನ ಸದ್ಯಕ್ಕೆ ನಾ ಮೊದ್ದು ಕೊಟ್ಟನೆ, ನೀವು ಮೈಸೂರಿಗೆ ಕರ್‌ಕಂಡ್ ಹೋದು ಒಳ್ಳದ್‌ಂತ ಹೇಳ್ದೊ. ಹಂಗೇ ಮರ್‌ದಿನಾನೆ ಪೆಮ್ಮಯ್ಯ ಮಾಸ್ಟ್ರ ಮಕ್ಕಳ್ನೂ ಕರ್ಕಂಡ್ ಹೆಣ್ಣ್‌ನ ಸ್ಪೆಷಲಿಸ್ಟ್‌ಗಳಿಗೆ ತೋರ್ಸಿಕೆ ಮೈಸೂರಿಗೆ ಹೊರ್ಟೇ ಬುಟ್ಟೊ. ಮೈಸೂರ್‌ಲಿ ಬಿ.ಎಂ.ಆಸ್ಪತ್ರೆಗೆ ಹೋದೋ. ಟೀಚರ್‌ನ ನೋಡ್ದ ಡಾಕ್ಟ್ರ ಇದ್ ಹಾರ್ಟ್‌ಗೆ ಸಂಬಂಧಪಟ್ಟದ್, ಹಂಞಾ ಸೀರಿಯಸೇಂತ ಹೇಳಿ ಐ.ಸಿ.ಯು.ಗೇ ಸೇರ್ಸಿದೊ. ಅಂದೇ ರಾತ್ರಿ ಡಾಕ್ಟ್ರ ಹಾರ್ಟ್‌ಲಿ ನೀರ್ ತುಂಬಿಟ್ಟು, ಅದರ ತೆಗಿಯೊಕೂಂತ ಹನ್ನೆರ್ಡ್ ಗಂಟೆಗೆ ಆಪ್ರೇಸನ್ ಥಿಯೇಟರಿಗೆ ಸಾಗ್‌ಸಿದೊ. ಪೆಮ್ಮಯ್ಯ ಮಾಸ್ಟ್ರ ಆಪ್ರೇಸನ್ ಥಿಯೇಟರ್ ಹೊರಗೆ ಒಬ್ಬನೇ ಕುದ್ದ್‌ಕಂಡ್ ಈಗ ಹೊರಗೆ ಕರ್ಕಂಡ್ ಬಾವೋ, ಮತ್ತೆ ಬಾವೋಂತ ಕಾದ್‌ಕಂಡ್ ಕುದ್ದದೇ ಕುದ್ದದ್. ಅಣ್ಣ, ತಮ್ಮ, ಅಕ್ಕ-ತಂಗೆಕ ಯಾರೂ ಇಲ್ಲದ ಮಾಸ್ಟ್ರಿಗೆ ತಾನ್ ಒಬ್ಬನೇ, ಒಂಟಿ ಒಂಟಿಯೇಂತೇಳ್ದು, ಅಂದ್ ಲಾಯಿಕ್‌ಲಿ ಗೊತ್ತಾತ್. ಅಂತೂ ಇಂತೂ ರಾತ್ರೆ ಎರ್ಡ್ ಗಂಟೆಗೆ ಹೆಣ್ಣ್‌ನ ಹೊರಗೆ ಕರ್ಕಂಡ್ ಬಂದೊ. ಸ್ಟ್ರೆಚರ್‌ಲಿ ಮಲ್‌ಗ್‌ಸಿದ್ದ ಟೀಚರ್‌ನ ಮೋರೆ ಬಿಳ್‌ಚಿ, ಬೆಳಿ ಸೀರೆನಾಂಗೆ ಆಗುಟ್ಟು, ಹಕ್ಕಲೆ ಹೋಗಿ ಚಿನ್ನೂಂತ ಗಂಡ ಕರಿಯಕನ ಕಸ್ಟಲಿ ಕಣ್ಣ್ ಬುಟ್ಟತ್. ತಲೆನ ಪೂಜಿ ಕೈನ ತಕಂಡ್ ಮೆಲ್ಲೆ ತಟ್ಟಿ, ನಿಂಗೇನೂ ಆಕಿಲ್ಲೆ, ನಾ ಒಳೇಂತ ಹೇಳುವಾಂಗೆ ಮಾಸ್ಟ್ರ ಸಮಾಧಾನ ಮಾಡ್ದೊ. ಹಾಂಗೂ ಹೀಂಗೂ ಮೂರು ದಿನಂದ ಮೇಲೆ ಐ.ಸಿ.ಯು.ಂದ ಟೀಚರ್ನ ವಾರ್ಡ್‌ಗೆ ಕಳ್ಸಿದೊ. ಎರಡ್ ವಾರ ಆಸ್ಪತ್ರೆ ವಾಸ. ಟೀಚರ್ ಮೈಸೂರು ಆಸ್ಪತ್ರೆಗೆ ಸೇರ್ದ ಸುದ್ದಿ ಗೊತ್ತಾಗಿ, ಟೀಚರ್ನ ಹಳೆ ವಿದ್ಯಾರ್ಥಿಗ ಓಡೋಡಿ ಬಂದೊ. ಸೀನ ಬಂದಂವ ಮಕ್ಕಳ ಮನೆಗೆ ಕರ್ಕಂಡ್ ಹೋತು.

ಚೋಂದಮ್ಮ ಬಾಕನ ಬುತ್ತಿ ಕಟ್ಟಿಕಂಡೇ ಬಾತ್. ಮೈಸೂರ್‌ಲಿ ಇರುವ ಚಿನ್ನಮ್ಮ ಟೀಚರ್ ಕಲ್ಸಿದ ಮಕ್ಕ ಎಲ್ಲಾ ಸುದ್ದಿ ಒಬ್ಬಂದ ಒಬ್ಬಂಗೆ ಗೊತ್ತಾಗಿ ನಮ್ಮ ಪ್ರೀತಿನ ಟೀಚರ್ನ ನೋಡಿಕೆ ಬಂದೇ ಬುಟ್ರೊ. ಬಂದ ಮಕ್ಕಳ ಕೈಲಿ ಏನೋ ಎಲ್ಲಾ ಹಣ್ಣ್‌ಗ; ಊಟ ತಿಂಡಿಗ, ಏನೋ ಎಲ್ಲಾ. ಮಕ್ಕಳ ಕಂಡ ಟೀಚರ್‌ಗೆ ನಾ ಕಲ್ಸಿದ್ ಇಂದ್‌ಗೆ ಸಾರ್ಥಕ ಆತ್‌ಂತ ಧನ್ಯತಾ ಭಾವಲಿ ಕಣ್ಣ್ ತುಂಬಿ ಬಾತ್.

ಆಸ್ಪತ್ರೆಂದ ಡಿಸ್ಚಾರ್ಜ್ ಆಗಿ ಬಂದ ಮೇಲೆ ಚಿನ್ನಮ್ಮ ಟೀಚರ್‌ಗೆ ಒಂದು ಒಂದೂವರೆ ತಿಂಗ ಕಂಪ್ಲೀಟ್ ರೆಸ್ಟ್. ಸುರು ಸುರುಗೆ ಉಂಬಕೆ ತಿಂಬಕೂ ಕಟ್ಲ್‌ಂದ ಇಳಿಯಕೆ ಇಲ್ಲೆ. ಮಗಳು ಸುಪ್ರಿಯ ಅಂತೂ ಅಮ್ಮ ಉಂಡ ಮೇಲೆ ಕೈನ ಅಲ್ಲೇ ತೊಳ್ಸಿ, ಬಾಯಿನ ಒರ್ಸಿ, ನೀರ್ ಕುಡ್ಸಿ, ಬಾರಿ ಲಾಯಿಕ್‌ಲಿ ನೋಡಿಕಂಡಿತ್ತ್. ಮೊದ್ದು ಮಾತ್ರೆಗಳ ಸಮೆಕ್ಕೆ ಸೆರಿಯಾಗಿ ಕೊಟ್ಟ್‌ಕಂಡ್ ಎಲ್ಲಾ ಸೇವೆ ಮಾಡಿಕಂಡಿತ್ತ್. ಗಂಡನೂ ಹಿಂದೆನ ಓಡಾಟ ಎಲ್ಲಾ ಕಮ್ಮಿ ಮಾಡಿ, ಸಂಘ ಸಂಸ್ಥೆನ ಚಟುವಟಿಕೆಗಳಿಗೆಲ್ಲಾ ವಿದಾಯ ಹೇಳ್ದೊ. ಮಂಜ ಅಂತೂ ಅಮ್ಮ ಮುಂದೆನಾಂಗೆ ಓಡಾಡಿಕಂಡಿದ್ದರೆ ಸಾಕ್‌ಂತ ಏನೋ ಎಲ್ಲಾ ಸೂಪ್‌ಗಳ ತಂದ್ ಕುಡ್ಸ್‌ತಿತ್ತ್. ಹಣ್ಣ್ ಹಂಪಲ್ ರಾಶಿಯೇ ಮನೆಲಿ ಬಿದ್ದಿರ್‌ತಿತ್ತ್. ಅಮ್ಮಂಗೆ ಮಂಜಂತೇಳ್ರೆ ಮಗಳ್‌ಂದ ಒಂದು ತೂಕ ಜಾಸ್ತಿನೇ ಪ್ರೀತಿ ತಾನೆ. ಹಾಂಗೆ ಅಮ್ಮನ ಹಕ್ಕಲೇ ಕುದ್ದುಕಂಡ್ ಲೋಕಾಭಿರಾಮಾಗಿ ಏನೆಲ್ಲಾ ಕಾಲೇಜಿನ ಕತೆಗಳ ಹೇಳಿಕಂಡ್ ಅಮ್ಮ ತನ್ನ ಕಾಯಿಲೆಯ ಮರ್ತ್ ಕುಸಿಕುಸಿಯಾಗಿರ್ಲಿಂತ ಪೇಚಾಡ್‌ತಿತ್ತ್.

ಮಕ್ಕಳ ಈ ಪ್ರೀತಿ, ಕಾಳಜಿನ ಎಲ್ಲಾ ನೋಡಿಕಂಡಿರ್ಕನ ಚಿನ್ನಮ್ಮ ಟೀಚರ್‌ನ ಮನ್‌ಸ್ ಮಕ್ಕಳ ಬಾಲ್ಯದ ದಿನಗಳ ಕಡೆ ಓಡ್ತ್. ಸುರೂನ ಕೂಸು ಮಂಜ ಸ್ವರೂಪ ಹುಟ್ಟಿ, ತೌರ್‌ಂದ ಬಾಣಂತಿತನ ಮುಗ್ಸಿ ಬಂದ್ ತಿಂಗ ಆಕೆ ಮುಂದೆ ಸಾಲೆಗೆ ಹೋಕಾದ ಅನಿವಾರ್ಯತೆ. ಕೂಸುನ ನೋಡಿಕಂದು ಯಾರ್? ಯಾರ್ದೋ ಪುಣ್ಯಲಿ ಒಂದು ಗೂಡೆ ಸಿಕ್ಕಿತ್. ಅದರ ಮೇಲೆ ಕೂಸುನ ಜವಾಬ್ದಾರಿ ವಯಿಸಲೇ ಬೇಕಾದ ಸಂದರ್ಭ. ತೊಟಿಗಿಲ್ ಕೂಸು ಆಗಿರ್ಕನ ನೋಡಿಕಂಬವುಕೆ ಏನೂ ಅಂತ ಕಸ್ಟ ಇಲ್ಲೆ, ಮರ್ದ್ಕನ ಹಾಲ್ ಕುಡ್ಸಿರೆ ಆತ್. ಬಟ್ಟೆ ಚೆಂಡಿ ಮಾಡಿಕಂಡರೆ ಬದ್ಲಿಸಿರೆ ಆತ್. ಕೂಸುಗೆ ಕಾಲ್ ಹುಟ್ಟಿದ ಮೇಲೆ ಮಾತ್ರ ತುಂಬಾ ನಿಗಾ ಬೇಕು. ಕೂಸು ಆಚೆಈಚೆ ಹೋಗಿ ಬೀಳದಾಂಗೆ ನೋಡಿಕಣೊಕು. ಅದಕ್ಕೆ ಗೂಡೆ ಯಾಗೋಳು ಕೂಸುನ ಸೊಂಟಲೇ ನೇಲ್ಸಿಕಂಡ್ ಇರ್‌ತಿತ್ತ್. ಕೂಸುನ

ಹಾಲ್, ಹಾರ್ಲಿಕ್ಸ್ ಎಲ್ಲಾ ಅರ್ಧ ಕೂಸಿಗೆ ಮತ್ತೆ ಅರ್ಧ ಗೂಡೆನ ಹೊಟ್ಟೆಗೆ. ಏನ್ ಮಾಡ್ದು, ನಾವುಗೆ ಗೆತಿಯಿಲ್ಲೆ, ಅದಕ್ಕೆ ಮತಿ ಇಲ್ಲೆ ಅಷ್ಟೆ! ಮಗಳ ಪಾಡೂ ಅಷ್ಟೆ. ಅದಕ್ಕೆ ಹೇಳ್ದು ಮಕ್ಕಳಿಗೆ ಚಾಂಪ, ಚಾಮಿ ಅವ್ವ ಇರೊಕೂಂತ. ಪಿಳ್ಳಿಕಳ ಅವು ಕಣ್ಣ್‌ಲಿ ಕಣ್ಣಿಟ್ಟ್ ನೋಡಿಕಂಡಾಂಗೆ ಯಾರೂ ನೋಡ್ದುಲ್ಲೆ. ಎಲ್ಲದಕ್ಕೂ ಪುಣ್ಯ ಬೇಕೂಂತ ಟೀಚರ್ ಬೇಜಾರ್ ಮಾಡಿಕಂಡಿದ್ದೊ.

ಚಿನ್ನಮ್ಮ ಟೀಚರ್‌ಗೆ ಮಕ್ಕಂತ ಹೇಳ್ರೆ ಪ್ರಾಣ. ಎಲ್ಲಾ ಅಯ್ಯೆಕಳಿಗೂ ಹಂಗೇಂತ ಹೇಳೊನೊ. ಆದರೂ ಟೀಚರ್ ಒಂದು ಕೈ ಮೇಲ್. ಮಕ್ಕಳ ಲಾಲನೆ ಪಾಲನೆ ವಿಸೆಯಲಿ ಇವರ್‌ಂದ ಬಾಕಿದ್ದವು ಕಲಿಯೊಕು. ಮಕ್ಕಳಿಗೆ ಒಂದು ಚೂರು ಸೀತ ಆದರೆ ಹಂಞ ಮೈ ಬಿಸಿ ಕಂಡರೆ, ಆಡ್‌ಕನ, ಓಡ್‌ಕನ ಎಲ್ಲಿಯಾರ್ ಬಿದ್ದ್ ಒಂದು ಚೂರು ತಾಂಗಿರೆ ಟೀಚರ್‌ನ ಪೇಚಾಟ ನೋಡಿಕೆ ಬೊತ್ತು. 'ಕಾಗಡೆ ಇಸಿರೆ ಪಿಜಿನ್ ಹೊರ್ದು, ಮೇಲೆ ಇಸಿರೆ ಕಕ್ಕೆ ಕಚ್ಚಿಕಂಡ್ ಹೋದೂ'ಂತ ಹೇಳುವಾಂಗೆ ಮುಚ್ಚಟೆಲಿ ಸಾಂಕಿದೊ. ಮಕ್ಕಳಿಗೂ ಅಷ್ಟೇ ಅಮ್ಮಾಂತೇಳ್ರೆ ಆತ್. ಸಾಲೆಂದ ಅಮ್ಮ ಬಾದು ದೂರಂದ ಕಂಡರೆ ಸಾಕ್ , ಅಮ್ಮನ ಹಕ್ಕಲೆ ಓಡ್ದೇ, ಎಡ್‌ಗಿರೂ ಗೊತ್ತೆ, ಬಿದ್ದರೂ ಕ್ಯಾರ್ ಇಲ್ಲೆ! ಅಮ್ಮನ ಕೈ ಹಿಡ್ದ್ ಮನೆಗೆ ಕರ್‌ಕಂಡ್ ಬಾವ ಸಡಗರ ಏನ್, ಕುಸಿಯೇನ್. ಅಮ್ಮಂಗೂ ಅಷ್ಟೆ, ಮಕ್ಕಳ ಮೇಲೆನ ವಾತ್ಸಲ್ಯಂದ ನಡ್‌ದ್‌ಬಂದ ಬೊಚ್ಚೆಲ್ ಒಂದೂ ಲೆಕ್ಕಕ್ಕೆ ಇಲ್ಲೆ, ಮೋರೆ ಮೊರದಗಲ ಆತಿತ್ತ್. ಮಕ್ಕ ದೊಡ್ಡವು ಆಗಿ ಕಾಲೇಜಿಗೆ ಹೋದೊ. ಅಮ್ಮನ ಸಂಕಟ ಹೇಳಿಕೆ ಬೊತ್ತು. ಏನ್ ಮಾಡಿಕೆ ಆದೆ ಮಕ್ಕಳ ಓದ್‌ಸೊಕಲೆ. ಮಕ್ಕ ರಜೆಗೆ ಬಂದರೆ ಏನ್ ಸಂಭ್ರಮ, ಏನ್ ಕುಸಿ, ತರತರದ ಅಡಿಗೆ ಮಾಡುದೇನ್. ಮಕ್ಕಳಿಗೆ ಇಸಿದ ಬಟರ್ ಪ್ರುಟ್, ಕಿತ್ತುಳಿ, ಸಪೂಟನೆಲ್ಲಾ ತಿನ್ ಮಂಜ, ತಿನ್ ಮಗಳೂಂತ ತಿನ್ಸುದೇನ್. ಯಾರಿಗೂ ಬೇಡದ ಸಿಂಯಿ ಗೆಣ್‌ಸುನೂ ಮಕ್ಕಳಿಗೇಂತ ಉಮಿಲಿ ಹಾಕಿ ಹಾಳಾಗದಾಂಗೆ ಇಸುವ ಅಮ್ಮ ನಮ್ಮ ಚಿನ್ನಮ್ಮ ಟೀಚರ್. ರಜೆ ಮುಗ್ಸಿ ಹೋಕರೆ ಮಾಡುವ ತಿಂಡಿಗಳೋ, ಹೋಳಿಗೆ, ಕೋಡುಬಳೆ, ಚಕ್ಕುಲಿ, ಅಕ್ಕಿ ಉಂಡೆ, ಇನ್ನೂ ಏನೇನೋ. ತಿನಿ ಮಂಜಂತೇಳಿ ಮಕ್ಕಳಿಗೆ ಅಜೀರ್ಣ ಆದರೂ ಗೊತ್ತೆ, ತಿನ್ಸುದೇ ತಿನ್ಸುದು. ಹೋಕನ ಎಲ್ಲಾ ತಿಂಡಿಗಳ ಕಟ್ಟಿ ಕಳ್ಸುದು ಹಾಸ್ಟೆಲ್‌ಲಿ ತಿಂಬಕೆ. ಪಾನಿ ಪೂರಿ, ಗೋಬಿ ಮಂಚೂರಿಂತ ಏನೋ ಎಲ್ಲಾ ಹಾಳ್‌ಮೂಳ್ ತಿಂಬ ಈಗನ ಮಕ್ಕ ಅಮ್ಮನ ಈ ಹಳೆ ತಿಂಡಿಗಳ ತಿಂದವೇನೋ, ತೆಗ್ದ್ ಇಟ್ಟವೆನ ದೇವ್ರಿಗೇ ಗೊತ್ತು!?

ಅಂತೂ ಚಿನ್ನಮ್ಮ ಟೀಚರ್ ಉಸಾರಾಗಿ ಸಾಲೆಗೆ ಹೋಕೆ ಸುರು ಮಾಡ್ದೊ. ಗಳಿಕೆ ರಜೆ ಎಲ್ಲಾ ಮುಗ್ದ್, ಸಂಬಳ ಇಲ್ಲದ ರಜೆ ಎಸ್ಟ್ ಹಾಕುದು. ಹೇಂಗಾರ್ ಸಾಲೆಗೆ ಹೋನೇಂತ ಯಾರ ಮಾತೂ ಕೇಳದೆ ಹೋಗಿಯೇ ಬುಟ್ಟೊ. ಸುರುಸುರುಗೆ ಪಾಠ ಮಾಡಿಕೆ ಕಸ್ಟ ಕಂಡರೂ ಮತ್ತೆ ಮತ್ತೆ ಹೇಂಗೋ ಸುದಾರ್ಸ್ಟಿದ್ದೊ. ಗ್ರಾಚಾರಕ್ಕೆ ಮಕ್ಕಳ ಗಣತಿ ಕೆಲ್ಸ ಬರೊಕೊ. ಮನೆ ಮನೆ, ತೋಟ ಗುಡ್ಡೇಂತ ಹತ್ತಿ, ಇಳ್ದ್, ತಿರ್ಗುದು ತುಂಬಾ ಕಸ್ಟ ಆತಿತ್ತ್. ಏನ್ ಮಾಡ್ದು, ಟೀಚರ್‌ಂತ ಹೇಳ್ದ ಮೇಲೆ ಜನಗಣತಿ, ದನಗಣತಿ ಎಲ್ಲಾ ಇರ್ದೇ ತಾನೆ. ಆ ವರ್ಸದ ಸಾಲೆ ಮುಕ್ಕಂಡ್ ಬಾತ್‌ಂತ ಆಕನ ಟೀಚರ್‌ನ ಪುನಾ ಕೆಡ್‌ಗಿತ್. ಮತ್ತೆ ಮೈಸೂರಿಗೆ ಓಟ, ಆಸ್ಪತ್ರೆ ವಾಸ. ಮಾತಾಡಿಕೂ ಕಸ್ಟಪಡುವಸ್ಟ್ ಎದೆ ಬೇನೆ. ನನ್ನ ಜೀವನ ಕಣ್ಣೀರ್ಲೇ ಕೈತೊಳೆವಾಂಗೆ ಆತಲೇಂತ ಟೀಚರ್‌ನ ಸಂಕಟ. ಗಂಡ ಮಕ್ಕ ಎಲ್ಲಾ ಎಸ್ಟೇ ಸಮಾದಾನ ಹೇಳ್ರೂ ಪ್ರೋಜನ ಇಲ್ಲೆ. 'ನಿಮ್ಮನೆಲ್ಲಾ ನಡುನೀರ್‌ಲಿ ಕೈ ಬುಟ್ಟ್ ಹೋಗುವಾಂಗೆ ಆತಲ್ಲಾ'ಂತ ಟೀಚರ್ನ ಗೋಳಾಟ. 'ನಿಂಗೆ ಏನೂ ಆಕಿಲ್ಲೆ, ಎಂತೆಂತಾ ಕಾಯಿಲೆಗ ಗುಣ ಆದೆ, ಇದ್ ಯಾವ ಲೆಕ್ಕ, ನೀ ಮುಖ್ಯ ಮನ್‌ಸ್‌ನ ಗಟ್ಟಿ ಮಾಡಿಕಣೊಕು. ಸರೀರದ ಕಾಯಿಲೆಗಿಂತ ಮನ್‌ಸ್‌ನ ಕಾಯಿಲೆ ತುಂಬಾ ಹಾಳ್. ನಾ ಖಂಡಿತಾ ಗುಣ ಆನೇಂತ ಧೈರ್ಯ ತಕಂಡರೆ, ಸರೀರಕ್ಕೆ ಮೊದ್ದು ಹಿಡ್ದದೆ, ಬೇಗ ಗುಣ ಆದಿಯಾ'ಂತ ಪೆಮ್ಮಯ್ಯ ಮಾಸ್ಟ್ರ ಹೆಣ್ಣ್‌ನ ಸಮಾದಾನ ಮಾಡ್ದೊ. 'ಆತಪ್ಪಾ ನೀವು ಹೇಳ್ದಾಂಗೆ ಕೇಳ್ನೆ'. ಮನ್‌ಸ್‌ನ ಎಸ್ಟ್ ಗಟ್ಟಿ ಮಾಡಿಕಂಡರೂ ನನ್ನ ಸಂಕಟನ ಒಮ್ಮೊಮ್ಮೆ ತಡಿಯಕೆ ಆಲೆ, ಏನ್ ಮಾಡ್ದು ಹೇಳಿ, ನಾ ಪಡ್ಕಂಡ್ ಬಂದದ್. ನನ್ನಿಂದಾಗಿ ನೀವುಗೂ ಶನಿದೆಸೆ ಕಂಡದೆ'ಂತ ಮರ್ಗಿಕೆ ಸುರು ಮಾಡ್ದೊ ಟೀಚರ್. 'ಕಸ್ಟಲಿ ಇದ್ದವುಕೆ ಧೈರ್ಯ ಹೇಳಿ, ಕಣ್ಣೀರ್ ಒರ್ಸುತ್ತಿದ್ದ ನೀನೆ ಹೀಂಗೆ ಕಂಗಾಲಾದರೆ ಹೇಂಗೆ'ಂತ ಕೇಳಿ, ಟೀಚರ್ನ ಕೈನ ಹಿಡ್‌ಕಂಡ್ ಮೆಲ್ಲೆ ಮೆಲ್ಲೆ ತಟ್ಟಿ ಸಮಾದಾನ ಮಾಡ್‌ತ್ತಿದ್ದೊ ಮಾಸ್ಟ್ರ!

ಚಿನ್ನಮ್ಮ ಟೀಚರ್ ವಾಪಾಸ್ ಆಸ್ಪತ್ರೆ ಸೇರ್ದ ಸುದ್ದಿ ಕಾಡ್ಗಿಚ್ಚಿನಾಂಗೆ ಊರೆಲ್ಲಾ ಹರ್ಡಿತ್. 'ಅಯ್ಯೋ ಪಾಪ ಎಂತಾ ಟೀಚರ್‌ಗೆ ಏನಾತ್'ಂತ ಎಲ್ಲವೂ ಮರ್ಕ ಪಡೊವೇ. 'ಚಿನ್ನನ ಕುಲುಮೆಲಿ ಹಾಕಿ ಕಾಸಿ ಅಪ್ಪಟ ಮಾಡ್ದಾಂಗೆ ಈ ನಮ್ಮ ಚಿನ್ನಮ್ಮ ಟೀಚರ್‌ಗೆ ಎಸ್ಟ್ ಕಸ್ಟ್ ಕೊಟ್ಟೆದಪ್ಪ ದೇವ್ರೂ'ಂತ ಸಾಲೆನ ಹೆಡ್ ಮಾಸ್ಟ್ರ ಸುಬ್ರಮಣಿ ಹೇಳಿಕಂಡೊ. ಮಕ್ಕಳಿಗೆಸಾನ್ ಒಂದು ನೂಲು, ತಾಯಿತ

ಕಟ್‌ಸದೆ ಇದ್ದ ಪೆಮ್ಮಯ್ಯ ಮಾಸ್ಟ್ರ, ಹೆಣ್ಣ್ ಒಮ್ಮೆ ಉಸಾರಾಗಿ ಬಂದರೆ ಸಾಕ್‌ಂತ ಇದ್ದ ದೇವ್ರುದಿಂಡರಿಗೆಲ್ಲಾ ಹರಿಕೆ ಹಾಡ್ ಹೇಳಿಕಂಡೊ. ದುಡ್ಡು ಎಸ್ಟ್ ಕರ್ಚಾದರೂ ಪರ್‌ವಾಯಿಲ್ಲೇಂತ ಟೀಚರ್ನ ಮೇಜರ್ ಹಾರ್ಟ್ ಆಪರ್ಸನ್‌ಗೆ ಸಿದ್ದತೆ ಆತ್. 'ಓಪನ್ ಹಾರ್ಟ್ ಸರ್ಜರೀ'ಂತ ಹೇಳ್ದೊ ಡಾಕ್ಟ್ರ. ಅದಕೆ ಬೇಕಾದ ದುಡ್ಡ ಹೊಂದುಸೊಕು. ಐದಾರ್ ಲಕ್ಷ ಆದೂಂತ ಡಾಕ್ಟ್ರ ಹೇಳ್‌ಕನ ಮಾಸ್ಟ್ರ ಹಾರ್ಟೇ ಪೈಲ್ ಆಗದ್ದ್ ಪುಣ್ಯ!? ಏನ್ ಮಾಡ್ದು, ಸಾಲನೋ, ಸೋಲನೋ ದುಡ್ಡ ಹೊಂದಸೊಕೇ. ವಿಸಯ ಗೊತ್ತಾದ ಟೀಚರ್ 'ನಂಗಾಗಿ ಆಸ್ತಿ ಪಾಸ್ತಿ ಅಡುಗಿಡು ಇಸಿ ಸಾಲ ಗೀಲ ಮಾಡ್ದು ಬೇಡ. ನಿಮ್ಮ, ಮಕ್ಕಳ ಪುಣ್ಯ ಇದ್ದರೆ ಒಳ್ಳೆನೆ, ಅಂತಾ ದೊಡ್ಡ ಆಪರ್ಸನ್ ಬೇಡವೇ ಬೇಡ, ಈ ಕಾಯಿಲೆಗೆ ಬೇರೆ ಏನಾದರ್ ಮೊದ್ದು ಇದ್ದರೆ ಕೊಡಿಕೆ ಹೇಳಿ. ಸಾಲ ಸೋಲ ಮಾಡಿ ಆಪರ್ಸನೆ ಮಾಡ್ಸಿ, ಇತ್ತ ಜೀವನೂ ಇಲ್ಲ, ಅತ್ತ ದುಡ್ಡನೂ ಇಲ್ಲೇಂತ ಆದು ಖಂಡಿತಾ ಬೇಡಂತ ಹೇಳ್ದೊ. ಆಗ ಮಾಸ್ಟ್ರ 'ನೋಡೊನೊ, ನಾ ಡಾಕ್ಟ್ರ ಕಂಡ್ ಮಾತಾಡಿ ನೋಡ್ನೆ, ಏನ್ ಮಾಡ್ದೂಂತ ಕೇಳ್ನೆ. ನೀ ಆ ಬಗ್ಗೆ ತಲೆ ಬೆಚ್ಚ ಮಾಡಿಕಂಬಡ'ಂತ ಸಮಾದಾನ ಮಾಡ್ದೊ.

ಚಿನ್ನಮ್ಮ ಟೀಚರ್ ವಾಪಾಸ್ ಆಸ್ಪತ್ರೆ ಸೇರ್ದ ಸುದ್ದಿ ಗೊತ್ತಾಗಿ ಅಕ್ಕ ತಂಗೆಕ, ಅಣ್ಣ ತಮ್ಮಂದರ್, ಅತ್ತಿಗೆ ನಾದಿನಿಕ ಎಲ್ಲಾ ಓಡೋಡಿ ಬಂದೊ. ದೊಡ್ಡಣ್ಣ ಅಂತೂ ಪ್ರೀತಿನ ತಂಗೆಗೆ ಏನೂ ಮಾಡಿಕು ರೆಡಿಯಿತ್ತ್. ಅಕ್ಕನ ಮಂಜ ಹರಿನೂ ಹೆತ್ತವ್ವಗಿಂತ ಹೆಚ್ಚಾಗಿ ನೋಡಿಕಂತಿತ್ತ್. ಮಿಲಿಟ್ರಿಲಿ ಇದ್ದ ತಮ್ಮ ರಜೆಲಿ ಊರಿಗೆ ಹೊರ್‌ಟಂವ, ಮಂಗಳೂರಿಗೆ ಮಾಡ್ದ ಫ್ಲೈಟ್ ಟಿಕೆಟ್ ಕ್ಯಾನ್ಸಲ್ ಮಾಡಿ, ಅಕ್ಕನ ನೋಡಿಕೆ ಸೀದಾ ಬಾತ್. ಆಸ್ಪತ್ರೆಲಿ ಅಕ್ಕನ ಹಕ್ಕಲೆ ನಾ ಇದ್ದನೆ, ನಾ ಇದ್ದನೆಂತ ಎಲ್ಲವೂ ಹೇಳೊವೆ. ಒಂದು ತಂಗೆ ಅಂತೂ ನಾ ಆಸ್ಪತ್ರೆಲಿ ಇರಿಕೇಂತಲೇ ಹದ್ನೈದ್ ದಿನ ಇ.ಎಲ್. ಹಾಕಿ ಬಂದೊಳೆ. ಆ ಮೇಲೆ ಬೇಕಾರೆ ನೀವ್ಯಾರಾರ್ ಇರಿ, ಈಗ ನಾನೇಂತ ಹೇಳ್ತ್. ಈ ತನ್ನ ಬಂಧು ಬಳಗದವರ ಮಾತ್ ಕೇಳ್ದ ಟೀಚರಿಗೆ ನಾ ತುಂಬು ಸಂಸಾರಲಿ ಹುಟ್ಟಿದ್ ಸಾರ್ಥಕ, ನನ್ನ ಕಸ್ಟಕೆ ಎಲ್ಲವೂ ಒಳೋಂತ ಮನ್‌ಸ್‌ಲೇ ಕುಸಿ ಪಟ್ಟೊ. ಇತ್ತ ಮಾಸ್ಟ್ರ, ದುಡ್ಡು ಇದ್ದರೆ ನಾಲ್ಕೈದ್ ನರ್ಸ್‌ಗ ಬೇಕಾರೂ ಪೇಸಂಟ್ ಸುತ್ತ ನಿತ್‌ಕಂಬೊ ಯಾರೂ ಬೇಕೂಂತ ಇಲ್ಲೇಂತ ಹೇಳುವ ಈಗನ ಕಾಲಲಿ, ನನ್ನ ಹೆಣ್ಣ್ ಪುಣ್ಯಾತ್‌ಗಿತ್ತಿ, ಅದರ ಯಾರೂ ಬುಟ್ಟ್ ಹಾಕಿತ್ಲೆ, ಅದ್ ಮಾಡ್ದ ಉಪಕಾರ, ಅದರ ಮನ್‌ಸ್‌ನ

ಎಲ್ಲವೂ ನೆನ್‌ಕಂಡೊ ಯಾರಿಗೆ ಕಸ್ಟ ಇರ್ಲಿ ಅವರ ಹಕ್ಕಲೆ ಕರಿಯಲಿ ಬುಡಲಿ ಹೋತಿದ್ದದ್, ಸಾವುನ ಸುದ್ದಿ ಕಕ್ಕೆ ಕಾಲ್‌ಂದ ಗೊತ್ತಾದರೂ ಸಾಕ್‌ಂತ ಓಡ್‌ತ್ತಿದ್ದದ್ ಎಲ್ಲಾ ನೆನ್ನಿಕಂಡೊ.

ಹೆಣ್ಣ್ ಏನೇ ಹೇಳಲಿ, ಅದಕ್ಕೆ ಆಪರ್ಸನ್ ಮಾಡ್ಸುದು ಮಾಡ್ಸುದೆ, ದುಡ್ಡು ಎಸ್ಟ್ ಖರ್ಚಾದರೂ ಪರ್‌ವಾಇಲ್ಲೆಂತ ಗ್ರೇಸಿಕಂಡ್, ಐದಾರ್ ಲಕ್ಷ ಹೆಂಗೆ ಹೊಂದುಸುದೂಂತೇಳುವ ಲೆಕ್ಕಚಾರಲಿ ಮುಳುಗಿದೊ. ಕಾಫಿ, ಸಣ್ಣ ಮೆಣ್ಸ್ ಮಾರಿರೆ ಈಗನ ರೇಟ್‌ಲಿ ಒಂದು ಒಂದೂವರೆ ಲಕ್ಷ ಏನೋ ಸಿಕ್ಕುದು. ಬೇಂಕ್ ಬೇಲೆನ್ಸ್ ಒಂದರಸ್ಟ್ ಇರ್ದೋ ಏನೊ. ಒಳ್‌ದ ದುಡ್ಡುಗೆ ಏನ್ ಮಾಡ್ದು; ಏನಾರ್ ಮಾಡೊಕೆ, ಮನೇಲಿದ್ದ ಚಿನ್ನನ ಬ್ಯಾಂಕ್‌ಲಿ ಅಡು ಇಸುದು, ಸಾಲದ್ದರೆ ಲ್ಯಾಂಡ್ ಮೋರ್ಗೇಜ್ ಬ್ಯಾಂಕ್‌ಲಿ ತೋಟದ ಲೆಕ್ಕಲಿ ಎಸ್ಟ್ ಸಿಕ್ಕಿದೆಯೋ ನೋಡ್ದೂಂತ ಮನ್‌ಸ್‌ಲೇ ನಿಗಂಟ್ ಮಾಡಿಕಂಡೊ. ಹೆಣ್ಣ್‌ಗೆ ಸಾಲ ಮಾಡುವ ಸಂಗ್ತಿ ಗೊತ್ತಾಕೆ ಆಗದ್. ಒಂದು ವೇಳೆ ಗೊತ್ತಾದರೆ ಸಾಲಸೋಲ ಮಾಡಿ ಮಕ್ಕಳ ಕೈಗೆ ಚಿಪ್ಪಿ ಕೊಟ್ಟರೆನೋಂತ ಕೇಳಿ ರಂಪ ಮಾಡ್ದೂಂತ ಗ್ರೇಸಿಕಂಡಿದ್ದೊ. 'ಮನೆ ಕಡೆ ಹಂಞ ಕೆಲ್ಸ ಉಟ್ಟು, ಆಸ್ಪತ್ರೆಲಿ ಖರ್ಚಿಗೆ ಹಂಞ ದುಡ್ಡು ಬೇಕು ಹಂಗಾಗಿ ಮನೆಗೆ ಹೋಗಿ ಬನ್ನೇ'ಂತ ಹೆಣ್ಣ್‌ನ ಒಪ್ಪಿಸಿದೊ. ಟೀಚರ್ 'ಹೋಗಿ ನಿಮ್ಮೆಲ್ಲಾ ಕೆಲ್ಸ ಮುಗ್ಸಿಕಂಡ್ ಆರಾಮಲಿ ಬನ್ನಿ ನನ್ನ ಹಕ್ಕಲೆ ನನ್ನ ತಂಗೆ ಉಟ್ಟು, ನೀವುಗೇನೂ ಚಿಂತೆ ಬೇಡ'ಂತ ಹೇಳ್ತ್.

ಪೆಮ್ಮಯ್ಯ ಮಾಸ್ಟ್ರ ಮನೆಗೆ ಬಂದ ದಿನನೇ ಕಾಪಿ, ಮೆಣ್ಸ್ ಮಾರ್ದೊ. ಮರ್ದಿನ ಚಿನ್ನನ ಬ್ಯಾಂಕಿಗೆ ತಕಂಡ್ ಹೋಗಿ ಅಡು ಇಸಿದೊ. ಆದರೂ ಪೂರಾ ದುಡ್ಡು ಆದುಲ್ಲೆ; ಯಾರೊಟ್ಟಿಗೂ ಸಾಲಗೀಲ ಕೇಳುವ ಜಂಬರ ಬೇಡ; ನೆಂಟ್ರೊಟ್ಟಿಗೆ ಕೇಳ್ರೆ ಬೇಕಾದ್ದು ಸಿಕ್ಕುದು; ಅಕ್ಕಂಗಾಗಿ ಧರ್ಮಕ್ಕೆ ದುಡ್ಡು ಕೊಡೊವೂ ಒಳೊ ಆದರೆ ನನ್ನ ಹೆಣ್ಣ್‌ನ ಕಾಯಿಲೆಗೆ ನಾನೇ ಏನಾರ್ ಮಾಡೊಕು. ನಾಳೆ ಹೋಗಿ ತೋಟದ ಲೆಕ್ಕಲಿ ಸಾಲ ತೆಗಿದೇಂತ ನಿಗಂಟ್ ಮಾಡ್ದೊ. ಲ್ಯಾಂಡ್ ಮೋರ್ಗೇಜ್ ಬ್ಯಾಂಕಿಗೆ ಹೋದರೆ ತೋಟದ ಆರ್.ಟಿ.ಸಿ. ತನ್ನಿ, ಕ್ರಯಪತ್ರ ತನ್ನಿ, ಅದ್ ಬೇಕು, ಇದ್ ಬೇಕೂಂತ ಎರ್ಡ್ ದಿನ ಕೋಣ್‌ಸಿದೊ. ಅಂತೂ ಇಂತೂ ಒಂದು ಲಕ್ಷ ಸಾಲ ಸಿಕ್ಕಿತ್. . . . ನಾಳೆನೆ ಮೈಸೂರಿಗೆ ಹೋಗಿ, ಬೇಕಾದ ದುಡ್ಡು ಕಟ್ಟಿ, ನಾಡ್ದೇ ಹೆಣ್ಣ್‌ನ ಆಪರ್ಸನ್ ಮಾಡ್ಸುದೇಂತ ಗ್ರೇಸಿಕಂಡ್ ಮನೆಗೆ ಬಾಕನ ಮನೆಲಿ ಕೆಲವು ನೆಂಟ್ರ್‌ಗ, ನೆರೆಕರೆವು ಒಳೊ. ಎಲ್ಲರ ಮೋರೆ ಬಾಡಿಕಂಡ್

ಕಂಡದೆ, ಹೋದಾಂಗೆ ಒಬ್ಬ ಲೋನ್ ಸಿಕ್ಕಿತ ಮಾಸ್ತ್ರೇಂತ ಕೇಳ್ತ್. ಮತ್ತೊಬ್ಬ ಟೀಚರ್‌ಗೆ ಹಂಞಾ ಸೀರಿಯಸ್ ಗಡಾಂತ ಹೇಳ್ತ್. ಹೆಣ್ಣ್‌ಗೆ ಸೀರಿಯಸ್‌ಂತ ಕೇಳ್ದ ಮಾಸ್ತ್ರ ಗಡಿಬಿಡಿಲಿ ಕಾರ್ ಮಾಡಿಕಂಡ್ ಮೈಸೂರಿಗೆ ಹೋಕೆ ರೆಡಿಯಾಕನ, ನೆರ್ಮನೆ ಕಾಳಪ್ಪ ಬಂದ್, ಮಾಸ್ತ್ರ ಕೈ ಹಿಡ್‌ಕಂಡ್ 'ಮಾಸ್ತ್ರೇ ಟೀಚರ್‌ನ ಕಾಲ ಕಳ್ತ್ ಗಡ, ಎಲ್ಲಾ ಅವನ ಇಚ್ಛೆ, ಸಮಾದಾನ ಮಾಡಿಕಣೀ'ಂತ ಹೇಳ್ತ್. ಏನ್ ಸಮಾದಾನ ಮಾಡಿಕಂದು, ಎರ್ಡ್ ವರ್ಸಂದ ಹೆಣ್ಣ್‌ನೊಟ್ಟಿಗೆ ಇದ್ದ್ ಎಲ್ಲಾ ಸೇವೆನೂ ಮಾಡಿರೂ ಅಕೇರಿಗೆ ಅದ್ ಜೀವ ಬುಡಿಕಾಕನ ನಾ ಹಕ್ಕಲೆ ಇತ್ತ್‌ಲೆಲೆ, ಕೊನೆ ಗಳಿಗೆಲಿ ಬಾಯಿಗೆ ನೀರ್ ಕೊಡುವ ಋಣನೂ ಇಲ್ಲೆ; ನನ್ನ ದೇವ್ರು ಬೇಗ ಕರ್ಸಿಕಂಡವೇಂತೇಳ್ದು ಅದರ ಅಂತರಾತ್ಮಕ್ಕೆ ಗೊತ್ತಾತೋ ಏನೋ ಅದಕ್ಕೇ ನಂಗೆ ಒಮ್ಮೆಲೇ ಆಘಾತ ಆದುಬೇಡಾಂತ ಮನೆಗೆ ಹೋಗಿ ಎಲ್ಲಾ ಕೆಲ್ಸ ಮಾಡಿಕಂಡ್ ಆರಾಮಲಿ ಬನ್ನೀಂತ ಆ ಪುಣ್ಯಾತಗಿತ್ತಿ ಹೇಳ್ತೋಂತ ಗ್ರೇಸಿಕಂಡ್ ತಲೆಗೆ ಕೈ ಹೊತ್ತು ಕುಸ್ದ್ ಕುದ್ದೊ ಪೆಮ್ಮಯ್ಯ ಮಾಸ್ತ್ರ. ಆಗ ನೆರ್ಮನೆ ಟಿ.ವಿ.ಲಿ 'ನಿನ್ನ ಪ್ರೇಮದ ಪರಿಯ ನಾನರಿಯೆ...... ಗಿ'ಂತ ಕೆ.ಎಸ್. ನರಸಿಂಹ ಸ್ವಾಮಿಯವರ ಪದ್ಯ ಕೇಳ್ತಾ ಇತ್ತ್ !!!

* * * * *



**ಶ್ರೀ ಪಿ.ಜಿ.ಅಂಬೆಕಲ್ (ಪುಟ್ಟಣ್ಣ ಗೌಡ ಅಂಬೆಕಲ್)**

ಇವು ದ.ಕ. ಜಿಲ್ಲಾ ಸುಳ್ಯ ತಾಲ್ಲೂಕು ಅಮರ ಮುಡ್ನೂರು ಗ್ರಾಮದ ಪೈಲಾರ್‌ಲಿ ದಿ: ವೆಂಕಪ್ಪ ಗೌಡ ಮತ್ತು ರಾಮಕ್ಕ ದಂಪತಿಗೆ ದಿನಾಂಕ 21-07-1944ರಂದ್ ಹುಟ್ಟಿದೊ.

ಇವು ಮಡಿಕೇರಿ ಹತ್ರದ ಚೆಟ್ಟಳ್ಳಿ ಹೈಸ್ಕೂಲ್‌ಲಿ ಮುಖ್ಯ ಶಿಕ್ಷಕರಾಗಿ ಸೇವೆ ಮಾಡಿ 2002ರ್‌ಲಿ ನಿವೃತ್ತರಾದವು. ಶಿಕ್ಷಕರಾಗಿರ್ಕನೆ ಸಾಹಿತ್ಯಪರ ಚಟುವಟಿಕೆಗಳ್ಲಿ ತೊಡಗ್ಸಿಕಂಡ್ ಕೊಡಗು ಜಿಲ್ಲಾ ಲೇಖಕ ಮತ್ತು ಕಲಾವಿದರ ಬಳಗದ ಪ್ರಧಾನ ಕಾರ್ಯದರ್ಶಿಯಾಗಿ, ಕಾರ್ಯಾಧ್ಯಕ್ಷರಾಗಿ, ಕೊಡಗು ಜಿಲ್ಲಾ ಪ್ರೌಢ ಶಾಲಾ ಮುಖ್ಯ ಶಿಕ್ಷಕರ ಸಂಘದ ಕಾರ್ಯದರ್ಶಿಯಾಗಿ ಕಾರ್ಯ ನೀಸಿದವು. ಸಾಹಿತ್ಯಾಸಕ್ತರ್‌ನ ಕರ್ದ್ ಅವ್ಕೆ ವೇದಿಕೆ ಕೊಟ್ಟ್ ಬೆನ್ನ್ ತಟ್ಟಿದವು. ಇವು ಓರ್ವ ಪ್ರತಿಭಾವಂತ ಶಿಕ್ಷಕ. ಕಲಾರಾಧಕ, ನಟನಾ ಕೌಶಲ್ಯ ಅವರ್ಲಿ ಇತ್ತ್. ಅನೇಕ ನಾಟಕಗಳ್ಲಿ ಮುಖ್ಯ ಪಾತ್ರ ವಹಿಸ್ತಿದ್ದೊ.

ಶಿವರಾಮ ಕಾರಂತರ ಒಡನಾಡಿಯಾಗಿದ್ದ ಅಂಬೆಕಲ್‌ನವು ಕವಿ ಮನದ ಸರಳ ಜೀವಿ. ಶಿಕ್ಷಕ ಕೆಲ್ಸನ ತುಂಬ ಗೌರವಂದ ಕಂಡವು. ಹಳ್ಳಿ ಬೊದ್ಕ್‌ನ ಕುಸಿಪಟ್ಟವು. ಈಗ ಬೆಂಗ್ಳೂರ್ ಮಹಾನಗರಲಿ ವಿಶ್ರಾಂತ ಜೀವನ ಮಾಡ್ತೊಳೊ. ಅವರ ಹಳ್ಳಿ ಜೀವನದ ಅನುಭವ, ಶಿಕ್ಷಕ ಕೆಲ್ಸದ ಅನುಭವ, ಸಂಸಾರದ ಜಂಜಾಟದ ಸಿಂಹಿ-ಕಂಹಿಗಳ್ನ ಇದೀಗ ತಮ್ಮ ಅನುಭವದ ಜೋಳಿಗೆಂದ ಹೊರ ತೆಗ್ದವು. ತಮ್ಮ ಅನುಭವಕ್ಕೆ ಕತೆನ ರೂಪ ಕೊಟ್ಟ್ ಸಾಹಿತ್ಯಾಸಕ್ತ ಓದುಗರ ಕೈಮೇಲೆ ಇಸಿದವು. ಹೆಂಗಾರ್ ಓದಿಕಣಿ, ನಿಮ್ಮ ಅನುಭವನೂ ಹೋಲ್ಸಿಕಣಿತ 'ತಬ್ಲಿ ಮಂಜ'ನ ನಾಡ್‌ಗೆ ಅರ್ಪಿಸಿದವು. ಎಂದೋ ಅವಕಾಶ ಸಿಕ್ಕಕಾಗಿತ್ತ್. ಇರ್ಲಿ, ಈಗಾರೂ ಸಿಕ್ಕಿತಲ್ಲಾ ಅದ್ ನಮ್ಮ ಪುಣ್ಯ! ಇಂತ ಒಂದ್ ಅಮೂಲ್ಯ ಕಾಣಿಕೆನ ಅರೆಬಾಸೆ ಸಾಹಿತ್ಯ ಲೋಕಕೆ ಕೊಟ್ಟ ಶ್ರೀ ಪಿ.ಜಿ. ಅಂಬೆಕಲ್‌ನವುಕೆ ಅಭಿನಂದನೆಗ.

ಕತೆಗಾರ ಅಂಬೆಕಲ್‌ನವು ಎಲ್ಲೂ ಉದ್ವೇಗಕ್ಕೆ ಒಳಗಾಗದಂಗೆ ಎಚ್ಚರಂದ, ತಾಳ್ಮೆಂದ ಬರ್ದೊಳೊ. ಕತೆ ಪೋಣ್ಸಿದ ರೀತಿ ಅದ್ಭುತ. ಇವರ್‌ಂದ ಇನ್ನಷ್ಟ್ ಬರವಣಿಗೆ ಹೊರಗೆ ಬರ್ಲಿತ ನಾ ಆಸೆ ಪಟ್ಟನೆ.

– ಬಾರಿಯಂಡ ಜೋಯಪ್ಪ

Prtd @ Sri Krishna Printers, Mdk. Mob : 94481 35592

